# ಅಧ್ಯಾಯ 8
# ಕ್ರಿಸ್ತನ ಸೇವೆಯ ಶ್ರೇಷ್ಠತೆ

8ನೇ ಅಧ್ಯಾಯದ ಮೊದಲ ವಚನಗಳು 4:14-7:28ರಲ್ಲಿ ಚರ್ಚಿಸಲಾದ ಮಗನ ಯಾಜಕತ್ವದ ಹುದ್ದೆಯಿಂದ ಸ್ವಲ್ಪ ವ್ಯತ್ಯಾಸವಾದ, ಆತನ ಅತ್ಯುತ್ಕೃಷ್ಟವಾದ ಯಾಜಕತ್ವದ ಸೇವೆಯ ಕಡೆಗೆ ತಿರುಗಿಕೊಳ್ಳುತ್ತವೆ (ವಚನಗಳು 1-5). ಇಬ್ರಿಯರಿಗೆ ಪತ್ರಿಕೆಯು ನಮ್ಮ ಮನಹಾಯಾಜಕನಾಗಿ ಕ್ರಿಸ್ತನ ಶ್ರೇಷ್ಠತೆಯ ಕುರಿತ ಈ ಸತ್ಯಗಳನ್ನು ಕಲಿಸುತ್ತದೆ:

1. ಕ್ರಿಸ್ತನು ಮೆಲ್ಕಿಜೆದೇಕನ ಕ್ರಮದಲ್ಲಿ ದೇವರಿಂದ ಕರೆಯಲ್ಪಟ್ಟನು (5:10).
2. ಒಂದು ದೈವಿಕ ಆಣೆಯು ಕ್ರಿಸ್ತನನ್ನು ಹುದ್ದೆಯಲ್ಲಿಟ್ಟಿತು (7:20-22).
3. ಆತನ ಮಹಾಯಾಜಕತ್ವವು ಶಾಶ್ವತವಾದದ್ದು (7:23, 24).
4. ಆತನ ಕೆಲಸವು ಪೂರ್ಣವಾಗಿ ಪರಿಣಾಮಕರವಾದದ್ದು (7:25).
5. ಆತನ ವೈಯಕ್ತಿಕ ಅರ್ಹತೆಗಳು ಆತನನ್ನು ಯಾವಾಗಲೂ ನಮ್ಮ ಮಹಾ ಯಾಜಕ ನಾಗಿ ಸೇವೆ ಮಾಡುವದಕ್ಕೆ ಶಕ್ತಗೊಳಿಸಿದವು (7:26-28).
6. ಆತನು ಪರಲೋಕದ ದೇವಾಲಯದಲ್ಲಿ ಸೇವೆ ಮಾಡುತ್ತಾನೆ, ಹೊರತು ಭೂಲೋಕದ ದೇವಾಲಯದಲ್ಲಿ ಅಲ್ಲ (8:1-5).
7. ಆತನು ಹೊಸ ಒಡಂಬಡಿಕೆಯನ್ನು ಕೊಡುವದರಲ್ಲಿ ತೊಡಗಿಸಿಕೊಂಡಿದ್ದನು, ಅದು ನಮ್ಮ ಪಾಪಗಳು ನಮಗೆ ವಿರುದ್ಧವಾಗಿ ಜ್ಞಾಪಕಪಡಿಸಿಕೊಳ್ಳಲಿ ಕ್ಕಾಗದಂತೆ ನಮ್ಮ ಎಲ್ಲಾ ಪಾಪಗಳಿಗೆ ಸಂಪೂರ್ಣ ಕ್ಷಮಾಪಣೆಯನ್ನು ಅನುಗ್ರಹಿಸುತ್ತದೆ (8:6-13).

ನಮ್ಮ ಮಹಾಯಾಜಕನ ಸೇವೆಯ ಗುಣಸ್ವಭಾವಗಳಾವವು?

## ಆತನ ಹೊಸ ಸೇವೆ (8:1-5)

### ನಿಜವಾದ ದೇವದರ್ಶನಗುಡಾರದಲ್ಲಿ ಒಬ್ಬ ಸೇವಕ (8:1, 2)

**1ನಾವು ಈಗ ಹೇಳುವ ಸಂಗತಿಗಳಲ್ಲಿ ಮುಖ್ಯವಾದ ಮಾತೇನಂದರೆ- ಪರಲೋಕದೊಳಗೆ ಮಹತ್ವವುಳ್ಳ ದೇವರ ಸಿಂಹಾಸನದ ಬಲಗಡೆಯಲ್ಲಿ ಆಸನಾರೂಢನಾದಂಥ ಮಹಾಯಾಜಕನು ನಮಗಿದ್ದಾನೆ. 2ಈತನು ಪವಿತ್ರಸ್ಥಾನದಲ್ಲಿ ಅಂದರೆ ಮನುಷ್ಯನು ಹಾಕದೆ ಕರ್ತನೇ ಹಾಕಿದ ನಿಜವಾದ ದೇವದರ್ಶನಗುಡಾರದಲ್ಲಿ ಯಾಜಕೋದ್ಯೋಗ ನಡಿಸುವವನಾಗಿದ್ದಾನೆ.**

**ವಚನ 1. ಮುಖ್ಯವಾದ ಮಾತೇನಂದರೆ** (κεφάλαιος, *kephalaios*) ಎಂಬ ಪದವು "ತಾತ್ಪರ್ಯ," "ಸಾರಾಂಶ," ಅಥವಾ "ಮುಖ್ಯ ವಿಷಯ" ಎಂದರ್ಥವನ್ನು ಕೊಡಬಲ್ಲದು.

ಕೊನೆಯದ್ದು ಯುಕ್ತವಾಗಿರುತ್ತದೆ ಯಾಕೆಂದರೆ ಈ ವಿಭಾಗವು ಲೇಖಕನ ವಾದದ ಪರಾಕಾಷ್ಠೆಯನ್ನು ಮುಂದಿಡುತ್ತದೆ ಮತ್ತು ಅದು ಒಂದು ಸಾರಾಂಶಕ್ಕಿಂತಲೂ ಹೆಚ್ಚಿನದ್ದಾಗಿದೆ.[1] ನಮ್ಮ ಮಹಾಯಾಜಕನು ಒಂದು ಕಡಿಮೆಯಾದ ಒಡಂಬಡಿಕೆಯ ಸಂಬಂಧದಲ್ಲಿ ಸೇವೆಯನ್ನು ಮಾಡಲಾರನು; ಆತನ ಸ್ಥಾನವು ಶ್ರೇಷ್ಠವಾದದ್ದರಲ್ಲಿರುತ್ತದೆ.

ಕ್ರಿಸ್ತನು ಯಜ್ಞದ ಕೆಲಸವು ಪೂರ್ತಿಗೊಂಡಿರುವ ಕಾರಣದಿಂದ ಆತನು **ಆಸನಾರೂಢನಾಗಿ**ದ್ದಾನೆ. "ಆಸನಾ" ಎಂಬ ಪದವು ಆತನು ತನ್ನ ಸಿಂಹಾಸನದ ಮೇಲೆ ಕುಳಿತು ನಮ್ಮ ಅರಸನಾಗಿ ಆಳುತ್ತಾನೆಂಬುದನ್ನು ಸೂಚಿಸುತ್ತದೆ. ಯಾವ ಯೆಹೂದಿ ಯಾಜಕನು ಎಂದೂ ಒಂದು *ಸಿಂಹಾಸನ*ದ ಮೇಲೆ ಕೂತುಕೊಳ್ಳಲಿಲ್ಲ. ಇಲ್ಲಿ ನಮಗೆ ಇರುವ ಒಬ್ಬ ಮಹಾಯಾಜಕನು ಕುಂದಿಲ್ಲದ ಯೋಗ್ಯತೆಗಳನ್ನು ಹೊಂದಿರುವಾತನು. ನಿಜವಾದ ಜಗತ್ತು ಅಗೋಚರವಾಗಿದ್ದು ಅದನ್ನು ನಾವು ನಂಬಿಕೆಯಿಂದ ಅಂಗೀಕರಿಸಿ ಕೊಳ್ಳುತ್ತೇವೆಂಬುದನ್ನು ಇಬ್ರಿಯರಿಗೆ ಪತ್ರಿಕೆಯು ಸ್ಪಷ್ಟಗೊಳಿಸುತ್ತದೆ (ವ. 2); ಆ ಮಂಡಲದಲ್ಲಿಯೇ ಕ್ರಿಸ್ತನು ಒಬ್ಬ "ಮಹಾಯಾಜಕ" ಆಗಿದ್ದಾನೆ (6:20) ಅಥವಾ "ಯಾಜಕೋದ್ಯೋಗ ನಡಿಸುವವನಾಗಿದ್ದಾನೆ" (8:2). ಈಗಿನ ದೇವದರ್ಶನ ಗುಡಾರವು ಕೇವಲ "ನಿಜವಾದದ್ದರ" ಒಂದು "ಪ್ರತಿರೂಪ" ಮಾತ್ರವೇ ಆಗಿರುತ್ತದೆ (8:5; 9:24), ಆದರೆ ಅದು "ನಮಗೆ ಪರಲೋಕದ ಪಟ್ಟಣವೊಂದನ್ನು ನಿಶ್ಚಯಗೊಳಿ"ಸುತ್ತದೆ (11:16).

**ಪರಲೋಕಗಳಲ್ಲಿ** ಎಂಬ ಪದವು ಸರಿಯಾದದ್ದು, ಯಾಕೆಂದರೆ ಮೂಲವಾಕ್ಯದಲ್ಲಿ ಇಬ್ರಿಯರಿಗೆ ಪತ್ರಿಕೆಗಳೊಳಗೆ ಕಾಣಿಸಿಕೊಳ್ಳುವ ಹತ್ತು ಸಂದರ್ಭಗಳಲ್ಲಿ ಏಳು ಸಾರಿ ಬಹುವಚನ ಹೊಂದಿರುತ್ತದೆ. ಎಫೆಸದವರಿಗೆ ಬರೆದ ಪತ್ರಿಕೆಯು ಯಾವಾಗಲೂ ಈ ಪದದ ಬಹುವಚನದ ರೂಪವನ್ನು ಹೊಂದಿದೆ. ಇಬ್ರಿಯ 9:23ನೇ ವಚನವು ಬಹುವಚನ ಹೊಂದಿದ್ದರೆ, 9:24ನೇ ವಚನವು ಏಕವಚನವನ್ನು ಹೊಂದಿದೆ. ಬಹುಶಃ ಇಲ್ಲಿ, ಒಂದು ವೇಳೆ ಯಾವದೇ ಚಿಕ್ಕ ವ್ಯತ್ಯಾಸವನ್ನು ಸೂಚಿಸುವ ಉದ್ದೇಶವಿದ್ದಿರಬಹುದು.[2] ಬಹುವಚನವು ಇಲ್ಲಿ ದೇವರ ವಾಸಿಸುವ ಮತ್ತು ಆತನೊಂದಿಗೆ ಕ್ರಿಸ್ತನು ವಾಸಿಸುವ ಸ್ಥಳವೆಂಬುದನ್ನು ಸೂಚಿಸುತ್ತಿರಬಹುದಾಗಿದೆ.

ಕ್ರೈಸ್ತೇತರರಾದ ಯೆಹೂದ್ಯರು ತಮಗೆ ದೇವರಿಂದ ನೇಮಿಸಲ್ಪಟ್ಟ ಮಹಾಯಾಜಕನಿದ್ದು ಕ್ರೈಸ್ತ ವ್ಯವಸ್ಥೆಯು ಮಹಾಯಾಜಕನೊಬ್ಬನನ್ನು ಹೊಂದಿಲ್ಲವಾದ್ದರಿಂದ ಕಡಿಮೆಯಾದದ್ದಾಗಿರುವ ಕಾರಣ ತಾವು ಶ್ರೇಷ್ಠರೆಂದೆಣಿಸಿಕೊಂಡಿರಬಹುದು. ಹೇಗೂ, ಮೊದಲ ಶತಮಾನದಲ್ಲಿ ಅನೇಕರು ಮಹಾಯಾಜಕರನ್ನು ಅಸಡ್ಡೆಯಿಂದ ಕಾಣಲಾರಂಭಿಸಿದ್ದರು. ಎಸ್ಸೇನರು – ಮೃತಸಮುದ್ರ ಸುರುಳಿಗಳನ್ನು ಬರೆದ ಕುಮ್ರಾನ್ ಸಮುದಾಯವರನ್ನು ಸೂಚಿಸುವದಕ್ಕೆ Josephusನು ಬಳಸಿದ ಒಂದು ಪದ – ಆ ಗುಂಪಿಗೆ ಸೇರಿದವರಾಗಿದ್ದರು. ದೇವರು ಅವರ ಮಹಾಯಾಜಕನನ್ನು ತಿರಸ್ಕರಿಸಿದ್ದಾನೆಂದು ಅವರು ಭಾವಿಸಿದ್ದರು.[3] ಹಾಗಿದ್ದರೂ, ಅವರು ತಾವು ಕ್ರೈಸ್ತರಿಗೆ, "ನಾವು ದೇವರಿಂದ ನೇಮಿಸಲ್ಪಟ್ಟಿರುವ ಮಹಾಯಾಜಕನನ್ನು ಹೊಂದಿದ್ದೇವೆ, ನಿಮಗಾದರೋ ಅಂಥವನಿಲ್ಲ" ಎಂದು ಹೇಳಬಲ್ಲರೆಂದು ನಂಬಿದ್ದರು. ಅದಕ್ಕೆ ತದ್ವಿರುದ್ಧವಾಗಿ, ಕ್ರಿಸ್ತನು ಎಷ್ಟೊಂದು ಶ್ರೇಷ್ಠನಾಗಿದ್ದಾನೆಂದರೆ ಆತನು ಪರಲೋಕದಿಂದ, **ದೇವರ ಬಲಗಡೆಯಲ್ಲಿ** ಆಸನಾರೂಢನಾಗಿ ಆಳ್ವಿಕೆ ಮಾಡುವವನಾಗಿದ್ದಾನೆ. ಇದನ್ನು ಯಾವ ಮಾನವ ಯಾಜಕನ ವಿಷಯದಲ್ಲಿಯೂ ಹೇಳುವದಕ್ಕಾಗುವದಿಲ್ಲ.

**ವಚನ 2.** ಕ್ರಿಸ್ತನು **ಪವಿತ್ರಸ್ಥಾನದಲ್ಲಿ . . . ಯಾಜಕೋದ್ಯೋಗ ನಡಿಸುವವನಾಗಿದ್ದಾನೆ**. "ಯಾಜಕೋದ್ಯೋಗ (ಸೇವೆ)" [λειτουργός, *leitourgos*] ಎಂಬ ಪದವು ಒಂದು ಉನ್ನತ ವರ್ಗದ ಸಾರ್ವಜನಿಕ ಅಧಿಕಾರಿ, ಅಥವಾ "ಯಾಜಕತ್ವದ ಸೇವಕ" ಎಂದರ್ಥವಾಗಿರುತ್ತದೆ.

"ಪವಿತ್ರಸ್ಥಾನ" ಎಂಬುದು "ಅತಿಪರಿಶುದ್ಧ ಸ್ಥಳ" ವನ್ನು ಸೂಚಿಸುತ್ತದೆ, ಅಲ್ಲಿ ಯೇಸು ದೇವರ ಸನ್ನಿಧಿಯಲ್ಲಿ ಸೇವೆ ಮಾಡುತ್ತಾನೆ. ಭೂಲೋಕದ ಮಹಾಯಾಜಕನು ಪರಲೋಕದಲ್ಲಿರುವದರ ಕೇವಲ ಛಾಯೆಯಾಗಿದ್ದ ಅಥವಾ ಪ್ರತಿರೂಪವಾಗಿದ್ದ ಪರಿಶುದ್ಧ ಸ್ಥಳದಲ್ಲಿ ಸೇವೆ ಸಲ್ಲಿಸುತ್ತಿದ್ದನು. **ನಿಜ** ಎಂದರೆ ಛಾಯೆಯ ನೆರವೇರಿಕೆ, ನಿಜವಾದ ಸಂಗತಿ ಎಂದು ಅರ್ಥವಾಗುತ್ತದೆ, ಮತ್ತು ಇಲ್ಲಿ ಅದು "ಸುಳ್ಳಾದದ್ದಕ್ಕೆ" ವಿರುದ್ಧ ಹೋಲಿಕೆಯಾಗಿ ಬಳಸಲ್ಪಟ್ಟಿರುವದಿಲ್ಲ. ನಿಜವಾದ **ದೇವದರ್ಶನಗುಡಾರ** (σκηνή, *skēnē*) ವು ಸ್ವತಃ ಪರಲೋಕವನ್ನೇ ಸೂಚಿಸುತ್ತದೆ. ದೇವದರ್ಶನಗುಡಾರ ಅಥವಾ ಗುಡಾರವು ತಮ್ಮ ಮಧ್ಯದಲ್ಲಿ ದೇವರಿಗೆ ಒಂದು ವಾಸಸ್ಥಾನವಾಗಿ ಇಸ್ರಾಯೇಲ್ಯರಿಂದ ನಿರ್ಮಿಸಲ್ಪಟ್ಟಿದ್ದಾಗಿದ್ದು ಅದು ನಮಗೆ ಹೊಸ ಒಡಂಬಡಿಕೆಯಡಿಯಲ್ಲಿರುವ ಆಶೀರ್ವಾದಗಳ ಒಂದು ಪ್ರತಿರೂಪ ಅಥವಾ ಛಾಯೆಯಾಗಿತ್ತು (ವ. 5). ಪರಲೋಕದ ದೇವಾಲಯವು ಪ್ರಕಟನೆ 8:3-5ರಲ್ಲಿ ಒಂದು "ಯಜ್ಞವೇದಿ" ಯ ಪ್ರಸ್ತಾಪದೊಂದಿಗೆ ಚಿತ್ರಿಸಲ್ಪಟ್ಟಿದೆ, ಮತ್ತು ಪುನಃ ಪ್ರಕಟನೆ 11:19ರಲ್ಲಿ ಚಿತ್ರಿಸಲ್ಪಟ್ಟಿದ್ದು ಅಲ್ಲಿ ಅದು "ದೇವಾಲಯ" ಎಂದು ಕರೆಯಲ್ಪಟ್ಟಿದೆ. ದೇವದರ್ಶನ ಗುಡಾರದ ಸ್ಥಾನದಲ್ಲಿ ದೇವಾಲಯವು ಬಂದಿತ್ತು, ಆದರೆ ಇಬ್ರಿಯರಿಗೆ ಪತ್ರಿಕೆಯ ಲೇಖಕನು ವರ್ತಮಾನದಲ್ಲಿರುತ್ತದೋ ಎಂಬಂತೆ ಗತಕಾಲದಲ್ಲಿದ್ದ ಆದರ್ಶವಾದ "ದೇವದರ್ಶನಗುಡಾರ" ದ ಕುರಿತು ಮಾತಾಡಿದನು.

ಈ ದೇವದರ್ಶನಗುಡಾರವು **ಮನುಷ್ಯನು ಹಾಕದೆ ಕರ್ತನೇ ಹಾಕಿದ** ಗುಡಾರ ಎಂದು ಹೇಳಲ್ಪಟ್ಟಿರುತ್ತದೆ. ಇದು ಸಭೆಯ ನಿರ್ಮಾಣದ ಒಂದು ಉಲ್ಲೇಖನವಾಗಿರಬಹುದಾಗಿದೆ.[4] ಸಭೆಯು ಕ್ರಿಸ್ತನಿಂದ ಕಟ್ಟಲ್ಪಟ್ಟಿತು, ಹೊರತು ಮನುಷ್ಯನಿಂದಲ್ಲ. ವಿಶ್ವಾಸಿಗಳಿಗೆ ಪರಲೋಕದ ವಿಷಯವಾಗಿ ಹೇಳುವದು ಅನಾವಶ್ಯಕವಾಗಿತ್ತು, ಅದು "ಮನುಷ್ಯನು ಹಾಕದೆ ಕರ್ತನೇ ಹಾಕಿದ್ದಾಗಿತ್ತು." ಇಲ್ಲಿ ವಿರುದ್ಧ ಹೋಲಿಕೆಯು ದೇವರಿಂದ ನಿರ್ಮಿಸಲ್ಪಟ್ಟ ಪರಲೋಕದ ದೇವದರ್ಶನಗುಡಾರ ಮತ್ತು ಮನುಷ್ಯನಿಂದ ನಿರ್ಮಿಸಲ್ಪಟ್ಟ ಭೂಲೋಕದ ದೇವದರ್ಶನಗುಡಾರದ ನಡುವೆ ಆಗಿತ್ತು. ಸಭೆಯು ಅನೇಕ ಸಾರಿ ಹೊಸ ಒಡಂಬಡಿಕೆಯಲ್ಲಿ "ರಾಜ್ಯ" ಎಂದು ಕರೆಯಲ್ಪಟ್ಟಿರುತ್ತದೆ (ಪ್ರಕಟನೆ 1:9-11). ಯೇಸುವು ತನ್ನ ಸಭೆಯನ್ನು ಕಟ್ಟುವ ಕುರಿತು ಮಾತಾಡಿದನು (ಮತ್ತಾಯ 16:18, 19) ಮತ್ತು ಬಳಿಕ ತಕ್ಷಣವೇ ಅದನ್ನು "ರಾಜ್ಯ" ಎಂದು ಕರೆದನು. ಅರ್ಥದಲ್ಲಿ ವ್ಯತ್ಯಾಸವಿದ್ದರೂ, ಸಮೂಹದಲ್ಲಿರುವ ಸದಸ್ಯರನ್ನು ಪರಿಗಣಿಸುವಾಗ ಎರಡು ಪದಗಳು ಒಂದಕ್ಕೊಂದು ಪರ್ಯಾಯವಾಗಿರುತ್ತವೆ (ಕೊಲೊಸ್ಸೆ 1:13, 18). "ಸಭೆ" (ἐκκλησία, *ekklēsia*) ದೇವರ "ಕೂಟ" ಆಗಿರುತ್ತದೆ (ಇದು ಅಪೊಸ್ತಲರ ಕೃತ್ಯಗಳು 19:39, 41ರಲ್ಲಿ ಲೌಕಿಕ ಸಭೆಯ ವಿಷಯದಲ್ಲಿ ಸೂಕ್ತವಾಗಿ ಅನುವಾದಿಸಲ್ಪಟ್ಟಿರುವಂತೆಯೇ). ಇದು ಪರಲೋಕದಲ್ಲಿ ಪ್ರತಿಷ್ಠೆಪಡಿಸಲ್ಪಟ್ಟಿತು ಮತ್ತು ಅದರ ಅಸ್ತಿತ್ವದಿಂದಲೇ ದೇವರ ಜ್ಞಾನವನ್ನು ತೋರಿಸುತ್ತದೆ (ಎಫೆಸ 3:10). ದೇವದರ್ಶನಗುಡಾರದ ಪವಿತ್ರಸ್ಥಳವು ಸಭೆಯಲ್ಲಿ ಛಾಯೆಗೊಂಡಿರುವದಾದರೆ, ಸಭೆಯು ಸ್ವತಃ ಪರಲೋಕದ ಭೂಮಿಯ ಮೇಲಿನ ಛಾಯೆ ಅಥವಾ ಪ್ರಾತಿನಿಧ್ಯವಾಗಿರುವದಕ್ಕೆ ಸಾಧ್ಯವಿಲ್ಲವೋ? ಬಹುಶಃ ಈ ಕಾರಣಕ್ಕಾಗಿಯೇ ಅದು ಅನೇಕ ಸಾರಿ "ಪರಲೋಕರಾಜ್ಯ" ಎಂದು ಕರೆಯಲ್ಪಟ್ಟಿರಬಹುದೋ (ಮತ್ತಾಯನ ಸುವಾರ್ತೆಯಲ್ಲಿ ಹದಿಮೂರು ಸಾರಿ)? ದೇವದರ್ಶನಗುಡಾರದ ಪವಿತ್ರಸ್ಥಳವು ಅತಿಪರಿಶುದ್ಧ ಸ್ಥಳದೊಂದಿಗೆ ಹೊಂದಿದ್ದ ಅದೇ ಸಂಬಂಧವನ್ನು ಸಭೆಯು ಪರಲೋಕದೊಂದಿಗೆ ಹೊಂದಿದೆ.

ಸಭೆಯಲ್ಲಿನ ಆಚಾರಗಳಿಗೆ ಹೋಲುವಂಥಹ ದೇವದರ್ಶನಗುಡಾರದಲ್ಲಿದ್ದ ವಸ್ತುಗಳಲ್ಲಿ ಮೇಜು, ಧೂಪವೇದಿ, ಮತ್ತು ದೀಪಸ್ತಂಭಗಳು ಸೇರಿರುತ್ತವೆ. ಮೇಜು ಸಭೆಯಲ್ಲಿ ಆಚರಿಸಲ್ಪಡುವ ಕರ್ತನ ಭೋಜನದ ಒಂದು ಸಂಕೇತವಾಗಿರಬಹುದು. ನೈವೇದ್ಯವಾದ ರೊಟ್ಟಿಗಳಿಂದ

ಯಾಜಕರು ಪ್ರತಿ ವಾರ ರೊಟ್ಟಿಯನ್ನು ಸೇವಿಸುತ್ತಿದ್ದರು, ಮತ್ತು ಹೊಸ ಒಡಂಬಡಿಕೆಯ ಸಭೆಯು ಪ್ರತಿ ವಾರ ಕರ್ತನ ಭೋಜನವನ್ನು ಆಚರಿಸುತ್ತಿತ್ತು (ಅಪೊಸ್ತಲರ ಕೃತ್ಯಗಳು 20:7). ಮೇಲಕ್ಕೆ ಏರುವ ಹೊಗೆಯಿಂದ ಕೂಡಿದ ಧೂಪವೇದಿಯು ನಮ್ಮ ಪ್ರಾರ್ಥನೆಗಳು ಮತ್ತು ಸ್ತುತಿಗೀತೆಗಳನ್ನು ಹೋಲುವಂಥದ್ದಾ ಗಿರಬಹುದು (ನೋಡಿರಿ ಇಬ್ರಿಯ 13:15; ಪ್ರಕಟನೆ 8:4ರಲ್ಲಿ ನಿಕಟ ಸಂಬಂಧವನ್ನು ಗಮನಿಸಿರಿ). ಏಳು ತಲೆಗಳ ದೀಪಸ್ತಂಭದ ಬೆಳಕು ದೇವರ ವಾಕ್ಯದ ಬೆಳಕನ್ನು ಪ್ರತಿನಿಧಿಸಬಹುದಾಗಿದೆ (ಕೀರ್ತನೆ 119:105). ಹೊಸ ಒಡಂಬಡಿಕೆಯ ಪ್ರಕಾರವಾಗಿ, ನಾವು ಬೆಳಕಿನಲ್ಲಿ ನಡೆಯುವ ವೇಳೇ ದೇವರ ವಾಕ್ಯದಿಂದ ನಮ್ಮ ಕ್ರೈಸ್ತೀಯ ಪ್ರಭಾವವು ಉತ್ಪಾದಿಸಲ್ಪಡುತ್ತದೆ (ಮತ್ತಾಯ 5:14; 1 ಯೋಹಾನ 1:7). 1 ಕೊರಿಂಥ 3:16ರಲ್ಲಿ ಕ್ರೈಸ್ತರು ದೇವರ ಆಲಯ (ನಿವಾಸಸ್ಥಾನ) ಎಂದು ಕರೆಯಲ್ಪಟ್ಟಿದ್ದಾರೆ. ಹೀಗೆ ಸಭೆಯು "ನಿಜವಾದ ದೇವದರ್ಶನಗುಡಾರ" ಆಗಿರಬಲ್ಲದು, ಅಥವಾ ದೇವರ ನಿವಾಸಸ್ಥಾನವಾಗಿರಬಲ್ಲದು, ಅದಕ್ಕೆ ಹಳೆಯ ದೇವದರ್ಶನಗುಡಾರವು ಒಂದು ಛಾಯೆಯಾಗಿತ್ತು.

## ಸಮರ್ಪಿಸುವದಕ್ಕೆ ಏನಾದರೂ ಹೊಂದಿರುವ ಒಬ್ಬ ಯಾಜಕನು (8:3, 4)

**[3]ಪ್ರತಿಯೊಬ್ಬ ಮಹಾಯಾಜಕನು ಕಾಣಿಕೆಗಳನ್ನೂ ಯಜ್ಞಗಳನ್ನೂ ಸಮರ್ಪಿಸುವದಕ್ಕೆ ನೇಮಕವಾಗಿರುತ್ತಾನಷ್ಟೆ; ಆದದರಿಂದ ಸಮರ್ಪಿಸುವದಕ್ಕೆ ಈ ಮಹಾಯಾಜಕನಿಗೂ ಏನಾದರೂ ಇರಬೇಕು. [4]ಈತನು ಇನ್ನೂ ಭೂಮಿಯ ಮೇಲೆ ಇದ್ದದ್ದೇ ಆದರೆ ಯಾಜಕನಾಗಿರುತ್ತಿರಲಿಲ್ಲ; ಯಾಕಂದರೆ ಧರ್ಮನಿಯಮದ ಪ್ರಕಾರ ಕಾಣಿಕೆಗಳನ್ನು ಸಮರ್ಪಿಸುವವರು ಇದ್ದೇ ಇರುತ್ತಾರೆ.**

**ವಚನ 3.** ಅಗತ್ಯವಿರುವ ಯಜ್ಞಗಳನ್ನು ಅರ್ಪಿಸುವ ಮೂಲಕ ಜನರ ಪಾಪಗಳ ವಿಷಯವಾಗಿ ಕ್ರಮಕೈಗೊಳ್ಳುವದು ಒಬ್ಬ ಯಾಜಕನ ಕೆಲಸವಾಗಿತ್ತೆಂದು ಇಬ್ರಿಯ 5:1 ಹೇಳುತ್ತದೆ. ಹೇಗೂ, ಈ ಕೆಲಸವನ್ನು ಮಾಡುವ ವ್ಯಕ್ತಿಯು **ಕಾಣಿಕೆಗಳನ್ನೂ ಯಜ್ಞಗಳನ್ನೂ ಸಮರ್ಪಿಸಬೇಕಾಗಿತ್ತು**. ನಮ್ಮ **ಮಹಾಯಾಜಕನು** ತನ್ನ ಕಾಣಿಕೆಗಳನ್ನು ನಿಖರವಾಗಿ ಯಾವಾಗ ಅರ್ಪಿಸಿದನೆಂಬುದು ಅನಂತರದಲ್ಲಿ ತಿಳಿಸಲ್ಪಟ್ಟಿರುತ್ತದೆ (9:14); ಇದು ಒಂದು ರೀತಿಯಲ್ಲಿ ಹೆಚ್ಚುಕಡಿಮೆ ಅದನ್ನು ಕುರಿತು ತಿಳಿಸುವದಕ್ಕೆ ಮುಂಚೆ ಆಸಕ್ತಿಯನ್ನು ಕೆರಳಿಸಬೇಕೆಂಬುದು ಲೇಖಕನ ಬಯಕೆಯಾಗಿತ್ತೆಂದು ತೋರುತ್ತದೆ. ಒಬ್ಬ ಭೂಲೋಕದ ಯಾಜಕನಾಗಿ, ಯೇಸುವಿಗೆ ತನ್ನ ಯಜ್ಞವನ್ನು **ಸಮರ್ಪಿಸುವದಕ್ಕೆ** ಅವಕಾಶವಿರುತ್ತಿರಲಿಲ್ಲ, ಯಾಕೆಂದರೆ ಭೂಲೋಕದ ಪವಿತ್ರ ಸನ್ನಿಧಿಯಲ್ಲಿ (ದೇವಾಲಯ) ಮೋಶೆಯ ಧರ್ಮಶಾಸ್ತ್ರಕ್ಕೆ ವಿಧೇಯರಾಗುವ ಯೆಹೂದಿ ಯಾಜಕರು ತುಂಬಿದ್ದರು (ವ. 4; ನೋಡಿರಿ 7:12-14). "ಈ [ವಚನ]ವು ದೀರ್ಘವಾಗಿ ಹಿಂದಕ್ಕೆ ಹೋಗಿ ಯೇಸು ತನ್ನ ಸೇವೆಯ ವೇಳೆಯಲ್ಲಿ ಏಕೆ ನಿಜವಾಗಿಯೂ ಯಾಜಕ ಕೆಲಸಗಳನ್ನು ನಡಿಸಲಿಲ್ಲ ಎಂಬುದನ್ನು ತಿಳಿಸುತ್ತದೆ."[5] ದೇವರು ಒಂದು ಸಮಯದಲ್ಲಿ ಒಂದೇ ಯಾಜಕತ್ವಕ್ಕೆ ಅಧಿಕಾರ ಕೊಟ್ಟಿದ್ದನು; ಆತನು ಒಂದೇ ಧರ್ಮಶಾಸ್ತ್ರದ ಅಡಿಯಲ್ಲಿ ಏಕ ಕಾಲದಲಲ್ಲಿ ಎರಡು ಯಾಜಕತ್ವಗಳಿಗೆ ಕೆಲಸ ಮಾಡುವದನ್ನು ಆತನು ಎಂದಿಗೂ ಅನುಮತಿಸಿರುತ್ತಿರಲಿಲ್ಲ. ಅದೇ ರೀತಿ ಏಕಕಾಲದಲ್ಲಿ ತನ್ನ ಜನರೊಂದಿಗೆ ಎರಡು ಒಡಂಬಡಿಕೆಗಳು ಕಾರ್ಯದಲ್ಲಿರುವಂತೆ ಅನುಮತಿಸಿರಲಾರನು. (ಇದು 7:13, 14ರಲ್ಲಿನ ಮೌನದಿಂದ ಮಾಡಿದ ವಾದಕ್ಕೆ ಹೋಲಿಕೆಯಲ್ಲಿರುತ್ತದೆ.)

**ವಚನ 4. ಆತನು ಇನ್ನೂ ಭೂಮಿಯ ಮೇಲೆ ಇದ್ದದ್ದೇ ಆದರೆ ಯಾಜಕನಾಗಿರು ತ್ತಿರಲಿಲ್ಲ.**

ಯೇಸು ಪರಲೋಕದಲ್ಲಿ ಸೇವೆಯನ್ನು ಮಾಡುತ್ತಾನೆ, ಅದು ಆತನ ಶ್ರೇಷ್ಠತೆಯನ್ನು ತೋರಿಸುವ ಇನ್ನೊಂದು ಗಮನಾರ್ಹವಾದ ವಿರುದ್ಧ ಹೋಲಿಕೆಯಾಗಿದೆ. ಆತನು ಲೇವಿಯ ಕುಲಕ್ಕೆ ಅಥವಾ ಆರೋನನ ಕುಟುಂಬಕ್ಕೆ ಸೇರಿದವನಾಗಿರಲಿಲ್ಲ ವಾದ್ದರಿಂದ (7:14), ಆತನು ಯಾಜಕತ್ವಕ್ಕೆ ಸಂಬಂಧಿಸಿದಂತೆ ಒಬ್ಬ "ಶ್ರೀಸಾಮಾನ್ಯನು" ಆಗಿದ್ದನು. ಖಂಡಿತವಾಗಿಯೂ, ಭೂಲೋಕದ ವ್ಯವಸ್ಥೆಯಲ್ಲಿ ಕೆಲಸ ಮಾಡುವ ಒಬ್ಬ ಯಾಜಕನು ಪರಲೋಕದ ಪವಿತ್ರಸ್ಥಾನದಲ್ಲಿ ಸೇವೆ ಮಾಡುವವನಿಗಿಂತ ಎಷ್ಟೋ ಕಡಿಮೆಯಾದವನಾಗಿರುತ್ತಾನೆ.[6] ಇನ್ನು ಮೇಲೆ ದೇವರು ವಾಸಿಸುವ ಸ್ಥಳವು ಭೂಲೋಕದ ಪವಿತ್ರಸ್ಥಾನ ಆಗಿರುವದಿಲ್ಲ.

ಯೇಸುವಿನ ಯಜ್ಞವು ಶಿಲುಬೆಯ ಮೇಲೆ ಅರ್ಪಿಸಲ್ಪಟ್ಟರೆ, ಆತನ ಕಾಣಿಕೆಯು ಪರಲೋಕದಲ್ಲಿ ಕೊಡಲ್ಪಟ್ಟಿತು. ಆತನು ಒಬ್ಬ ಯಾಜಕನಾಗಿ ಭೂಮಿಯ ಮೇಲೆ **ಧರ್ಮ ನಿಯಮದ ಪ್ರಕಾರ ಕಾಣಿಕೆಗಳನ್ನು ಸಮರ್ಪಿಸುವವನಾಗಿ** ಕಾರ್ಯಮಾಡುವದಕ್ಕಾಗಲಿಲ್ಲ. ಹೀಗೆ ಕ್ರಿಸ್ತನು ಪರಲೋಕಕ್ಕೆ ಹಿಂದಿರುಗುವ ತನಕ ರಾಜ್ಯ/ಸಭೆಯು ಸ್ಥಾಪಿಸಲ್ಪಡುವದಕ್ಕೆ ಸಾಧ್ಯವೇ ಇರುತ್ತಿರಲಿಲ್ಲ, ಯಾಕೆಂದರೆ ಅಲ್ಲಿಯ ತನಕ ಮಾನವರನ್ನು ವಿಮೋಚಿಸುವ ದಾರಿಯು ಕಾನೂನುಬದ್ಧವಾಗಿ ಸ್ಥಾಪಿಸಲ್ಪಟ್ಟಿರಲಿಲ್ಲ (ಎಫೆಸ 5:25). ಇದು ಈಗಲೂ ಯೇಸುವು ತನ್ನ ಕಾಣಿಕೆಗಳನ್ನು ಅರ್ಪಿಸುತ್ತಿದ್ದಾನೆ (Phillips ಭಾವಾನುವಾದವು ತಿಳಿಸುವ ಪ್ರಕಾರ) ಎಂದು ಸೂಚಿಸುವದಿಲ್ಲ, ಯಾಕೆಂದರೆ ಆತನ ಕಾಣಿಕೆಯು ಒಂದೇ ಬಾರಿಗೆ ಸರ್ವಕಾಲಕ್ಕೂ ಅರ್ಪಿಸಲ್ಪಟ್ಟಿತು (7:27; 9:28). ಈ ಒಂದು ಸಮರ್ಪಿಸುವಿಕೆಯು ನಮ್ಮ ಪಾಪಗಳನ್ನು ಪದೇ ಪದೇ ಶುದ್ಧಮಾಡುವದರಲ್ಲಿ ನಮಗೆ ನಿರಂತರವಾದ ಅನ್ವಯಿಕೆ ಯನ್ನು ಹೊಂದಿರುತ್ತದೆ (1 ಯೋಹಾನ 1:7). ಅದು ಯುಗಾಂತ್ಯದ ವರೆಗೂ ಇರುವ ಶಕ್ತಿ ಹೊಂದಿದೆ ಮತ್ತು ಕ್ರಿಸ್ತನ ಮೂಲಕವಾಗಿ ದೇವರ ಬಳಿಗೆ ಬರುವವರನ್ನು ರಕ್ಷಿಸುವದನ್ನು ನಿರಂತರವಾಗಿ ಮುಂದುವರೆಸುತ್ತದೆ (7:25).

ಯಾಜಕರು ಮಾತ್ರವೇ ಯಜ್ಞಗಳನ್ನು ಅರ್ಪಿಸುತ್ತಿದ್ದರೆಂಬುದನ್ನು ಗಮನಿಸಿರಿ. ಒಬ್ಬ ಆಧುನಿಕ ಕಾಲದ ಯಾಜಕನು ಆ ಸಾಮರ್ಥ್ಯಯೊಂದರಲ್ಲಿ ಪ್ರಯೋಜಕನಾಗಿರುವದು ಕಷ್ಟಸಾಧ್ಯ ಯಾಕೆಂದರೆ ಯೇಸು ಪಾಪಕ್ಕಾಗಿ ಒಂದೇ ಬಾರಿಗೆ ಯಜ್ಞವನ್ನು ಮಾಡಿ ಮುಗಿಸಿದನು. ಹೆಚ್ಚುವರಿ ಸಮರ್ಪಿಸುವಿಕೆಗಳು ಅವಶ್ಯಕ್ಕಿಂತ ಅಧಿಕವಾಗುತ್ತವೆ. ಇಂದು ನಾವು ಮಾಡಬೇಕಾದ ಅಗತ್ಯವಿರುವ ಏಕೈಕ ಯಜ್ಞವೆಂದರೆ ನಮ್ಮ ಅರಸನಿಗೋಸ್ಕರ ಅನುದಿನವೂ ಜೀವಿಸುವ ಮೂಲಕ ನಮ್ಮ ಜೀವಿತಗಳ ವೈಯಕ್ತಿಕವಾದ ಯಜ್ಞವನ್ನು ಮಾಡುವದೇ ಆಗಿದೆ (ರೋಮಾ 12:1, 2).

## ಮಾದರಿಯ ಪ್ರಕಾರವಾದ ಒಬ್ಬ ಯಾಜಕನು (8:5)

**5ಅವರು ಪರಲೋಕದಲ್ಲಿರುವ ದೇವಾಲಯದ ಪ್ರತಿರೂಪವೂ ಛಾಯೆಯೂ ಆಗಿರುವ ಆಲಯದಲ್ಲಿ ಯಾಜಕತ್ವವನ್ನು ನಡಿಸುವವರು. ಮೋಶೆಯ ದೇವದರ್ಶನ ಗುಡಾರವನ್ನು ಮಾಡುವದಕ್ಕಿದ್ದಾಗ ಬೆಟ್ಟದಲ್ಲಿ ನಾನು ನಿನಗೆ ತೋರಿಸಿದ ಮಾದರಿಯ ಪ್ರಕಾರವೇ ಎಲ್ಲವನ್ನೂ ಮಾಡಿಸಬೇಕು ಎಂಬಬ ದೈವೋಕ್ತಿಯು ಅವನಿಗೆ ಉಂಟಾಯಿತಲ್ಲಾ.**

**ವಚನ 5.** ಲೇವಿಕ ಯಾಜಕರು **ಪರಲೋಕದಲ್ಲಿರುವ ದೇವಾಲಯದ ಪ್ರತಿರೂಪವೂ ಛಾಯೆಯೂ** ಆಗಿರುವದರಲ್ಲಿ **ಸೇವೆಯನ್ನು ಮಾಡಿದರು**. ಧರ್ಮಶಾಸ್ತ್ರವನ್ನು ಹಿಡಿದು ಕೊಂಡವರಾಗಿ, ಅವರು ಕಡಿಮೆಯಾದ ಮತ್ತು ಸುಲಭವಾಗಿ ನಾಶವಾಗುವ ಸಂಗತಿಗಳಿಗೆ

ಅಂಟಿಕೊಂಡಿದ್ದರು. **ಮೋಶೆಗೆ** ಸಿನಾಯ್ ಪರ್ವತದಲ್ಲಿ ತೋರಿಸಿದ್ದು, ಒಂದು ಅರ್ಥದಲ್ಲಿ, ಪರಲೋಕದಲ್ಲಿರುವ **ದೇವರ** ನಿವಾಸಸ್ಥಾನದ ಪ್ರತಿಕೃತಿಯಾಗಿತ್ತು. ಅದು ಒಂದು ರೀತಿಯಲ್ಲಿ ಲೇಖಕನು ಎರಡು ಜಗತ್ತುಗಳ ಬಗ್ಗೆ, ನಿಜವಾದದ್ದು ಮೇಲಿರುವದು ಮತ್ತು ಭೂಮಿಯು ಅದರ ಒಂದು "ನಕಲು" ಆಗಿರುವದೆಂದು ಹೇಳಿದಂತೆ ತೋರುತ್ತದೆ. ಒಂದು "ಛಾಯೆ" ಯು ಒಂದು ಅಸ್ಪಷ್ಟವಾದ ಸಂಗತಿ, ಒಂದು ಹೊರರೇಖೆ ಆಗಿದೆ, ಮತ್ತು ಅದೊಂದು ನಿಜವಾದ ಸಂಗತಿಯಾಗಿರುವದಿಲ್ಲ. ಪೌಲನು ಕೊಲೊಸ್ಸೆ 2:16, 17ರಲ್ಲಿ ಧರ್ಮಶಾಸ್ತ್ರದ ಕುರಿತಾಗಿ ಅದೇ ರೀತಿಯ ಹೇಳಿಕೆಯೊಂದನ್ನು ನೀಡುತ್ತಾನೆ (ನೋಡಿರಿ ಇಬ್ರಿಯ 10:1, 2). ಸಬ್ಬತ್ ದಿನ ಸೇರಿದಂತೆ ಮೋಶೆಯ ಧರ್ಮಶಾಸ್ತ್ರವೆಲ್ಲಾ ಬರಲಿರುವ ಸಂಗತಿಗಳ ಒಂದು ಛಾಯೆಯಾಗಿತ್ತು ಹೊರತು ಮತ್ತೇನೂ ಅಲ್ಲ. ಕೆಲವರು ಈ "ಛಾಯೆಯ" ವಿಷಯವನ್ನು ಅದರ ಸಂಸ್ಕಾರಗಳನ್ನು ಬಣ್ಣಿಸುತ್ತಾ ಕೇವಲ "ಆಚಾರಕ್ಕೆ ಸಂಬಂಧಿಸಿದ ಧರ್ಮಶಾಸ್ತ್ರ" ಎಂದು ಮಾತ್ರವೇ ಮಿತಿಗೊಳಿಸುವದಕ್ಕೆ ಪ್ರಯತ್ನಿಸುತ್ತಾರೆ; ಆದರೆ ಶಾಸ್ತ್ರದಲ್ಲಿ ಅಂತಹ ಯಾವದೇ ಭೇದವನ್ನು ಮಾಡಿರುವದಿಲ್ಲ. ಎರಡು ಪದಗಳ "ಒಂದಾಗಿ ಕೂಡಿಕೊಳ್ಳುವದು" ಒಂದು "ಪರಲೋಕದ ವಾಸ್ತವಿಕತೆಯ ಒಂದು ಸುಳಿವು ಅಥವಾ ಸೂಚನೆ ಮಾತ್ರವೇ ಅಸ್ಪಷ್ಟ ನಕಲುರೂಪ," ಎಂಬಂತೆ ಸಾಧ್ಯವಿರುತ್ತದೆ.[7]

ಇಸ್ರಾಯೇಲ್ಯರು **ದೇವದರ್ಶನಗುಡಾರವ**ನ್ನು ನಿರ್ಮಿಸಬೇಕಾಗಿತ್ತು, ಅದರ ಸಾಧನ ಗಳು ಮತ್ತು ಪಿಠೋಪಕರಣಗಳನ್ನು ಮೋಶೆಗೆ ಕೊಡಲ್ಪಟ್ಟಿದ್ದ **ಮಾದರಿಯ** ಪ್ರಕಾರವೇ ನಿಖರವಾಗಿ ರೂಪಿಸಬೇಕಿತ್ತು (ವಿಮೋಚನಕಾಂಡ 25:40). ಸೂಚ್ಯಾರ್ಥದ ಮೂಲಕ, ಯೆರೂಸಲೇಮಿನ ದೇವಾಲಯದ ವಿಷಯದಲ್ಲಿ ಸಹ ಇದು ಸತ್ಯವಾಗಿತ್ತು. ಅಪೊಸ್ತಲರ ಕೃತ್ಯಗಳು 7:44ರಲ್ಲಿ ಸ್ತೇಫನನು ಅದೇ ರೀತಿಯ ಯೋಚನೆಯನ್ನು ಒತ್ತಿ ಹೇಳುತ್ತಾನೆ ಮತ್ತು "ಮಾದರಿ" ಎಂಬುದಕ್ಕಿರುವ τύπος (*tupos*) ಎಂಬ ಅದೇ ಪದವನ್ನು ಬಳಸುತ್ತಾನೆ, ಅದರರ್ಥವು ಒಂದು "ನಮೂನೆ" ಅಥವಾ "ಉದಾಹರಣೆ" ಎಂದಾಗಿರುತ್ತದೆ.[8] ಮೋಶೆಯು ತನ್ನ ಸ್ವಂತ ವಿವೇಚನೆಯನ್ನು ಬಳಸುವ ಮತ್ತು ದೇವದರ್ಶನ ಗುಡಾರವನ್ನು ತನಗೆ ಅತ್ಯುತ್ತಮವೆಂದು ತೋರಿದ ಪ್ರಕಾರವಾಗಿ ನಿರ್ಮಿಸುವ ಯಾವದೇ ಹಕ್ಕನ್ನು ಹೊಂದಿರಲಿಲ್ಲ. ನಾವು ಹೊಸ ಒಡಂಬಡಿಕೆಯ ಅಡಿಯಲ್ಲಿ ದೇವರ "ಹೊಸ ದೇವಾಲಯ" ವಾಗಿರುವ ಸಭೆಯಲ್ಲಿನ ಸದಸ್ಯತ್ವ ಮತ್ತು ವಿಧೇಯತ್ವದ ವಿಷಯವಾಗಿ ಅದಕ್ಕಿಂತ ಕಡಿಮೆ ಕಟ್ಟುನಿಟ್ಟಿನಿಂದ ನಡೆಯುವದಕ್ಕೆ ಸಾಧ್ಯವೋ? ಆ ಪ್ರಶ್ನೆಗೆ ಇಬ್ರಿಯ 2:1-3ರಲ್ಲಿ ಉತ್ತರಿಸಲಾಗಿರುತ್ತದೆ: "ಹೆಚ್ಚಾಗಿ ಲಕ್ಷ್ಯಕೊಡುವವರಾಗಿರಬೇಕು." ನೋಹನು ನಾವೆಯನ್ನು ಕಟ್ಟುವದರಲ್ಲಿ ನಿರ್ಬಂಧಕ್ಕೊಳಪಡಿಸಲ್ಪಟ್ಟು ಸಂಪೂರ್ಣವಾಗಿ ವಿಧೇಯನಾದನು. ಹೊಸ ಒಡಂಬಡಿಕೆಯಲ್ಲಿ ಒಂದು ಕಟ್ಟುನಿಟ್ಟಾದ ಮತ್ತು ಜಾಗರೂಕವಾದ ವಿಧೇಯತೆಯ ಅಗತ್ಯವಿದೆಯೆಂದು ಎಂಬುದನ್ನು ತಿರಸ್ಕಾರದಿಂದ ಕಾಣುವವರು, "ಹೊಸ ಒಡಂಬಂಡಿಕೆಯು ಒಂದು ನಿಯಮದ ಪುಸ್ತಕವಲ್ಲ. ಅದು ಯಾವದೇ ನಿರ್ದಿಷ್ಟವಾದ ಮಾದರಿಯನ್ನು ಅನುಭವಿಸಬೇಕೆಂದು ಹೇಳದಿರುವ ಒಂದು ಪ್ರೇಮ ಪತ್ರವಾಗಿರುತ್ತದೆ" ಎಂದು ಹೇಳುತ್ತಾರೆ. ಖಂಡಿತವಾಗಿಯೂ, ದೇವರ ವಾಕ್ಯವು ಕ್ರಮವಾದ ಪ್ರಶ್ನೆಗಳನ್ನು ಮತ್ತು ಉತ್ತರಗಳನ್ನು ಒಳಗೊಂಡ ಒಂದು ವಿವರವಾದ ನಿಮಯದ ಪುಸ್ತಕವಾಗಿ ಬರೆಯಲ್ಪಟ್ಟಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ಅದು ಕಥನ, ಕಾವ್ಯಾತ್ಮಕ, ಮತ್ತು ಸಾಂಕೇತಿಕ ವಾಕ್ಯಭಾಗಗಳು ಸೇರಿದಂತೆ ಸಾಹಿತ್ಯದ ಒಂದು ಸುಂದರವಾದ ವಿಂಗಡಣೆಯಾಗಿರುತ್ತದೆ. ಹಾಗಿದ್ದರೂ, ನ್ಯಾಯವಾಗಿ ಬೈಬಲನ್ನು ಓದುವವನು ಹೊಸ ಒಡಂಬಡಿಕೆಯು "ನಿಮಯಗಳು"[9] ಎಂದು ಕರೆಯಲ್ಪಡಬಹುದಾದ ಉಪದೇಶಗಳನ್ನು ಒಳಗೊಂಡಿರು ತ್ತದೆಂಬುದನ್ನು

ಅಲ್ಲಗಳೆಯಲಾರನು. Jimmy Allenನು ಸಂಕ್ಷೇಪವಾಗಿ ಹೀಗೆ ಹೇಳಿದನು, "ಈ ದಿನ ಒಂದು ಮಾದರಿಯು ಒಂದು ವಿಷಯದ ಮೇಲೆ ಹೊಸ ಒಡಂಬಡಿಕೆಯು ಹೇಳುವಂಥದ್ದೆಲ್ಲವೂ ಆಗಿರುತ್ತದೆ."[10]

ಮೋಶೆಯು **ಎಚ್ಚರಿಸಲ್ಪಟ್ಟನು** (χρηματίζω, *chrēmatizō*), ಅದನ್ನು "ದೈವಿಕ ವಾಗಿ ಬುದ್ಧಿಹೇಳಲ್ಪಟ್ಟನು" ಎಂದು ಅನುವಾದಿಸಬಹುದು. NKJVಯು ಮತ್ತಾಯ 2:12 ಮತ್ತು ಇಬ್ರಿಯ 11:7ರಲ್ಲಿ "ದೈವಿಕವಾಗಿ ಎಚ್ಚರಿಸಲ್ಪಟ್ಟನು" ಎಂದು, ಮತ್ತು ಅಪೊಸ್ತಲರ ಕೃತ್ಯಗಳು 10:22ರಲ್ಲಿ "ದೈವಿಕವಾಗಿ ಉಪದೇಶಿಸಲ್ಪಟ್ಟನು" ಎಂದು ಹೇಳುತ್ತದೆ. "ಮಾದರಿಯ" **ಪ್ರಕಾರವಾಗಿ** ಮೋಶೆಯು **ಬೆಟ್ಟದಲ್ಲಿ** ಇರುವ ವೇಳೆ ಆತನಿಗಾಗಿ ಒಂದು ಯೋಜನೆಯನ್ನು ಮುಂದಿಡಲಾಗಿತ್ತು ಎಂಬುದನ್ನು ಸೂಚಿಸುತ್ತದೆ. "ಮಾದರಿ" (τύπος, *tupos*) ಎಂಬುದರ ಮೂಲ ಅರ್ಥವು "ಒಂದು ಹೊಡೆತ" ಮತ್ತು "ಹೊಡೆತದ ಪರಿಣಾಮ" ಎಂದಾಗಿರುತ್ತದೆ,[11] ಒಂದು ಲೋಹದ ಠಸ್ಸೆಯಿಂದಾದ ಅಚ್ಚು ಅಥವಾ ಒಂದು ಮುದ್ರೆಯಿಂದಾದ ಮೊಹರು ರೀತಿಯಲ್ಲಿಯೇ ಇದಾಗಿರುತ್ತದೆ. ಮಕ್ಕಳು ತಮ್ಮ ಹೆತ್ತವರ *tupoi* (*tupo* ಎಂಬುದರ ಬಹುವಚನ, ಅಥವಾ "ನಮೂನೆ") ಎಂದು ಕರೆಯಲ್ಪಡುತ್ತಿದ್ದರು. ಮೋಶೆಗೆ ತೋರಿಸಿಲ್ಪಟ್ಟ ಮಾದರಿಯು ಕಣ್ಣಿಗೆ ಕಾಣಿಸುವಂಥ ದ್ದಾಗಿತ್ತು (ವಿಮೋಚನಕಾಂಡ 25:40). ಆತನು "ಪೂರ್ವಅಸ್ತಿತ್ವದಲ್ಲಿದ್ದ ಪರಲೋಕದ ಮೂಲಮಾದರಿಯನ್ನು . . . ದೇವದರ್ಶನಗುಡಾರದ ಒಂದು ಚಿಕ್ಕ ನಕಲು ಮಾದರಿಯ ರೀತಿಯದ್ದನ್ನು"[12] ನೋಡಿರಬಹುದಾಗಿದೆ. Philo ಇದನ್ನು ಹೇಳಿದ ಪ್ರಕಾರ, "ಆತನು ಪರಿಪೂರ್ಣವಾಗಿ ಮಾಡಲ್ಪಡಲಿದ್ದ ದೇಹಗಳ [ಅಮೂರ್ತ] ಮಾದರಿಯನ್ನು ತನ್ನ ಆತ್ಮದಲ್ಲಿ ಅವಲೋಕಿಸಿದನು."[13] ಖಂಡಿತವಾಗಿಯೂ ಇದರ ಅರ್ಥವು, ದೇವದರ್ಶನ ಗುಡಾರದ ಆತ್ಮೀಕ ಅರ್ಥ ಮತ್ತು ಮಹತ್ವಪೂರ್ಣತೆಯ ಕುರಿತು ಅಧ್ಯಯನ ಮಾಡುವ ಮೂಲಕ ಸ್ವತಃ ಪರಲೋಕವು ಏನಾಗಿರುತ್ತದೆಂಬುದರ ಕುರಿತು ಏನಾದರೊಂದನ್ನು ಕಲಿತುಕೊಳ್ಳಬಹು ದಾಗಿದೆ ಎಂದಾಗಿರುತ್ತದೆ. ಮೋಶೆಯಿಂದ ಕಂಡ ಪ್ರಕಾರ, ಪರಲೋಕದಲ್ಲಿರುವ ದೇವರ ಮಾದರಿಯು ದೇವದರ್ಶನ ಗುಡಾರದ ಕುರಿತ ಆತನ ಒಂದು ಅಧಿಕೃತ ಆಕೃತಿ ರೇಖೆಯಾಗಿತ್ತು. ಹೀಗೆ ಅದು ಸಭೆಯು ಏನಾಗಿರಬೇಕಿತ್ತೆಂಬುದಕ್ಕೆ ಒಂದು ಸಂಕೇತವಾಗಿ ರುತ್ತದೆ, ಅದು ಒಂದು ಪೂರ್ಣವಾದ ಅರ್ಥದಲ್ಲಿ ಪರಲೋಕದ ಒಂದು ಮಾದರಿಯಾಗಿ ರುತ್ತದೆ. ಸಭೆಯ ಚರ್ಚೆಗಳಲ್ಲಿ ಒಂದು ಭೌತಿಕ ಕಟ್ಟಡದ ಕುರಿತು ಯಾವದೇ ಉಲ್ಲೇಖವಿರುವದಿಲ್ಲ. ಭೂಮಿಯ ಮೇಲಿರುವ ಸಭೆಯು "ಪರಲೋಕದ ಸ್ಥಳಗಳಿಗೆ" ಸಮಾನವಾಗಿರುತ್ತದೆ ಅಲ್ಲಿ ಈಗ ನಾವು "ಆತನ ಕೂತಿರುತ್ತೇವೆ" (ಎಫೆಸ 1:3; 2:6; ನೋಡಿರಿ ಇಬ್ರಿಯ 9:23).

## ಆತನ ಹೊಸ ಒಡಂಬಡಿಕೆ (8:6-13)

ಯೇಸುವಿನ ಸೇವೆಯು ಎಲ್ಲಾ ಸೇವೆಗಳಿಗಿಂತ ಅತ್ಯುನ್ನತವಾದದ್ದು ಯಾಕೆಂದರೆ ಆತನು ಎಲ್ಲಾ ಒಡಂಬಡಿಕೆಗಳಿಗಿಂತ ಅತ್ಯುನ್ನತವಾದ ಒಡಂಬಡಿಕೆಗೆ ಮಧ್ಯಸ್ಥನಾಗಿದ್ದಾನೆ. ಹಳೆಯ ಒಡಂಬಡಿಕೆಯು ಕೇವಲ "ಪರಲೋಕದ ಸಂಗತಿಗಳ ಒಂದು ಪ್ರತಿರೂಪ ಮತ್ತು ಛಾಯೆಯಾಗಿರುತ್ತದೆ." ಅದು ಪ್ರಮಾಣೀಕೃತ ಮತ್ತು ದೇವರ ವಿನ್ಯಾಸಕ್ಕನುಗುಣವಾಗಿತ್ತು, ಆದರೆ ಅದರ ಸರ್ವೋಚ್ಚವಾದ ಕೆಲಸವು ಕ್ರಿಸ್ತನ ಮರಣದ ಮುಖಾಂತರ ಉಂಟಾಗಲಿದ್ದ ಹೊಸ ಒಡಂಬಡಿಕೆಯ ಕಡೆಗೆ ಬೆರಳು ತೋರಿಸುವದಾಗಿತ್ತು.

ಇಬ್ರಿಯ 8:6-13 ವಚನಗಳು ನಮ್ಮ ಮುಂದೆ ಹೊಸ ಒಡಂಬಡಿಕೆಯ ಪ್ರಾಥಮಿಕ ವೈಶಿಷ್ಟ್ಯತೆಗಳನ್ನು ತರುತ್ತವೆ. ಅವುಗಳು ಯಾವವು?

## ಉತ್ತಮವಾದ ವಾಗ್ದಾನಗಳನ್ನು ಹೊಂದಿರುವ ಒಂದು ಒಡಂಬಡಿಕೆ (8:6, 7)

**[6]ಆದರೆ ಯೇಸು ಅದಕ್ಕಿಂತ ಶ್ರೇಷ್ಠವಾದ ಯಾಜಕೋದ್ಯೋಗವನ್ನು ಹೊಂದಿದವ ನಾಗಿದ್ದಾನೆ; ಉತ್ತಮ ವಾಗ್ದಾನಗಳ ಮೇಲೆ ಸ್ಥಾಪಿತವಾದ ಉತ್ತಮವಾದ ಒಡಂಬಡಿಕೆಗೆ ಮಧ್ಯಸ್ಥನಾಗಿದ್ದಾನೆ.**
**[7]ಆ ಮೊದಲನೆಯ ಒಡಂಬಡಿಕೆಯು ದೋಷವಿಲ್ಲದ್ದಾಗಿದ್ದರೆ ಎರಡನೆಯ ಒಡಂಬಡಿಕೆಗೆ ಅವಕಾಶವು ಇರುತ್ತಿರಲಿಲ್ಲ.**

**ವಚನ 6.** ಮೊದಲನೆಯದ್ದಾಗಿ, ಈ ಹೊಸ **ಒಡಂಬಡಿಕೆ**ಯು **ಉತ್ತಮವಾದ ವಾಗ್ದಾನಗಳನ್ನು** ಹೊಂದಿತ್ತು. ಈ ವಚನವು ವಿಶೇಷ ಮಹತ್ವವುಳ್ಳದ್ದಾಗಿದೆ, ಯಾಕೆಂದರೆ ಇದು ಇಬ್ರಿಯರಿಗೆ ಪತ್ರಿಕೆಯ ಮೊದಲ ಮುಖ್ಯ ಚರ್ಚೆಯಾಂಶವನ್ನು ಒಳಗೊಂಡಿರುತ್ತದೆ: ಅದೇನೆಂದರೆ ಯೇಸುವಿನ ರಕ್ತದಿಂದ ಪ್ರತಿಷ್ಠಿಸಲ್ಪಟ್ಟಿರುವ ಹೊಸ ಒಡಂಬಡಿಕೆಯು ಹಳೆಯ ಒಡಂಬಡಿಕೆಗಿಂತ ಶ್ರೇಷ್ಠವಾದದ್ದು ಮತ್ತು ಅದರ ಸ್ಥಾನವನ್ನು ವಹಿಸಿಕೊಳ್ಳುತ್ತದೆ. ಆತನು ಹೊಸ ಒಡಂಬಡಿಕೆಯನ್ನು ಚರ್ಚಿಸುವವನಾಗಿ ಮುಂದುವರೆದಂತೆ, ಲೇಖಕನು ಈ ಹೊಸ ಒಡಂಬಡಿಕೆಯ ಬಗ್ಗೆ ನಿರ್ದಿಷ್ಟವಾಗಿ ಮಾತಾಡಿದ "ಹಳೆಯ ಒಡಂಬಡಿಕೆ"ಯ ಏಕೈಕ ವಾಕ್ಯಭಾಗವನ್ನು, ಯೆರೆಮೀಯ 31:31-34ನ್ನು ಉಲ್ಲೇಖಿಸುತ್ತಾನೆ.

ನಮ್ಮ ಮಧ್ಯಸ್ಥನಾದ ಯೇಸು ಕ್ರಿಸ್ತನು ಎಷ್ಟೋ "ಉತ್ತಮವಾದ ವಾಗ್ದಾನಗಳ" ನ್ನು ಹೊಂದಿರುವ "ಎಷ್ಟೋ ಉತ್ತಮವಾದ ಒಡಂಬಡಿಕೆ" ಯನ್ನು ಒದಗಿಸಿದ್ದಾನೆ. ಅದು ಮೊದಲ ಒಡಂಬಡಿಕೆಯ ಅಡಿಯಲ್ಲಿ ಸಮರ್ಪಿಸಲಾಗುತ್ತಿದ್ದ ಪ್ರಾಣಿಗಳ ಜೀವಕ್ಕಿಂತಲೂ ಸರ್ವೋಚ್ಛವಾದ ಜೀವವನ್ನು ಅರ್ಪಿಸುವ ಮೂಲಕವಾಗಿ ಅನುಮೋದಿಸಲ್ಪಟ್ಟಿರುತ್ತದೆ. ಇಬ್ರಿಯರಿಗೆ ಪತ್ರಿಕೆಯ ಲೇಖಕನು ಕರ್ತನಾದ ಯೇಸು **ಉತ್ತಮವಾದ ಒಪ್ಪಂದಕ್ಕೆ** (ಒಡಂಬಡಿಕೆಗೆ) **ಮಧ್ಯಸ್ಥನು** ಎಂಬುದನ್ನು ಸಾಭಿತುಪಡಿಸುವದಕ್ಕೆ ತಾರ್ಕಿಕವಾದ ವಾದಗಳನ್ನು ಮತ್ತು ಶಾಸ್ತ್ರವನ್ನು ಬಳಸುತ್ತಾನೆ. KJVಯೊಳಗೆ ಇಬ್ರಿಯ 9:16, 17 ಮತ್ತು ಮತ್ತಾಯ 26:28ರಲ್ಲಿ "ಒಪ್ಪಂದ" (διαθήκη, *diathēkē*) ಎಂಬುದಕ್ಕೆ "ಒಡಂಬಡಿಕೆ" ಎಂದು ಅನುವಾದ ಮಾಡಲಾಗಿರುತ್ತದೆ. ಈ ಬಳಕೆಯಿಂದ, "ಹೊಸ ಒಡಂಬಡಿಕೆ" ಎಂಬ ಬಿರುದು ಬಂದಿರುತ್ತದೆ. ಯೆರೆಮೀಯ 31ರಲ್ಲಿನ ವಾಕ್ಯಭಾಗವು "ಹೊಸ" ಒಪ್ಪಂದ ಅಥವಾ ಒಡಂಬಡಿಕೆ ಎಂಬ ಭಾವನೆಗೆ ಮುಖ್ಯ ವಾಕ್ಯಭಾಗವಾಗಿದೆ.

"ಮಧ್ಯಸ್ಥನು" (μεσίτης, *mesitēs*) ಎಂಬ ಪದವು ಮೊದಲ ಶತಮಾನದಲ್ಲಿ "ಮಧ್ಯದಲ್ಲಿ ನಿಂತ" ವ್ಯಕ್ತಿಯನ್ನು ಸೂಚಿಸುವದಕ್ಕೆ ಅನುದಿನವೂ ಬಳಸಲ್ಪಡುತ್ತಿದ್ದ ಪದವಾಗಿತ್ತು. ಅಂಥ ವ್ಯಕ್ತಿಯು ಒಬ್ಬ ಪಂಚಾಯ್ತಿ ಮಾಡುವವನು, ನಡುವೆ ಹೋಗುವವನು ಆಗಿರುತ್ತಿದ್ದನು.[14] ಮೋಶೆಯು ಹಳೆಯ ಒಡಂಬಡಿಕೆಯ ಅಡಿಯಲ್ಲಿ ಒಬ್ಬ ಮಧ್ಯಸ್ಥನಾಗಿ ಸೇವೆ ಮಾಡಿದನು (ನೋಡಿರಿ ಗಲಾತ್ಯ 3:19), ಆದರೆ ಇಂದು ನಮ್ಮ ಮಧ್ಯಸ್ಥನು ಯೇಸು ಕ್ರಿಸ್ತನೇ (1 ತಿಮೊಥೆ 2:5). ತಂದೆಯ ಬಳಿಗೆ ಹೋಗುವದಕ್ಕಾಗಿ ನಾವು ಸಂತರ, ಮರಿಯಳು, ದೇವದೂತರು, ಅಥವಾ ಬೇರೆ ಯಾವನ ಮೂಲಕವಾದರೂ ಹೋಗುವದು ನಮಗೆ ಅನಾವಶ್ಯಕವಾಗಿರುತ್ತದೆ!

**ವಚನ 7.** ಕ್ರಿಸ್ತನ ಸೇವೆಯು "ಪರಲೋಕದಲ್ಲಿರುವವು" ಗಳಿಗೆ ಸಂಬಂಧಿಸಿರುತ್ತದೆ (ವ. 5), ಅದರಲ್ಲಿ ಒಂದು ಹೊಸ ಒಡಂಬಡಿಕೆ, ಸಭೆ, ಮತ್ತು ನಿಜವಾದ ಕ್ಷಮಾಪಣೆಗಳು ಸೇರಿರುತ್ತವೆ. ಹಳೆಯ **ಒಡಂಬಡಿಕೆ**ಯು ಪಾಪದ ಕುರಿತು ಬಹಳಷ್ಟನ್ನು ಹೇಳಿತು, ಆದರೆ ಅದು ಯಾವದೇ ಪೂರ್ಣವಾದ ಅಥವಾ ನಿಜವಾದ ಪಾಪನಿವಾರಣೆಯನ್ನು ಒದಗಿಸಲಿಲ್ಲ. ಈ ಕಾರಣದಿಂದಲೇ ಧರ್ಮಶಾಸ್ತ್ರವು **ದೋಷವಿಲ್ಲದ್ದಾ**ಗಿ ಕಂಡು ಬರಲಿಲ್ಲ (ನೋಡಿರಿ ರೋಮಾ 8:3). ಯೇಸು

ಅದಕ್ಕಿಂತ "ಶ್ರೇಷ್ಠವಾದ ಯಾಜಕೋದ್ಯೋಗವನ್ನು" ಒದಗಿಸುತ್ತಾನೆ. ಸುಧಾರಣೆಗಳು 8:8-12ರಲ್ಲಿ ವಿವರವಾಗಿ ತಿಳಿಸಲ್ಪಟ್ಟಿರುತ್ತವೆ. ಹೊಸದು ಪಾಪದ ನಿಜವಾದ ಕ್ಷಮಾಪಣೆಯನ್ನು ಒದಗಿಸಿದರೆ, ಹಳೆಯದು ಆಚಾರಿಕವಾಗಿ ಶುದ್ಧಪಡಿಸಿಕೊಳ್ಳುವದಕ್ಕೆ ಕಳಕಳಿ ಹೊಂದಿತ್ತು. ಹಳೆಯದರ ವಾಗ್ದಾನಗಳು ಈ ಜೀವನಕ್ಕಾಗಿ ಆಗಿದ್ದವು, ಆದರೆ ಹೊಸ ಒಡಂಬಡಿಕೆಯ ವಾಗ್ದಾನಗಳು ಭವಿಷ್ಯದ ಜೀವಿತಕ್ಕಾಗಿ ಇರುತ್ತವೆ. ವಿಧೇಯರಿಗಾಗಿ ಹಳೆಯ ಒಡಂಬಡಿಕೆಯು ದೇಶದಲ್ಲಿ ದೀರ್ಘಾಯುಷ್ಯದಿಂದ ಬದುಕುವದು, ಸಮೃದ್ಧಿಯಾದ ಬೆಳೆ, ಜನಾಂಗೀಯ ಸವಲತ್ತುಗಳು, ಸಮಾಧಾನ, ಮತ್ತು ಸಮೃದ್ಧಿಯ ಮುಂತಾದವುಗಳ ಭರವಸೆಯನ್ನು ನೀಡಿತು. ಎಲ್ಲಕ್ಕಿಂತ ಮೇಲಾಗಿ, ಹೊಸ ಒಡಂಬಡಿಕೆಯು ನಿತ್ಯಜೀವನವನ್ನು ಅನುಗ್ರಹಿಸುತ್ತದೆ, ಹಳೆಯ ಒಡಂಬಡಿಕೆಯಲ್ಲಿ ಕೇವಲ ಅದರ ಸುಳಿವು ಮಾತ್ರವೇ ಇತ್ತು. ಹಳೆಯ ಒಡಂಬಡಿಕೆಯು "ದೋಷವಿಲ್ಲದ್ದಾಗಿದ್ದರೆ," ನಮಗೆ ಒಂದು ಹೊಸ, ಉತ್ತಮವಾದ ಒಡಂಬಡಿಕೆಯ ಅಗತ್ಯವಿರುತ್ತಿರಲಿಲ್ಲ.

## ಮುರಿಯಲ್ಪಟ್ಟ ಒಡಂಬಡಿಕೆಯಂಥಲ್ಲದ ಒಂದು ಒಡಂಬಡಿಕೆ (8:8, 9)

**[8]ಆದರೆ ದೇವರು ಆ ಒಡಂಬಡಿಕೆಗೆ ಸೇರಿದವರ ಮೇಲೆ ತಪ್ಪುಹೊರಿಸಿ ಹೀಗಂದನು –**

> **ಇಗೋ, ನಾನು ಇಸ್ರಾಯೇಲ್ ವಂಶದವ ರೊಂದಿಗೂ ಯೆಹೂದವಂಶದವ ರೊಂದಿಗೂ ಹೊಸದಾಗಿರುವ ಒಂದು ಒಡಂಬಡಿಕೆ ಯನ್ನು ಮಾಡಿಕೊಳ್ಳುವ ದಿನಗಳು ಬರು ವವು ಎಂದು ಕರ್ತನು ಹೇಳುತ್ತಾನೆ;**
> **[9]ಈ ಒಡಂಬಡಿಕೆಯು ನಾನು ಇವರ ಪಿತೃಗಳನ್ನು ಕೈಹಿಡಿದು ಐಗುಪ್ತದೇಶದೊಳಗಿಂದ ಕರಕೊಂಡು ಬಂದ ಕಾಲದಲ್ಲಿ ಅವರ ಸಂಗಡ ಮಾಡಿಕೊಂಡ ಒಡಂಬಡಿಕೆಯಂಥ ದ್ದಲ್ಲ;**
> **ಅವರು ನನ್ನ ಒಡಂಬಡಿಕೆಯಲ್ಲಿ ಸ್ಥಿರವಾಗಿ ನಿಲ್ಲಲಿಲ್ಲವಾದ್ದರಿಂದ ನಾನು ಅವರ ಚಿಂತೆಯನ್ನು ಬಿಟ್ಟೆನೆಂದು ಕರ್ತನು ಹೇಳುತ್ತಾನೆ.**

**ವಚನ 8.** ಎರಡನೆಯದಾಗಿ, **ಹೊಸದಾಗಿರುವ ಒಂದು ಒಡಂಬಡಿಕೆ**ಯು ದೇವಜನರಿಂದ ಮುರಿಯಲ್ಪಟ್ಟ ಹಳೆಯದ್ದರಂತೆ ಇರುವದಿಲ್ಲ. ಯೆಹೂದಿ ವಿಶ್ವಾಸಿಗಳಿಗೆ ಬರೆಯುವ ಒಬ್ಬ ಲೇಖಕನು ಅವರ ಸ್ವಂತ ಪವಿತ್ರ ಶಾಸ್ತ್ರಗಳಲ್ಲೊಂದರಿಂದ ಉಲ್ಲೇಖನವನ್ನು ಬಳಸುವದಕ್ಕಿಂತಲೂ ಹೆಚ್ಚು ಮನವರಿಕೆಯನ್ನುಂಟು ಮಾಡುವ ವಾದವನ್ನು ಬಳಸಿರಲಿಕ್ಕೆ ಸಾಧ್ಯವಿರಲಿಲ್ಲ. ಧರ್ಮಶಾಸ್ತ್ರದ ಅಡಿಯಲ್ಲಿ ತನ್ನ ಜನರು ಅಪನಂಬಿಸ್ಥರಾಗಿರುವದನ್ನು ಯೆರೆಮೀಯನು ಸಿನಾಯ್ ಪರ್ವತದ ಮೇಲೆ ಮಾಡಿದ ಒಡಂಬಡಿಕೆಯನ್ನು ತಿರಸ್ಕರಿಸಿದಂತೆ ಕಂಡನು. ದೇವರ ಧರ್ಮಶಾಸ್ತ್ರವನ್ನು ತಿರಸ್ಕರಿಸಿದ್ದು ಒಂದು ಜನಾಂಗವಾಗಿ ಇಸ್ರಾಯೇಲ್ಯವು ಅಂತ್ಯಗೊಳ್ಳುವದಕ್ಕೆ ಒಂದು ಕಾರಣವೆಂಬುದನ್ನು ಆತನು ಗುರುತಿಸಿದನು. ಖಂಡಿತವಾಗಿಯೂ, ದೇವರು ಧರ್ಮಶಾಸ್ತ್ರವನ್ನು ಪರಿಪೂರ್ಣವಾಗಿರುವಂತೆ ರೂಪಿಸಿದ್ದನು, ಮತ್ತು ಅದರ ಮೂಲಕವಾಗಿ ತಪ್ಪನ್ನು ಎತ್ತಿ ತೋರಿಸಿದನು; ಆದರೆ ಆತನು ಪ್ರಾಚೀನ ಇಸ್ರಾಯೇಲ್ ಜನರಲ್ಲಿ ಸಹ ದೋಷವನ್ನು ಕಂಡುಕೊಂಡನು.

**ಇಸ್ರಾಯೇಲ್ ವಂಶದವರಿಗೂ ಯೆಹೂದವಂಶದವರಿಗೂ** ಒಂದು ಹೊಸ ಒಡಂಬಡಿಕೆಯು ಕೊಡಲ್ಪಟ್ಟಿತು; ಅವರು ಪುನಃ ಒಂದು ಜನಸಮೂಹವಾಗಿ ಐಕ್ಯಗೊಳಿಸಲ್ಪಡಲಿದ್ದರು. ಇದು ಸಭೆಯ ಸ್ಥಾಪಿಸುವದರಲ್ಲಿ ಸಂಭವಿಸಿತು, ಅದು ಒಂದೇ ದೇಹವಾಗಿದೆ (ಎಫೆಸ 2:14-16).

ದೇವರು ಪಂಗಡಗಳನ್ನು ಬಯಸುವದಿಲ್ಲ; ಆತನು ತನ್ನ ಜನರೆಲ್ಲರೂ ಒಂದೇ ದೇಹದಲ್ಲಿ, ಒಂದೇ ಸಭೆಯಲ್ಲಿ ಇರಬೇಕೆಂದು ಬಯಸುತ್ತಾನೆ (ಎಫೆಸ 1:22, 23), ಅದು "ಆತ್ಮೀಕ ಇಸ್ರಾಯೇಲ್" ಆಗಿರುತ್ತದೆ (ಗಲಾತ್ಯ 6:16). ಒಳಪಂಗಡಗಳು ವ್ಯಾಜ್ಯ ಮತ್ತು ವೈಷಮ್ಯ ಉಂಟು ಮಾಡುತ್ತದೆ, ಸೈತಾನನ ಸೇವೆಯನ್ನು ಮಾಡುತ್ತದೆ ಮತ್ತು ಲೋಕದ ಪರಿವರ್ತನೆಗೆ ಒಂದು ಮಹಾ ಅಡೆತಡೆಯನ್ನು ಸೃಷ್ಟಿಸುತ್ತದೆಂಬುದು ಆತನಿಗೆ ಗೊತ್ತದೆ (ನೋಡಿರಿ ಯೋಹಾನ 17:20, 21). ಹೊಸ[15] ಒಡಂಬಡಿಕೆಯು ಎಲ್ಲಾ ಒಳಪಂಗಡಗಳನ್ನು ಮತ್ತು ಗುಂಪುಗಾರಿಕೆಯನ್ನು ತೆಗೆದುಹಾಕುವ ಉದ್ದೇಶಕ್ಕಾಗಿ ಆಗಿತ್ತು. ಹೊಸ ಒಡಂಬಡಿಕೆಯೊಂದು ಮುಂತಿಳಿಸಲ್ಪಟ್ಟಿರುವ ವಾಸ್ತವಾಂಶವೇ ಹಳೆಯದು ದೋಷಗಳನ್ನು ಹೊಂದಿರುತ್ತದೆಂಬುದನ್ನು ತೋರಿಸುತ್ತದೆ ಹಳೆಯದು ಪರಿಪೂರ್ಣವಾಗಿದ್ದರೆ ಹೊಸದನ್ನು ಕೊಡುವದರಲ್ಲಿ ಯಾವ ಅರ್ಥವೇ ಇರುತ್ತಿರಲಿಲ್ಲ.

8ನೇ ವಚನವು ಹೊಸ ಒಡಂಬಡಿಕೆಯ ವಾಗ್ದಾನವು ಯೆರೆಮೀಯ ಮೂಲಕ ಕೊಡಲ್ಪಟ್ಟಿತ್ತೆಂಬುದನ್ನು ದಾಟಿ ಮುಂದೆ ಹೋಗಿ ಅದರ ಬದಲಾಗಿ ಉತ್ಪತ್ತಿ ಮೂಲದಿಂದ – **ಕರ್ತನು** – ಆ ಉಲ್ಲೇಖವು ಬಂದದ್ದೆಂದು ಹೇಳುತ್ತದೆ. **ಹೇಳುತ್ತಾನೆ** ಎಂಬುದು ಗ್ರೀಕ್ ವಾಕ್ಯದಲ್ಲಿ ನಿರ್ದಿಷ್ಟವಾಗಿರುವದಿಲ್ಲ, ಆದರೆ ಲೇಖಕನು ದೇವರನ್ನು ವಕ್ತಾರನು ಎಂದು ಕರೆ ಯುವದು ಸಹಜವಾದದ್ದಾಗಿತ್ತು. ಇಬ್ರಿಯ 8:8–12ರಲ್ಲಿ ಉಲ್ಲೇಖಿಸಲ್ಪಟ್ಟಿರುವ ಯೆರೆಮೀಯ 31:31–34ರ ಪ್ರವಾದನೆಯು, ಯೆಹೂದವು ಸೆರೆವಾಸದ ಸಂದರ್ಭದಲ್ಲಿ ಬಾಬಿಲೋನಿನ ದಬ್ಬಾಳಿಕೆಯಡಿಯಲ್ಲಿ ಬಾಧೆಯನ್ನನುಭವಿಸುವ ವೇಳೆಯಲ್ಲಿ ಕೊಡಲ್ಪಟ್ಟಿತು. ತಾವು ಎಂದಾದರೂ ತಮ್ಮ ಸ್ವದೇಶಕ್ಕೆ ಹಿಂದಿರುಗುವರೋ ಎಂದು ಜನರು ಚಕಿತಗೊಂಡಿದ್ದರು. ಅವರಿಗೊಂದು ನಿರೀಕ್ಷೆಯು ಕೊಡಲ್ಪಟ್ಟಿತ್ತು (ಯೆರೆಮೀಯ 31:17); ಯಾಕೆಂದರೆ ಅವರು ಸ್ವದೇಶಕ್ಕೆ ಹಿಂದಿರುಗುವದು ಮಾತ್ರವೇ ಅಲ್ಲ, ಆದರೆ ಅವರು ಒಂದು ಹೊಸ ಹಾಗೂ ಉತ್ತಮವಾದ ಒಡಂಬಡಿಕೆಯನ್ನು ಪಡೆದುಕೊಳ್ಳಲಿದ್ದರು.

ಯೋಷೀಯನು ಧರ್ಮಶಾಸ್ತ್ರವನ್ನು ಪುನಸ್ಥಾಪಿಸುವದಕ್ಕೆ ಸಮರ್ಪಿಸಿಕೊಂಡರೂ (2 ಅರಸು 23:3), ಜನರು ಆತನ ನೀತಿಯುಳ್ಳ ಮಾದರಿಯನ್ನು ಅನುಸರಿಸುವದಿಲ್ಲ ಎಂಬುದನ್ನು ಯೆರೆಮೀಯನು ಗ್ರಹಿಸಿಕೊಂಡಿದ್ದನು (ಯೆರೆಮೀಯ 3:6–10). ಒಂದು ರಾಷ್ಟ್ರೀಯ ಪಶ್ಚಾತ್ತಾಪವಿಲ್ಲದಿರುವಲ್ಲಿ, ಹೊಸ ಒಡಂಬಡಿಕೆಯು ಜನರ ವಿಷಯದಲ್ಲಿ ಕ್ರಮಕೈಗೊಳ್ಳುವದಕ್ಕೆ ಒಂದು ಹೊಸದಾದ ದಾರಿಯನ್ನು ಒದಗಿಸಲಿತ್ತು. ದೇವರು ಧರ್ಮಶಾಸ್ತ್ರದಲ್ಲಿ ವಿಫಲತೆಯ ತಿರುಳನ್ನು ಅಂತರ್ಗತವಾಗಿ ನಿರ್ಮಿಸಿದ್ದನು (ರೋಮಾ 8:3); ಆದುದರಿಂದ, ಅವರ ಇತಿಹಾಸವು ತಮ್ಮ ಸ್ವಂತ ವಿಫಲತೆಗಳೊಂದಿಗಿರುವ ಯೆಹೂದ್ಯರು ಧರ್ಮಶಾಸ್ತ್ರದ ಪರಿಪೂರ್ಣವಾದ ಬೇಡಿಕೆಗಳಿಗನುಗುಣವಾಗಿ ಜೀವಿಸುವಂತೆ ಪ್ರಭಾವಿತಗೊಳಿಸಿರಬೇಕಿತ್ತು.

ಹೊಸ ಒಡಂಬಡಿಕೆಯು "ಇಸ್ರಾಯೇಲ್‌ವಂಶ" ಮತ್ತು "ಯೆಹೂದವಂಶ" ಎರಡರೊಂದಿಗೂ ಮಾಡಿಕೊಳ್ಳಲ್ಪಡುವದಾಗಿತ್ತು. "ಇಸ್ರಾಯೇಲ್" ಬೈಬಲನುಸಾರ ನಾಲ್ಕು ವಿಧದಲ್ಲಿ ಅನ್ವಯಿಸಲ್ಪಟ್ಟಿದೆ:[16]

1. ದೇವರ ಒಬ್ಬ ಪ್ರಭುವಾಗಿ ಯಾಕೋಬನು (ಆದಿಕಾಂಡ 32:28).
2. ಯಾಕೋಬನ ಎಲ್ಲಾ ಸಂತತಿಯವರಿಗೆ (ವಿಮೋಚನಕಾಂಡ 4:22).
3. ಯಾರೊಬ್ಬಾಮನ ನಾಯಕತ್ವದಲ್ಲಿ ಬಂಡಾಯವೆದ್ದ ಹತ್ತು ಕುಲಗಳು (1 ಅರಸು 12:19, 20).
4. ಹೊಸ ಒಡಂಬಡಿಕೆಯಲ್ಲಿ ಪ್ರತಿಯೊಬ್ಬ ಕ್ರೈಸ್ತನಿಗೆ (ರೋಮಾ 9:6; ಗಲಾತ್ಯ 6:16). ಈ ಒಡಂಬಡಿಕೆಯು ಎಲ್ಲಾ ಇಸ್ರಾಯೇಲ್ಯರಿಗೂ (ಎಲ್ಲಾ ಯೆಹೂದ್ಯರು) ಕೊಡಲ್ಪಡುವದು,

ಆದರೆ ಅದನ್ನು ಸ್ವೀಕರಿಸುವ ಸಕಲ ಗೋತ್ರಗಳಿಗೆ ಮತ್ತು ಜನಾಂಗಗ ಳಿಗೆ ಸಹ ಅದು ಇರುತ್ತದೆ.

ಹೊಸ ಒಡಂಬಡಿಕೆಯ ಅಡಿಯಲ್ಲಿ "ಇಸ್ರಾಯೇಲ್ ವಂಶವು" "ದೇವರ ಇಸ್ರಾಯೇಲ್ಯ" ಆಯಿತು (ಗಲಾತ್ಯ 6:16). ಇಬ್ರಿಯರಿಗೆ ಪತ್ರಿಕೆಯಲ್ಲಿ ಎಲ್ಲಿಯೂ ಇದು ನಿರ್ದಿಷ್ಟವಾಗಿ ಹೇಳಲ್ಪಟ್ಟಿಲ್ಲವಾದಾಗ್ಯೂ, ಇದರಲ್ಲಿ ಎಲ್ಲಾ ಮಾನವರು ಸೇರ್ಪಡೆಗೊಳ್ಳಬಹುದು. ಹೀಗೆ ಹೇಳಲ್ಪಡದಿರುವದಕ್ಕೆ ಸಂಭಾವ್ಯ ಕಾರಣವೆಂದರೆ, ಯೆಹೂದ್ಯ ಕ್ರೈಸ್ತರಲ್ಲಿ ಇನ್ನು ಕೆಲವೊಂಧು ಅಸೂಯೆಗಳಿದ್ದವೆಂಬುದು ಲೇಖಕನಿಗೆ ಗೊತ್ತಿತ್ತು ಎಂಬದೆ. ಹೊಸ ಒಡಂಬಡಿಕೆಯನ್ನು ಸ್ಥಾಪಿಸುವದಕ್ಕಾಗಿ ತನ್ನ ರಕ್ತವು ಸುರಿಸಲ್ಪಡಬೇಕೆಂದು ಯೇಸು ಹೇಳಿದನು (ಮತ್ತಾಯ 26:28). ಅನಂತರದಲ್ಲಿ, ಅದು ಇಡೀ ಲೋಕಕ್ಕೆ ಸಾರಲ್ಪಡತಕ್ಕದ್ದೆಂದು ಆತನು ಘೋಷಿಸಿದನು (ಲೂಕ 24:46, 47; ಮಾರ್ಕ 16:15; ಮತ್ತಾಯ 28:18-20).

"ಯೆಹೂದ" ಎಂದರೆ "ಸ್ತುತಿ" ಅಥವಾ "ಆತನು ಸ್ತುತಿಸಲ್ಪಡುವನು" ಎಂದರ್ಥವಾಗಿತ್ತು. ಅದು ಮೊದಲು ಲೇಯಳಲ್ಲಿ ಯಾಕೋಬನಿಗೆ ಹುಟ್ಟಿದ ಮಗನಿಗೆ ಅನ್ವಯವಾಗಿತ್ತು (ಆದಿಕಾಂಡ 29:35); ಬಳಿಕ ಆತನ ಸಂತತಿಯವರಿಗೆಲ್ಲಾ, ಅಥವಾ ಆತನ ಕುಲಕ್ಕೆ ಅನ್ವಯವಾಗಿತ್ತು (ಅರಣ್ಯಕಾಂಡ 1:7); ಮತ್ತು ಆ ಬಳಿಕ ರೆಹೋಬ್ಬಾಮನನ್ನು ಹಿಂಬಾಲಿಸಿದವರಿಗೆಲ್ಲಾ – ಯೆಹೂದ ಹಾಗೂ ಬೆನ್ಯಾಮೀನ, ಜೊತೆಗೆ ಸಿಮೆಯೋನ್ ಮತ್ತು ದಾನ್ ಗೋತ್ರದವರು ಸೇರಿದಂತೆ ಎಲ್ಲರಿಗೂ ಅನ್ವಯವಾಯಿತು. ಸೆರೆವಾಸದ ಬಳಿಕ, ಇಸ್ರಾಯೇಲ್ಯರ ಯಾವದೇ ಗೋತ್ರಕ್ಕೆ, ಮಾತ್ರವಲ್ಲದೆ ಮತಾಂತರಿಗಳಿಗೆ ಸಹ "ಯೆಹೂದ್ಯ" ("*ಯೆ*-ಹೂದ" ಎಂಬದರಿಂದ ಬಂದದ್ದು) ಎಂಬ ಹೆಸರು ಕೊಡಲ್ಪಟ್ಟಿತು. ಇದು ಕ್ರೈಸ್ತರಿಗೆ ಪೌಲನಿಂದ ಅನ್ವಯಿಸಲ್ಪಟ್ಟ ಹೆಸರಾಗಿತ್ತು (ರೋಮಾ 2:29). ಯೆರೆಮೀಯನ ಪ್ರವಾದನೆಯಲ್ಲಿನ ಮಾತು ದೇವರಿಗೆ ವಿಧೇಯರಾಗಿ ಆತನೊಂದಿಗೆ ಹೊಸ ಒಡಂಬಡಿಕೆಯಲ್ಲಿ ಪಾಲ್ಗೊಂಡಿದ್ದ ಎಲ್ಲಾ ದೇವರ ಜನರನ್ನು ಸೂಚಿಸುವದಾಗಿತ್ತಷ್ಟೆ.

**ವಚನ 9.** ದೇವರು [ಇಸ್ರಾಯೇಲ್ಯರನ್ನು] **ಕೈಹಿಡಿದ** ವೇಳೆಯಲ್ಲಿ ಹಳೆಯ **ಒಡಂಬಡಿಕೆ**ಯು ಕೊಡಲ್ಪಟ್ಟಿತ್ತು. ಇಲ್ಲಿ ಬಳಸಿರುವ ಭಾಷೆಯ ಒಬ್ಬ ತಂದೆಯು ತನ್ನ ಮಗುವನ್ನು ಕೈ ಹಿಡಿದು ನಡಿಸುವ ಚಿತ್ರಣವನ್ನು ಸೂಚಿಸುತ್ತದೆ. ಇರುವ ಪ್ರಕಾರ ದೇವರು "ತನ್ನ ಕೈಯನ್ನು ಅವರ ಕೈಯಲ್ಲಿಟ್ಟು ಅವರನ್ನು ಅವರ ಸೆರೆವಾಸದ ಸ್ಥಳವಾದ *ಐಗುಪ್ತದೇಶದೊಳಗಿಂದ ಹೊರಗೆ ನಡಿಸುವ*" ತನಕ ಜನರು ದುರ್ಬಲರಾಗಿದ್ದು **ಐಗುಪ್ತದೇಶ**ದೊಳಗಿಂದ ಹೊರಗೆ ಬರುವದಕ್ಕೆ ಅಶಕ್ತರಾಗಿದ್ದರು.[17] ದೇವರಿಗೆ ಆ ಕಾಲದಲ್ಲಿ ಅವರ ಆತ್ಮೀಕ ಪ್ರಗತಿಗೆ ಸೂಕ್ತವಾಗಿ ಸರಿಹೊಂದಿದ ಒಂದು ವ್ಯವಸ್ಥೆಯನ್ನು ಕೊಟ್ಟನು. ಅವರಿಗೆ ಮೊದಲು ಅವರ ಪಾಪಸ್ವಭಾವದ ಕುರಿತು ಜಾಗೃತಿಯು ಅವರಿಗೆ ಅಗತ್ಯವಿತ್ತು. ಹಳೆಯ ಒಡಂಬಡಿಕೆಯು ಪಾಪವನ್ನು ಬಯಲುಪಡಿಸುವದಕ್ಕೆ ಸಾಧ್ಯವಿತ್ತು, ಆದರೆ ಯಾವನೂ ಧರ್ಮಶಾಸ್ತ್ರದಿಂದ ನೀತಿವಂತನೆಂದು ನಿರ್ಣಯಿಸಲ್ಪಡುವದಕ್ಕೆ ಅಥವಾ ರಕ್ಷಣೆ ಹೊಂದುವದಕ್ಕೆ ಸಾಧ್ಯವಿರಲಿಲ್ಲ (ರೋಮಾ 3:20; ನೋಡಿರಿ ಗಲಾತ್ಯ 3:19-21). ಪಾಪಿಗಳನ್ನು ರಕ್ಷಿಸುವದಕ್ಕೆ ಅಶಕ್ತವಾದದ್ದಾಗಿ, ಅದು ಪಾಪಿಷ್ಠ ಮನುಷ್ಯನ ಅತಿ ಆಳವಾದ ಅಗತ್ಯತೆಯನ್ನು ಸಂಧಿಸುವದಕ್ಕೆ ವಿಫಲವಾಯಿತು.

ಇಸ್ರಾಯೇಲ್ಯರು ಪದೇ ಪದೇ ಧರ್ಮಶಾಸ್ತ್ರವನ್ನು ಉಲ್ಲಂಘಿಸುತ್ತಿದ್ದರಾದ್ದರಿಂದ ದೇವರು ಅವರಲ್ಲಿ ದೋಷವನ್ನು ಕಂಡುಕೊಂಡನು: **ಅವರು ನನ್ನ ಒಡಂಬಡಿಕೆಯಲ್ಲಿ ಸ್ಥಿರವಾಗಿ ನಿಲ್ಲಲಿಲ್ಲವಾದ್ದರಿಂದ.** ಅಲ್ಲದೆ ಆತನು ಒಡಂಬಡಿಕೆಯಲ್ಲಿ ಸಹ ದೋಷವನ್ನು ಕಂಡನು ಯಾಕೆಂದರೆ ಅದು ನಿರಂತರವಾಗಿ ದೋಷಿಯೆಂದು ತೀರ್ಪು ಮಾಡುತ್ತಿತ್ತು. ತನ್ನ ಜನರು

ಸದಾಕಾಲವೂ ಒಂದು ಭಯಂಕರವಾದ ಅಪರಾಧಭಾವನೆಯ ಭಾರವನ್ನು ಹೊತ್ತುಕೊಳ್ಳುವದು ಆತನಿಗೆ ಇಷ್ಟವಿರಲಿಲ್ಲ, ಆದಾಗ್ಯೂ ಅಪರಾಧಭಾವನೆಯನ್ನು ಉಂಟು ಮಾಡುವದು ಹಳೆಯ ಒಡಂಬಡಿಕೆಯ ಅವಶ್ಯಕವಾದ ಪರಿಣಾಮವಾಗಿತ್ತು. ಅದು ಮಾನವರ ಮೇಲೆ ಒಂದು ಉಪದ್ರವದಂತೆ ಇರುವದು ದೇವರಿಗೆ ಇಷ್ಟವಿರಲಿಲ್ಲವಾದ್ದರಿಂದ, ಆತನು ಹಳೆಯದನ್ನು ತೆಗೆದು ಹೊಸದನ್ನು ತರಬೇಕಾಯಿತು. ಆದದರಿಂದ, ಹಳೆಯ ಒಡಂಬಡಿಕೆಯು ಆತನ ನಿತ್ಯವಾದ ಯೋಜನೆಯಾಗಿರಲಿಲ್ಲ. ಹೊಸದು ಹಳೆಯದರ ರೀತಿಯಲ್ಲಿ ಇರುವಂಥದ್ದಾಗಿರಲಿಲ್ಲ.

ದೇವರು **ನಾನು ಅವರ ಚಿಂತೆಯನ್ನು ಬಿಟ್ಟೆನು** ಎಂದು ಹೇಳಿದಾಗ, ಅದು ಆತನ ಒಡಂಬಡಿಕೆಯನ್ನು ತಿರಸ್ಕರಿಸಿದ್ದರ ಸಹಜವಾದ ಫಲಿತವಾಗಿತ್ತು. ಈ ಹೇಳಿಕೆಯು ಇಸ್ರಾಯೇಲ್ಯರನ್ನು ರಕ್ಷಿಸುವದಕ್ಕೆ ಕಳಕಳಿ ಅಥವಾ ಆಸಕ್ತಿಯು ಇಲ್ಲದಿರುವಿಕೆಯನ್ನು ಸೂಚಿಸುವದಿಲ್ಲ. ಹೇಗೂ, ಜನರು ದೇವರನ್ನು ಸಂಪೂರ್ಣವಾಗಿ ತೊರೆದು ದೂರ ಹೋಗುವಾ ದೇವರ ಜನರ ಚಿಂತೆನ್ನಂತೂ ಬಿಡುವದು ನಿಜವಾದದ್ದು (ನೋಡಿರಿ ರೋಮಾ 1:18, 24, 26, 28).

## ಮನಸ್ಸುಗಳು ಮತ್ತು ಹೃದಯಗಳ ಮೇಲೆ ಬರೆಯಲ್ಪಟ್ಟಿರುವ ಒಂದು ಒಡಂಬಡಿಕೆ (8:10-12)

**[10]ಆ ದಿನಗಳು ಬಂದ ಮೇಲೆ ನಾನು ಇಸ್ರಾ ಯೇಲ್ ವಂಶದವರೊಂದಿಗೆ ಮಾಡಿಕೊಳ್ಳುವ**
**ಒಡಂಬಡಿಕೆಯು ಹೀಗಿರುವದು –**
**ನನ್ನ ಆಜ್ಞೆಗಳನ್ನು ಅವರ ಮನಸ್ಸಿನಲ್ಲಿ ಇಡು ವೆನು,**
**ಅವರ ಹೃದಯದ ಮೇಲೆ ಅವುಗಳನ್ನು ಬರೆಯುವೆನು;**
**ನಾನು ಅವರಿಗೆ ದೇವರಾಗಿರುವೆನು,**
**ಅವರು ನನಗೆ ಪ್ರಜೆಯಾಗಿರುವರು;**
**[11]ಒಂದೇ ಊರಿನವರೂ ಅಣ್ಣತಂದಿರೂ ಒಬ್ಬರನ್ನೊಬ್ಬರು –**
**ಕರ್ತನ ಜ್ಞಾನವನ್ನು ಪಡೆಯಿರಿ ಎಂದು ಬೋಧಿಸಬೇಕಾಗಿರುವದಿಲ್ಲ;**
**ಚಿಕ್ಕವರು ಮೊದಲುಗೊಂಡು ದೊಡ್ಡವರ ತನಕ ಎಲ್ಲರೂ ನನ್ನ ಜ್ಞಾನವನ್ನು ಪಡೆದಿರುವರು;**
**[12]ನಾನು ಅವರ ದುಷ್ಕೃತ್ಯಗಳ ವಿಷಯವಾಗಿ ಕ್ಷಮೆಯುಳ್ಳವನಾಗಿರುವೆನು,**
**ಅವರ ಪಾಪಗಳನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ**
**ಎಂದು ಕರ್ತನು ನುಡಿಯುತ್ತಾನೆ.**

**ವಚನ 10.** ಮೋರನೆಯದಾಗಿ, ಈ ಹೊಸ **ಒಡಂಬಡಿಕೆಯು** ದೇವಜನರ ಹೃದಯಗಳ ಮೇಲೆ ಬರೆಯಲ್ಪಡುವದು: **ನನ್ನ ಆಜ್ಞೆಗಳನ್ನು ಅವರ ಮನಸ್ಸಿನಲ್ಲಿ ಇಡುವೆನು, ಅವರ ಹೃದಯದ ಮೇಲೆ ಅವುಗಳನ್ನು ಬರೆಯುವೆನು.** ಅವರು ಹಳೆಯ ಒಡಂಬಡಿಕೆಯನ್ನು ಸಾಕಷ್ಟು ಮಟ್ಟಿಗೆ ಕಂಠಪಾಠ ಮಾಡಿದ್ದರಾದರೂ (ಧರ್ಮೋಪದೇಶಕಾಂಡ 6:6–9), "ಅವರ ಮನಸ್ಸಿನಲ್ಲಿ" ಮತ್ತು "ಅವರ ಹೃದಯದ ಮೇಲೆ" ತನ್ನ ಆಜ್ಞೆಗಳನ್ನು ಇಡುವ ಮೂಲಕ, ದೇವರು ಜನರಿಗೆ ಹೊಸ ಒಡಂಬಡಿಕೆಯನ್ನು ಕಂಠಪಾಠ ಮಾಡಬೇಕೆಂದು ಹೇಳುತ್ತಿಲ್ಲ. ದಾವೀದನಂತೆ, ಕೆಲವರು ಅದನ್ನು ತಮ್ಮ ಹೃದಯಗಳಲ್ಲಿಟ್ಟುಕೊಂಡಿದ್ದರು (ಕೀರ್ತನೆ 119:11). ಶಾಸ್ತ್ರವನ್ನು ಕಂಠಪಾಠ ಮಾಡಿ ಬಿಟ್ಟರೆ ಅದ್ಕಕೆ ವಿಧೇಯರಾಗುತ್ತೇವೆಂಬುದನ್ನು ಖಾತ್ರಿ ಪಡಿಸುವದಿಲ್ಲ, ಹಾಗಿದ್ದರೂ ಕಂಠಪಾಠ ಮಾಡುವದು ಖಂಡಿತವಾಗಿಯೂ ಪ್ರಯೋಜನಕರವಾದದ್ದು. ಕಟ್ಟಳೆಗಳನ್ನು "ಹೃದಯದ ಮೇಲೆ"

ಬರೆಯುವದು ಎಂಬುದು ಅದರ ಪರಿಣಾಮವಾಗಿ ಹೃದಯದ ಹೊಸ ಸಂಕಲ್ಪವನ್ನು ಹೊಂದಿರುವದು ಎಂದರ್ಥ ಕೊಡುತ್ತದೆ. ದೇವರ ಕಟ್ಟಳೆಗಳನ್ನು ತನ್ನ ಹೃದಯದಲ್ಲಿ ಇಟ್ಟುಕೊಂಡಿರುವವನು ಅವುಗಳಲ್ಲಿ ಆನಂದಿಸುತ್ತಾನೆ (ಕೀರ್ತನೆ 1:1-3) ಮತ್ತು ಅವುಗಳಿಗೆ ವಿಧೇಯನಾಗಲು ಬಯಸುತ್ತಾನೆ; ಆತನು ದೇವರ ಚಿತ್ತವನ್ನು ಪ್ರೀತಿಸುವನು. ಯಾವನೂ ಈ ಹೊಸ ಒಡಂಬಡಿಕೆಯನ್ನು ಅರ್ಥಮಾಡಿಕೊಂಡು ಅದನ್ನು ತನ್ನ ಹೃದಯದಲ್ಲಿ ನಂಬುವ ಹೊರತು ಈ ಒಡಂಬಡಿಕೆಯೊಳಗೆ ಪ್ರವೇಶಿಸಲಾರನು.

ಹಳೆಯ ಒಡಂಬಡಿಕೆಯ ವಿಷಯದಲ್ಲಿ ನೋಡುವದಾದರೆ, ಒಡಂಬಡಿಕೆ ಮತ್ತು ದೇವರನ್ನು ತಿಳಿಯಬೇಕೆಂದರೆ ಒಂದು ಮಗುವಿಗೆ ಅದರ ಬಗ್ಗೆ ಕಲಿಸಿ ಕೊಡಬೇಕಿತ್ತು. ದೇವರ ಕೆಲವು ಒಡಂಬಡಿಕೆಯ ಜನರು ಸಹ ಆತನ ಉಪದೇಶಗಳನ್ನು ಎಂದಿಗೂ ಹೃದಯಕ್ಕೆ ತೆಗೆದುಕೊಳ್ಳಲೇ ಇಲ್ಲ. ಇದಕ್ಕೆ ಪೌಲನು ಫಿಲಿಪ್ಪಿಯದ ಕ್ರೈಸ್ತರಿಗೆ ಬೆಳೆಸಿಕೊಳ್ಳಬೇಕೆಂದು ಬೇಡಿಕೊಂಡ ರೀತಿಯ ಒಂದು ಮನೋಭಾವದ ಅಗತ್ಯವಿರುತ್ತದೆಂಬುದನ್ನು ಸೂಚಿಸುತ್ತದೆ: “[ಕ್ರಿಸ್ತ ಯೇಸುವಿನಲ್ಲಿದ್ದಂಥ] ಮನಸ್ಸು ನಿಮ್ಮಲ್ಲಿಯೂ ಇರಲಿ” (ಫಿಲಿಪ್ಪಿ 2:5-11). ಕ್ರೈಸ್ತರು ಕ್ರಿಸ್ತನಲ್ಲಿದ್ದ ಅಧೀನಪಡಿಸಿಕೊಳ್ಳುವ ಮನೋಭಾವವನ್ನು ಹಂಚಿಕೊಂಡವರಾಗಿರತಕ್ಕದ್ದು. ಈ ಹೊಸ ಸಂಕಲ್ಪದ ಕಾರಣದಿಂದ, ಹೊಸ ಒಡಂಬಡಿಕೆಯ ಅಡಿಯಲ್ಲಿರುವವರು ಅದಕ್ಕೆ ವಿಧೇಯರಾಗಲು ಬಯಸುತ್ತಾರೆ. ನಾವು ವಿಧೇಯರಾದಂತೆ, ಅದು ನಮಗೆ ಹೆಚ್ಚು ಅಮೂಲ್ಯವಾಗಿ ಬೆಳೆಯುತ್ತದೆ. ಒಬ್ಬ ಪರಿಪಕ್ವವುಳ್ಳ ಕ್ರೈಸ್ತನು ಪ್ರೀತಿಯಿಂದಾಗಿ ವಿಧೇಯನಾಗುತ್ತಾನೆ, ಹೊರತು ತಾನು ವಿಧೇಯನಾಗಲೇ ಬೇಕಿದೆ ಎಂಬುದಕ್ಕಾಗಿ ಅಲ್ಲ. ಅದು ಆತನ ಸ್ವಭಾವದ ಭಾಗವಾಗುತ್ತದೆ; ಅದು ಆತನ ಹೃದಯದಲ್ಲಿಯೇ ನೇಡಲ್ಪಟ್ಟಿರುತ್ತದೆ.

ಹೊಸ ಹೃದಯ ಅಥವಾ ಹೊಸ ಆತ್ಮದ ಭಾವನೆಯು ಯೆಹೆಜ್ಕೇಲನ ಪುಸ್ತಕದಲ್ಲಿ ಸಹ ಕಂಡು ಬರುತ್ತದೆ (ನೋಡಿರಿ ಯೆಹೆಜ್ಕೇಲ 11:19, 20), ಅಲ್ಲಿ ವಾಕ್ಯಭಾಗವು ಅಂತಹ ರೀತಿಯಲ್ಲಿ ಒಡಂಬಡಿಕೆಯನ್ನು ಹೊಂದಿರುವವನು ಪೂರ್ಣ ವಿಧೇಯತೆಯನ್ನು ತಲುಪುತ್ತಾನೆ ಎಂದು ಹೇಳುತ್ತದೆ. ಈ ಯೋಚನೆಯು ಇಸ್ರಾಯೇಲ್ಯರು ಬಾಬಿಲೋನಿನ ಸೆರೆವಾಸದಿಂದ ಹಿಂದಿರುಗಿ ಬಂದದ್ದರೊಂದಿಗೆ ಸಂಬಂಧ ಹೊಂದಿತ್ತು. ಇಸ್ರಾಯೇಲ್ಯರು ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವ ವಾಗ್ದಾನ ಮಾಡಿದ್ದರು (ವಿಮೋಚನಕಾಂಡ 24:7), ಆದರೆ ಅವರು ತಮ್ಮ ಒಳ್ಳೇ ಇಂಗಿತಗಳಿಗೆ ಸರಿಹೊಂದುವಂತೆ ತಮ್ಮ ಹೃದಯದ ನೈತಿಕ ಶಕ್ತಿಯನ್ನು ಬಳಸಿಕೊಳ್ಳಲಿಲ್ಲ.[18] ಅಲ್ಲಿ “ಶಾರೀರಾಧೀನಸ್ವಭಾವದ ನಿಮಿತ್ತ” ಒಂದು ಮೇಲುಗೈ ಸಾಧಿಸುತ್ತಿದ್ದ ದುರ್ಬಲತೆಯು ಇತ್ತು (ರೋಮಾ 8:3). ದಾವೀದನು ದೇವರ ಕಟ್ಟಳೆಯನ್ನು ತನ್ನ ಹೃದಯದಲ್ಲಿಟ್ಟುಕೊಂಡಿದ್ದನಾದರೂ (ಕೀರ್ತನೆ 119:11), ಆತನು ಆಗಲೂ ಅದನ್ನು ಪರಿಪೂರ್ಣವಾಗಿ ಕೈಕೊಂಡು ನಡೆಯುವದಕ್ಕೆ ವಿಫಲನಾದನು. ಆದುದರಿಂದ, ಈ ಮಾತಿನ ಅರ್ಥವು ಧರ್ಮಶಾಸ್ತ್ರವನ್ನು “ಆಂತರಿಕಗೊಳಿಸಿಕೊಳ್ಳುವದು” ಎಂಬುದಕ್ಕಿಂತ ಅಧಿಕವಾಗಿರುತ್ತದೆ.[19] ಯೇಸು ಪರ್ವತದ ಮೇಲಿನ ಪ್ರಸಂಗದಲ್ಲಿ ತನ್ನ ಶಿಷ್ಯರಿಗೆ ಹಳೆಯ ಒಡಂಬಡಿಕೆಯಲ್ಲಿ ದೇವರ ಉದ್ದೇಶದ ಬಗ್ಗೆ ಅರ್ಥಮಾಡಿಸಿಕೊಡುವದಕ್ಕೆ ಪ್ರಯತ್ನಿಸಿದನು. ಅವರು ರಾಜ್ಯವನ್ನು ಪ್ರವೇಶಿಸಬೇಕಾದರೆ ಅವರ ನೀತಿಯು ಫರಿಸಾಯರ ಮತ್ತು ಸದ್ದುಕಾಯರ ಬಾಹ್ಯ, ಔಪಚಾರಿಕ ನೀತಿಗಿಂತಲೂ ಅಧಿಕವಾಗಿರ ಬೇಕಾಗಿತ್ತು (ಮತ್ತಾಯ 5:20).

ದೇವರ ಹೊಸ ಒಡಂಬಡಿಕೆಗೆ ವಿಧೇಯನಾಗಬೇಕೆಂದು ಒಬ್ಬನು ಹೃದಯದಲ್ಲಿ ಮಾಡಿಕೊಳ್ಳುವ ಸಮರ್ಪಣೆಯ ಮೂಲಕ “ಶಕ್ತಿ”ಯು ಬರುತ್ತದೆ. ಒಂದು ಎಳೆಗೂಸು ಹಾಲಿಗಾಗಿ ಅಳುವ ಪ್ರಕಾರವೇ ವಾಕ್ಯಕ್ಕಾಗಿ ಹಂಬಲಿಸುತ್ತಾ ಅದರ ಮೂಲಕ ರಕ್ಷಣೆ ಹೊಂದುವಂತೆ

ಬೆಳೆಯುವದರೊಂದಿಗೆ ದೊಡ್ಡ ಪ್ರಮಾಣದಲ್ಲಿ ಶಕ್ತಿಯನ್ನು ಅಭಿವೃದ್ಧಿಪಡಿಸಿಕೊಳ್ಳಬಹುದಾಗಿದ (1 ಪೇತ್ರ 2:1, 2).

**ನಾನು ಅವರಿಗೆ ದೇವರಾಗಿರುವೆನು** ಎಂಬುದರ ಅರ್ಥವು ಪ್ರತಿಯೊಬ್ಬ ವ್ಯಕ್ತಿಯು ವೈಯಕ್ತಿಕವಾಗಿ ದೇವರ ಬಳಿಗೆ ಬರಬಲ್ಲನು. ಹಳೆಯ ಒಡಂಬಡಿಕೆಯು ಜನರು ಮತ್ತು ದೇವರ ನಡುವೆ ಒಂದು ದೊಡ್ಡ ಅಂತರವನ್ನು ಇಟ್ಟಿತ್ತು, ಅದು ದೇವದರ್ಶನಗುಡಾರದಲ್ಲಿನ ತೆರೆಯ ಮೂಲಕ ದೃಷ್ಟಾಂತಪಡಿಸಲ್ಪಟ್ಟಿದೆ. ಹೊಸ ಒಡಂಬಡಿಕೆಯ ಅಡಿಯಲ್ಲಿ, ನಾವು ಆತನ ಬಳಿಗೆ ನೇರವಾಗಿ ಬರಬಹುದು, ಯಾಕೆಂದರೆ ಆತನು ನಮ್ಮ ದೇವರು ಮತ್ತು ನಾವು ಆತನ ಪ್ರಜೆಯಾಗಿದ್ದೇವೆ, ಆತನ ಕುಟುಂಬವಾಗಿದ್ದೇವೆ. ಹಳೆಯದ್ದರ ಅಡಿಯಲ್ಲಿ, ಅಲ್ಲಿ ವಸ್ತುತಃ ಒಂದು ವರ್ಗದ ವ್ಯವಸ್ಥೆಯಿತ್ತು, ಅದರ ಮೂಲಕ ಯಾಜಕರು ಸಾಮಾನ್ಯ ಜನರಿಗಿಂತ ಮೇಲಿನವರೆಂದು ಪರಿಗಣಿಸಲ್ಪಟ್ಟಿದ್ದರು. ದೇವರ ರಾಜ್ಯದಲ್ಲಿನ ಪ್ರಜೆಗಳೆಲ್ಲರೂ ಹಳೆಯ ಒಡಂಬಡಿಕೆಯ ಯಾಜಕರಿಗೆ ಸಮಾನತೆಯಲ್ಲಿರುತ್ತಾರೆ.

ಒಂದು ಅರ್ಥದಲ್ಲಿ, ಇಸ್ರಾಯೇಲ್ಯರಿಗೆ ದೇವರು ತನ್ನನ್ನು ಪ್ರಕಟಿಸಿಕೊಂಡಿದ್ದನಾ ದ್ದರಿಂದ ಅವರು ದೇವರನ್ನು ಬಲ್ಲವರಾಗಿದ್ದರು. ಆತನು ಹೀಗೆ ಘೋಷಿಸಿದನು, "ನಾನು ಅವರಿಗೆ ದೇವರರಾಗಿರುವೆನು, **ಅವರು ನನ್ನ ಪ್ರಜೆಯಾಗಿರುವರು**." ಆತನ ಕೇಳುವ ಅರ್ಹತೆಗಳನ್ನು ತಿರಸ್ಕರಿಸುವದು, ಅಥವಾ ಅವುಗಳನ್ನು ಕೈಕೊಂಡು ನಡೆಯಲು ವಿಫಲರಾಗುವದು ದೇವರನ್ನು ತಿಳಿಯದೆ ಇರುವದಕ್ಕೆ ಸಮಾನವೆಂದು ಪರಿಗಣಿಸಲ್ಪಟ್ಟಿತ್ತು (ನೋಡಿರಿ ನ್ಯಾಯಸ್ಥಾಪಕರು 2:10). ದೇವರನ್ನು ತಿಳಿಯುವದೆಂದರೆ ಆತನನ್ನು "ಅವರ ಸಮಾಲೋಚಕನನ್ನಾಗಿ, ಅವರನ್ನು ಕಾಯುವವನೆಂದು, ಅವರ ವಿಮೋಚಕನೆಂದು, ಅವರ ಮಾರ್ಗದರ್ಶಕನೆಂದು" ಗುರುತಿಸುವದಾಗಿತ್ತು.[20] ಹೋಶೇಯನು ಜನರ ಅನೈತಿಕ ಜೀವನವನ್ನು ದೇವರನ್ನು ತಿಳಿಯದಿರುವದು ಎಂಬುದರೊಂದಿಗೆ ಸಮಾನಗೊಳಿಸುತ್ತಾನೆ (ಹೋಶೇಯ 4:1-3). ಹೊಸ ಒಡಂಬಡಿಕೆಯ ಅಡಿಯಲ್ಲಿ ಸಹ ಅದೇ ತತ್ವವು ಸತ್ಯವಾದದ್ದು. ಒಂದು ಪಾಪಭರಿತ ಜೀವನಶೈಲಿಯು "ಕ್ರಿಸ್ತನನ್ನು ಕಲಿತುಕೊಳ್ಳ [ದಿರುವದು]" ಎಂದು ಬಣ್ಣಿಸಲ್ಪಟ್ಟಿದೆ:

> *ನೀವಾದರೋ ಕ್ರಿಸ್ತನ ಧರ್ಮವು ಅಂತದೆಂದು ಕಲಿತುಕೊಳ್ಳಲಿಲ್ಲ.* ಆತನನ್ನೇ ಕೇಳಿದಿರಲ್ಲಾ, ಆತನಲ್ಲಿಯೇ ಉಪದೇಶವನ್ನು ಹೊಂದಿದಿರಲ್ಲಾ. ಯೇಸುವಿನಲ್ಲಿರುವ ಸತ್ಯೋಪದೇಶವು ಯಾವದೆಂದರೆನ – ನೀವು ನಿಮ್ಮ ಹಿಂದಿನ ನಡತೆಯನ್ನು ಅನುಸರಿಸದೆ ಪೂರ್ವಸ್ವಭಾವವನ್ನು ತೆಗೆದು ಹಾಕಿಬಿಡಬೇಕು; ಅದು ಮೋಶಕರವಾದ ದುರಾಶೆಗಳಿಂದ ಕೆಟ್ಟಹೋಗುವಂಥದು. ನೀವು ನಿಮ್ಮ ಆಂತರ್ಯದಲ್ಲಿ ಹೊಸಬರಾಗಿ ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ. ಆ ಸ್ವಭಾವವು ದೇವರಹೋಲಿಕೆಯ ಮೇರೆಗೆ ಸತ್ಯಾನುಗುಣವಾದ ನೀತಿಯುಳ್ಳದ್ದಾಗಿಯೂ ದೇವ ಭಯವುಳ್ಳದ್ದಾಗಿಯೂ ನಿರ್ಮಿಸಲ್ಪಟ್ಟಿದೆ (ಎಫೆಸ 4:20-24; ಒತ್ತಿ ಹೇಳಿದ್ದು ನನ್ನದು).

ತಮ್ಮ ಹೃದಯಗಳನ್ನು ಬದಲಾಯಿಸಿಕೊಳ್ಳುವದು ಎಫೆಸದವರ ಹೊಣೆಗಾರಿಕೆ ಯಾಗಿತ್ತು! ಅವರು ಕ್ರಿಸ್ತನ ಕುರಿತು ಕಲಿತುಕೊಂಡದ್ದನ್ನು ಸರಿಯಾಗಿ ಅರ್ಥಮಾಡಿಕೊಂಡು ಅದನ್ನು ಅನ್ವಯಪಡಿಸಿಕೊಂಡಿದ್ದರೆ, ಅವರು "ಆಂತರ್ಯದಲ್ಲಿ ಹೊಸಬರಾಗಿ" ಇರುತ್ತಿದ್ದರು (4:23). ಸ್ಪಷ್ಟವಾಗಿರುವ ಪ್ರಕಾರ, ಅವರು ಅಂಥ ಒಂದು ಆತ್ಮವನ್ನು ಮುಂಚೆಯೇ ಹೊಂದಿದ್ದರು, ಅವರಿಗೆ ಅದನ್ನು ಪುನಃ ಹೊತ್ತಿಸುವ ಅಗತ್ಯವಿತ್ತು. ಇದನ್ನು ಎಫೆಸ 5:18ರಲ್ಲಿನ ಆಜ್ಞೆಗೆ ವಿಧೇಯರಾಗುವ ಮೂಲಕ ಮಾಡಬಹುದಾಗಿದೆ: "ಮದ್ಯಪಾನ ಮಾಡಿ ಮತ್ತರಾಗಬೇಡಿರಿ; ಅದರಿಂದ ಪಟಿಂಗತನವು ಹುಟ್ಟುತ್ತದೆ . . . ಪವಿತ್ರಾತ್ಮಭರಿತರಾಗಿರಿ." ಒಬ್ಬನು ತನ್ನ ಹೃದಯದಲ್ಲಿ

ದೇವರನ್ನು ಪ್ರೀತಿಸುವದಾದರೆ, ಆತನು ಪಾಪ ಮಾಡುವ ಮೂಲಕ ದೇವರಿಗೆ ನೋವುಂಟು ಮಾಡುವದಕ್ಕೆ ಬಯಸುದಿಲ್ಲ.

**ವಚನ 11. ಒಂದೇ ಊರಿನವರೂ ಅಣ್ಣತಂದಿರೂ ಒಬ್ಬರನ್ನೊಬ್ಬರು – ಕರ್ತನ ಜ್ಞಾನವನ್ನು ಪಡೆಯಿರಿ ಎಂದು ಬೋಧಿಸಬೇಕಾಗಿರುವದಿಲ್ಲ.** ಒಬ್ಬ ವ್ಯಕ್ತಿಯು ಹೊಸ ಒಡಂಬಡಿಕೆಯನ್ನು ಪ್ರವೇಶಿಸಬೇಕಾದರೆ ಆತನು ನಿಜವಾಗಿಯೂ ಹೊಸದಾಗಿ ಹುಟ್ಟಿರಬೇಕು, ಅದರೆ ಹಳೆಯ ಒಡಂಬಡಿಕೆಯಲ್ಲಿ ಒಂದು ಮಗುವು ಶಾರೀರ ಸಂಬಂಧವಾಗಿ ಹುಟ್ಟುವ ಮೂಲಕ ಸೇರುತ್ತಿತ್ತು. ಹೀಗೆ ಹಳೆಯ ಒಡಂಬಡಿಕೆಯನ್ನು ಅನುಸರಿಸುವದು ವೈಯಕ್ತಿಕ ಸಮರ್ಪಣೆ ಎಂಬುದಕ್ಕಿಂತಲೂ ಅದೊಂದು ಕುಟುಂಬದ ಅಥವಾ ಜನಾಂಗದ ಪದ್ಧತಿಯಾಗಿರುತ್ತಿತ್ತು. ಹಳೆಯ ಒಡಂಬಡಿಕೆಯು ಪ್ರಾಥಮಿಕವಾಗಿ ಇಸ್ರಾಯೇಲ್ ಜನರಿಗಾಗಿ ಆಗಿತ್ತು, ಆದರೆ ಹೊಸದು ಯೆಹೂದ್ಯರಾಗಿರಲಿ ಅಥವಾ ಅನ್ಯಜನರಾಗಲಿ ಎಲ್ಲಾ ದೇಶಗಳ ಜನರಿಗೋಸ್ಕರವಾಗಿ ಇರುತ್ತದೆ. ಕೆಲವರು ಒಬ್ಬ ಮಗು ತನ್ನ ಹೆತ್ತವರ ನಂಬಿಕೆಯ ಮುಖಾಂತರವಾಗಿ ರಾಜ್ಯವನ್ನು ಪ್ರವೇಶಿಸಬಹುದೆಂದು ತಪ್ಪಾಗಿ ಭಾವಿಸಿಕೊಂಡಿರುತ್ತಾರೆ. ಹೆತ್ತವರು ಒಂದು ಮಗುವಿಗೆ "ದೀಕ್ಷಾಸ್ನಾನ" (ಸಾಮಾನ್ಯವಾಗಿ ಚಿಮುಕಿಸುವ ಮೂಲಕ) ಮಾಡಿಸಿರಬಹುದು, ತತ್ಪರಿಣಾಮವಾಗಿ ಮಗುವು ಪರಿವರ್ತನೆ ಅಥವಾ ವಿಧೇಯತೆಯ ಅಗತ್ಯತೆಯನ್ನು ಎಂದಿಗೂ ಕಾಣುವದಿಲ್ಲ. ಹಳೆಯ ಒಡಂಬಡಿಕೆಯೊಳಗೆ ಹುಟ್ಟಿರುವ ವ್ಯಕ್ತಿಯು ದೇವರನ್ನು ತಿಳಿಯಬೇಕಾದರೆ ಆತನಿಗೆ ಉಪದೇಶ ಮಾಡಬೇಕಾದ ಅಗತ್ಯವಿತ್ತು (ವ. 11). ಹೊಸ ಒಡಂಬಡಿಕೆಯಲ್ಲಿ ಅದು ತದ್ವಿರುದ್ಧವಾಗಿರುತ್ತದೆ! ಒಬ್ಬನು "ನಂಬಿಕೆಯಿಂದ ಕೇಳಿಸಿಕೊಳ್ಳುವ" ಮೂಲಕ ದೇವರನ್ನು ಜ್ಞಾನವನ್ನು ಪಡಕೊಳ್ಳುತ್ತಾನೆ (ಗಲಾತ್ಯ 3:2). "ನೀರಿನಿಂದಲೂ ಆತ್ಮದಿಂದಲೂ ಹುಟ್ಟುವದು" ಸೇರಿದಂತೆ, "ಹೊಸದಾಗಿ ಹುಟ್ಟುವದರ" ಮೂಲಕ ವೈಯಕ್ತಿಕ ನಂಬಿಕೆ ಮತ್ತು ವಿಧೇಯತೆಗಳು ಅಗತ್ಯವಿರುತ್ತವೆ (ಯೋಹಾನ 3:5; 1 ಪೇತ್ರ 1:23; ನೋಡಿರಿ 1 ಕೊರಿಂಥ 4:15). ಇಬ್ರಿಯ 8:8-12ರ ವಾಕ್ಯಭಾಗವು ಹೆಚ್ಚುಕಡಿಮೆ ಪ್ರಾಸಂಗಿಕವಾಗಿ ಮತ್ತು ಆದಾಗ್ಯೂ ಪರಿಣಾಮಕರವಾಗಿಯೂ ಶಿಶು ದೀಕ್ಷಾಸ್ನಾನವನ್ನು ತಳ್ಳಿ ಹಾಕುತ್ತದೆ ಯಾಕೆಂದರೆ ಆ ಆಚಾರವು ಹೊಸದನ್ನು ಮತ್ತೊಂದು ಬಾರಿ ಹಳೆಯದನ್ನಾಗಿ ಮಾಡುತ್ತದೆ, ಅದರ ಅಡಿಯಲ್ಲಿ ಒಬ್ಬನು ಜನನದ ಮೂಲಕ ಒಡಂಬಡಿಕೆಯಲ್ಲಿ ಸೇರುತ್ತಿದ್ದನು ಮತ್ತು ಅನಂತರದಲ್ಲಿ "ಕರ್ತನ ಜ್ಞಾನವನ್ನು" ಪಡೆದುಕೊಳ್ಳುವದಕ್ಕೆ ಆತನಿಗೆ ಉಪದೇಶ ಮಾಡಬೇಕಾಗಿತ್ತು. ಕ್ರೈಸ್ತ ಯುಗದಲ್ಲಿ, ಒಬ್ಬನು ಸುವಾರ್ತೆಯನ್ನು ಅರ್ಥಮಾಡಿಕೊಳ್ಳುವ ಮೂಲಕ "ಕರ್ತನ ಜ್ಞಾನವನ್ನು" ಪಡಕೊಳ್ಳಬೇಕಿತ್ತು ಮತ್ತು ಹೊಸ ಒಡಂಬಡಿಕೆಯನ್ನು ಪ್ರವೇಶಿಸುವದಕ್ಕೆ ದೇವರ ಅಗತ್ಯತೆಗಳಿಗೆ ವಿಧೇಯನಾಗಬೇಕಿತ್ತು. ಆತನು ಯೇಸುವಿನಲ್ಲಿ ನಂಬಿಕೆಯಿಡುವದಕ್ಕೆ ದೇವರು ಕೋರುವ ಅಗತ್ಯತೆಗಳನ್ನು ಕುರಿತು ಕಲಿತುಕೊಳ್ಳಬೇಕಿತ್ತು ಮತ್ತು ಪಶ್ಚಾತ್ತಾಪ ಪಡುವ, ಕ್ರಿಸ್ತನನ್ನು ಅರಿಕೆ ಮಾಡುವ ಮೂಲಕ, ಮತ್ತು ದೀಕ್ಷಾಸ್ನಾನದಲ್ಲಿ ಆತನೊಂದಿಗೆ ಹೂಣಲ್ಪಡುವ ಮೂಲಕ ಸಮರ್ಪಕವಾದ "ಕಲಿಸಲ್ಪಟ್ಟ ಬೋಧನೆ"ಗೆ ಮನಃಪೂರ್ವಕವಾಗಿ ವಿಧೇಯನಾಗತಕ್ಕದ್ದು (ರೋಮಾ 6:17, 18).

**ಚಿಕ್ಕವರು ಮೊದಲುಗೊಂಡು ದೊಡ್ಡವರ ತನಕ ಎಲ್ಲರೂ ನನ್ನ ಜ್ಞಾನವನ್ನು ಪಡೆದಿರುವರು.** "ಕರ್ತನ ಜ್ಞಾನವನ್ನು ಪಡೆಯುವದಕ್ಕೆ" ರಾಜ್ಯದಲ್ಲಿ ಒಬ್ಬನು ತನ್ನ ಜೊತೆಯ ಪ್ರಜೆಗಳಿಗೆ ಉಪದೇಶಿಸುವ ಅಗತ್ಯವಿರುವದಿಲ್ಲ. ದೇವರು "ಎಲ್ಲರೂ ನನ್ನ ಜ್ಞಾನವನ್ನು ಪಡೆದಿರುವರು" ಎಂದು ಹೇಳಿದನು – ಇಲ್ಲವಾದರೆ, ಅವರು ಕ್ರಿಸ್ತನ ರಾಜ್ಯದಲ್ಲಿ ಇರುವದಕ್ಕಾಗುವದಿಲ್ಲ. ದೇವರ ಚಿತ್ತವು ಈಗಲೂ ಉಪದೇಶದ ಮೂಲಕ ನಮ್ಮ ಹೃದಯಗಳಲ್ಲಿ ಮತ್ತು ಮನಸ್ಸುಗಳಲ್ಲಿ ಇಡಲ್ಪಟ್ಟಿದೆ. ತನ್ನ ಮೂಲಕವಾಗಿ ದೇವರ ಬಳಿಗೆ ಬರುವವರೆಲ್ಲರಿಗೂ ಮೊದಲು ಉಪದೇಶ

ಮಾಡತಕ್ಕದ್ದೆಂದು ಯೇಸು ಹೇಳಿದನು (ಯೋಹಾನ 6:44, 45). ನಂಬಿಕೆಯು "ವಾಕ್ಯವನ್ನು ಕೇಳುವ" ಮೂಲಕ ಮಾತ್ರವೇ ಬರುತ್ತದೆ (ರೋಮಾ 10:17).

**ವಚನ 12.** ಸಾಧ್ಯವಿರುವ ಅತ್ಯಂಥ ದೊಡ್ಡ ಆಶೀರ್ವಾದವು ಈಗ ನಮ್ಮದಾಗಿರುತ್ತದೆ: **ನಾನು ಅವರ ದುಷ್ಕೃತ್ಯಗಳ ವಿಷಯವಾಗಿ ಕ್ಷಮೆಯುಳ್ಳವನಾಗಿರುವೆನು** (ಕರುಣೆಯುಳ್ಳವನಾಗಿದ್ದು), **ಅವರ ಪಾಪಗಳನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ**. ಮೊದಲ ಒಡಂಬಡಿಕೆಯಲ್ಲಿದ್ದ ಕೊರತೆಯೆಂದರೆ ನಿಜವಾದ ಕ್ಷಮಾಪಣೆಯೇ ಆಗಿತ್ತು (ಇಬ್ರಿಯ 9:9; 10:1, 2, 11). ಅದು ಧಾರ್ಮಿಕ ಆಚಾರಗಳ ಬಗ್ಗೆ ಕ್ರಮ ಕೈಗೊಳ್ಳುವದಾಗಿತ್ತು, ಆದರೆ "ಅದು ಹೇಗೆ ಹೃದಯದ ಮತ್ತು ಜೀವನ ಶುದ್ಧತೆಯ ಮೇಲೆ ಪರಿಣಾಮ ಬೀರಬಲ್ಲದು?"[21] "ಹಳೆಯ ಒಡಂಬಡಿಕೆಯ ಯಜ್ಞಗಳು ಪಾಪಗಳನ್ನು *ಜ್ಞಾಪಕಕ್ಕೆ* ತರುತ್ತಿದ್ದವು, ಹೊರತು ಪಾಪಗಳ ನಿವಾರಣೆಯನ್ನಲ್ಲ (ಇಬ್ರಿಯ 10:1-3, 18)."[22] ಒಬ್ಬ ಮನುಷ್ಯನು ಸಂಸ್ಕಾರದಲ್ಲಿ ಸರಿಯಿದ್ದು ಹೃದಯದಲ್ಲಿ ತಪ್ಪಾಗಿರಬಹುದಾಗಿತ್ತು, ಮತ್ತು ಹಾಗಿದ್ದರೂ ಬೇರೆಯವರ ದೃಷ್ಟಿಯಲ್ಲಿ ನೀತಿವಂತನೆಂದು ಪರಿಗಣಿಸಲ್ಪಡಬಹುದಿತ್ತು (ಲೂಕ 18:9-14). ಧರ್ಮಶಾಸ್ತ್ರದ ಧಾರ್ಮಿಕ ವಿಧಿಗಳು ಆತ್ಮೀಕ ಸತ್ಯಗಳ ಕುರಿತ ಒಂದು ಸಮರ್ಪಕವಾದ ಜ್ಞಾನಕ್ಕೆ ನಡಿಸಲಿಲ್ಲ ಯಾಕೆಂದರೆ ಅದರ ನಿಬಂಧನೆಗಳ ಉದ್ದೇಶವು ಪಾಪದ ಕಡೆಗೆ ದೇವರಿಗಿರುವ ಅಸಹನೆಯನ್ನು ತೋರಿಸಿ ಕೊಡುವದಾಗಿತ್ತು. ಈ ಧಾರ್ಮಿಕ ಆಚಾರಗಳು ಅನೇಕ ಯೆಹೂದ್ಯರಿಗೆ ಕೇವಲ ವೃತಾಚಾರಣೆಗಳಾಗಿದ್ದವು. ಈಗ, ವರ್ಷಕ್ಕೊಮ್ಮೆ ಪಾಪಗಳನ್ನು ಜ್ಞಾಪಿಸುವಿಕೆಯ ಬದಲಾಗಿ (ಇಬ್ರಿಯ 10:1, 2), ಈಗ ನಾವು ಕರ್ತನ ಭೋಜನದಲ್ಲಿ ಪ್ರಾಮಾಣಿಕವಾಗಿ ಪಾಲ್ಗೊಳ್ಳುವಾಗ ನಮ್ಮ ಪಾಪಗಳನ್ನು ಸಂಪೂರ್ಣವಾಗಿ ನಿವಾರಿಸಲ್ಪಟ್ಟಿವೆ ಎಂಬುದನ್ನು ಪ್ರತಿ ವಾರವೂ ಜ್ಞಾಪಿಸುವಿಕೆಯು ಇರುತ್ತದೆ (ಮತ್ತಾಯ 26:28). ಕ್ರಿಸ್ತನಲ್ಲಿ ದೇವರು ನಮ್ಮನ್ನು ನಾವು ಎಂದಿಗೂ ಪಾಪವನ್ನು ಮಾಡಲೇ ಇಲ್ಲವೇನೋ ಎಂಬಂತೆ ಕಾಣುತ್ತಾನೆ. ನಮ್ಮ ಕ್ಷಮಾಪಣೆಯ ತಳಹದಿಯು, ಹಳೆಯ ಒಡಂಬಡಿಕೆಯಲ್ಲಿ ಇರುತ್ತಿದ್ದ ಪ್ರಕಾರ ನಮ್ಮ ಪಶ್ಚಾತ್ತಾಪವಲ್ಲ, ಆದರೆ ಕ್ರಿಸ್ತನ ಯಜ್ಞವೇ ಆಗಿದೆ (ರೋಮಾ 8:33, 34). ಹೇಗೂ, ಈಗಲೂ ಪಶ್ಚಾತ್ತಾಪವು ಅವಶ್ಯಕವಾಗಿರುತ್ತದೆ (ಲೂಕ 13:3, 5). ಕ್ರಿಸ್ತನಲ್ಲಿ, ಪಶ್ಚಾತ್ತಾಪದೊಂದಿಗೆ ಒಪ್ಪಿಕೊಳ್ಳಲ್ಪಡುವ ಪಾಪವನ್ನು ತೆಗೆದು ಬಿಡಲಾಗುವದು (1 ಯೋಹಾನ 1:7-10).

ದೇವರು ನಮ್ಮ ಪಾಪಗಳನ್ನು ಮರೆತು ಬಿಡಬಲ್ಲನೋ? ನಿಶ್ಚಯವಾಗಿಯೂ, ಇದರರ್ಥವು ಆತನು ನಮ್ಮ ಪಾಪದ ಅಪರಾಧವನ್ನು ಸ್ವಲ್ಪವೂ ಬಿಡದೆ ದಾಖಲೆಯೊಳಗಿಂದ ಅಳಿಸಿ ಹಾಕುವನು ಮತ್ತು ಇನ್ನೆಂದಿಗೂ ಅದನ್ನು ನಮ್ಮ ಲೆಕ್ಕಕ್ಕೆ ತಂದುಕೊಳ್ಳುವದಿಲ್ಲ ಎಂದಾಗಿದೆ. "ನಾನು ಕ್ಷಮಿಸುವೆನು, ಆದರೆ ನೀನು ಮಾಡಿದ್ದನ್ನು ನಾನು ಎಂದಿಗೂ ಮರೆಯುವದಿಲ್ಲ" ಎಂದು ಹೇಳುವವನು ದೇವರು ಕ್ಷಮಿಸಿದ ರೀತಿಯಲ್ಲಿ ಕ್ಷಮಿಸಿಲ್ಲ ಎಂದಾಗುತ್ತದೆ.

## ಎಂದಿಗೂ ಹಳತಾಗಿ ಹೋಗದ ಒಂದು ಒಡಂಬಡಿಕೆ (8:13)

**13ಇಲ್ಲಿ ಹೊಸ ಒಡಂಬಡಿಕೆಯೆಂದು ಹೇಳಿದ್ದರಲ್ಲಿ ಮೊದಲಿದ್ದದ್ದನ್ನು ಹಳೇದಾಗಿ ಮಾಡಿದ್ದಾನೆ. ಆದರೆ ಹಳೇದಾಗುತ್ತಾ ಮುದಿಯಾಗುವಂಥದಕ್ಕೆ ಅಂತ್ಯವು ಸಮೀಪವಾಗಿದೆ.**

**ವಚನ 13.** ನಾಲ್ಕನೆಯದಾಗಿ, ಹೊಸ ಒಡಂಬಡಿಕೆಯು ಎಂದಿಗೂ ಹಳೇದಾಗಿ ಹೋಗುವದಿಲ್ಲ. ದೇವರು ಒಂದು **ಹೊಸ ಒಡಂಬಡಿಕೆಯನ್ನು** ಪ್ರತಿಷ್ಠಾಪಿಸಿದಾಗ, **ಆತನು ಮೊದಲಿದ್ದದ್ದನ್ನು ಹಳೇದಾಗಿ ಮಾಡಿದ್ದಾನೆ. ಆದರೆ ಹಳೇದಾಗುತ್ತಾ ಮುದಿಯಾಗುವಂಥದಕ್ಕೆ**

**ಅಂತ್ಯವು ಸಮೀಪವಾಗಿದೆ.**

"ಹೊಸ ಒಡಂಬಡಿಕೆ" ಎಂಬ ಮಾತುಗಳು ಸ್ವತಃ ಮೊದಲನೆಯದ್ದು ಹಳೇದು ಮತ್ತು ಅಪ್ರಸ್ತುತವಾಗಿದೆ ಎಂಬುದನ್ನು ಪ್ರಕಟಗೊಳಿಸುತ್ತವೆ. ಪೌಲನು 2 ಕೊರಿಂಥ 3:6, 14ರಲ್ಲಿ ಮುಂಚಿನ ಒಡಂಬಡಿಕೆಯನ್ನು ಸೂಚಿಸುವದಕ್ಕೆ "ಹಳೆಯ" ಎಂಬ ಪದವನ್ನು ಬಳಸಿದನು. ಮೊದಲ ಒಡಂಬಡಿಕೆಯನ್ನು "ಹಳೆಯದಾಗಿ" ಮಾಡುವದು ಎಂದರೆ ಅದು "ಇನ್ನು ಮೇಲೆ ಅವಶ್ಯಕವಿಲ್ಲ" ಎಂದರ್ಥವಾಗಿತ್ತು, ಅದು ಅಂತ್ಯವಾದಾಗ (ಇಲ್ಲದಂತಾದಾಗ) ಎಲ್ಲರಿಗೂ ಸ್ಪಷ್ಟವಾಗಿ ಗೋಚರವಾಗಲಿತ್ತು. ಈ ಇಲ್ಲದಂತಾಗುವಿಕೆ (ಕಾಣೆಯಾಗುವಿಕೆ) ಸ್ವಲ್ಪದರಲ್ಲಿಯೇ ಸಂಭವಿಸಲಿತ್ತು; ಹಳೆಯ ಒಡಂಬಡಿಕೆಯು ಮುದಿಯಾಗುತ್ತಾ ಅಂತ್ಯಗೊಳ್ಳುತ್ತಲಿತ್ತು. NEBಯಲ್ಲಿ ". . . ಬೆಳೆಯುತ್ತಿರುವ ಮತ್ತು ವಯಸ್ಸಾಗುತ್ತಿರುವ ಯಾವದೇ ಆಗಲಿ ಸ್ವಲ್ಪ ಕಾಲದಲ್ಲಿ ಇಲ್ಲದಂತಾಗುವದು" ಎಂದಿರುತ್ತದೆ. "ಇಲ್ಲದಂತಾಗುವದು" ಎಂಬುದಕ್ಕಿರುವ ಗ್ರೀಕ್ ಪದವು (ἀφανισμός, *aphanismos*) "ಕಾಣದೆ ಹೋಗು" ಎಂಬುದಕ್ಕೆ ಬಳಸಲ್ಪಟ್ಟಿರುವ ಅದೇ ಪದದಿಂದ ಬಂದದ್ದಾಗಿದೆ, ಈ ಪದವು ಯಾಕೊಬ 4:14ರಲ್ಲಿ ಕಾಣಿಸಿಕಕೊಂಡು ಪುನಃ ಇಲ್ಲದೆ ಹೋಗುವಂಥ ಹಬೆಯನ್ನು ಸೂಚಿಸಿ ಬಳಸಲ್ಪಟ್ಟಿದೆ.

ಹಳೆಯ ಒಡಂಬಡಿಕೆಯು ಶಿಲುಬೆಗೆ ಜಡಿಯಲ್ಪಟ್ಟಿದೆ. ಯೇಸು ಮತ್ತಾಯ 5:17, 18ರಲ್ಲಿ ಇದರ ಸುಳಿವು ನೀಡಿದನು. ಆತನು ಶಿಲುಬೆಯ ಮೇಲೆ, "ತೀರಿತು!" ಎಂದು ಘೋಷಿಸಿದನು (ಯೋಹಾನ 19:30), ನಿಶ್ಚಯವಾಗಿಯೂ ಅದರ ಅರ್ಥವು "ನನ್ನ ಜೀವನ ಮುಗಿಯಿತು" ಎಂಬುದಕ್ಕಿಂತಲೂ ಹೆಚ್ಚಿನ ಅರ್ಥವಿತ್ತು. ಯೇಸು ಯೋಹಾನ 17:4ರಲ್ಲಿ ತಂದೆಯು ತನಗೆ ಒಪ್ಪಿಸಿದ ಕೆಲಸವನ್ನು "ನೆರವೇರಿಸಿದೆನು" ಎಂದು ತಂದೆಗೆ ಹೇಳುತ್ತಾನೆ. ದೇವರಿಂದ ಕೊಡಲ್ಪಟ್ಟ ಮತ್ತು ಅನುಮೋದಿಸಲ್ಪಟ್ಟ ಒಂದು ಧಾರ್ಮಿಕ ವ್ಯವಸ್ಥೆಯಾಗಿ ಯೆಹೂದಿಮತವು ಕ್ರಿಸ್ತನ ಮರಣದೊಂದಿಗೆ ಅಂತ್ಯಗೊಂಡಿತ್ತು.

ಹೇಗೂ, ದೇವಾಲಯ ಮತ್ತು ದೀರ್ಘಕಾಲದಿಂದ ಅನುಸರಿಸಿಕೊಂಡ ಬಂದ ಪಾವಿತ್ರ್ಯದ ಸುತ್ತ ಕೇಂದ್ರಿಕೃತವಾದ ಒಂದು ವ್ಯವಸ್ಥೆಯಾಗಿ ಯೆಹೂದಿಮತವು ಕೇವಲ ನಾಲ್ವತ್ತು ವರ್ಷಗಳ ತನಕ ಉಳಿಯುವಂತೆ ಅನುಮತಿಸಲ್ಪಟ್ಟಿತು. ಮಾನವ ದೃಷ್ಟಿಕೋನದಿಂದ ನೋಡುವದಾದರೆ, ಅದು ಕ್ರಿ.ಶ. 70ರಲ್ಲಿ ಇಲ್ಲದಂತಾಗಲಿತ್ತು, ಆಗ ರೋಮನ್ ಸೈನ್ಯವು ಒಂದು ಕಲ್ಲಿನ ಮೇಲೆ ಒಂದು ಕಲ್ಲು ಉಳಿಯುವಂತೆ ಬಿಡಲಿಲ್ಲ (ಮತ್ತಾಯ 24:2). ದೇವಾಲಯದ ಈ ನಾಶನದ ಕುರಿತು ಯೇಸು ಮುಂತಿಳಿಸಿದ್ದನು (ಮಾರ್ಕ 13:2), ಮತ್ತು ಸ್ತೇಫನನು ಅದರ ಅಂತ್ಯವನ್ನು ಘೋಷಿಸಿದ್ದನು (ನೋಡಿರಿ ಅಪೊಸ್ತಲರ ಕೃತ್ಯಗಳು 6:14). ದೇವಾಲಯವು ಮರುನಿರ್ಮಾಣ ಮಾಡಲ್ಪಡುವದು ಮತ್ತು ಲೇವಿಕ ಯಜ್ಞಾರ್ಪಣೆಗಳು ಪುನಸ್ಥಾಪಿಸಲ್ಪಡುವವದು ಎಂಬ ಬಗ್ಗೆ ಹೊಸ ಒಡಂಬಡಿಕೆಯಲ್ಲಿ ಯಾವದೇ ಸುಳಿವು ಇರುವದಿಲ್ಲ. ಇವುಗಳು ಭೂಮಿಯಿಂದ ಶಾಶ್ವತವಾಗಿ ಕಾಣದೆ ಹೋಗಿರುತ್ತವೆ. ಇಂದು ಉಳಿದಿರುವ ಯೆಹೂದಿಮತದ ಏಕೈಕ ಕುರುಹು, ಅಥವಾ ಛಾಯೆಯು ಎಂದರೆ ಹಳೆಯ ಒಡಂಬಡಿಕೆಯ ಚಿಪ್ಪು ಮಾತ್ರವೇ ಆಗಿದೆ. ದೇವಾಲಯವನ್ನು ಮರುನಿರ್ಮಾಣ ಮಾಡುವದೆಂದರೆ ನಾವು ಯಾವ ಹೊಸ ಒಡಂಬಡಿಕೆಯಿಂದ ಕ್ರಿಸ್ತನ ಮೂಲಕ ವಿಮೋಚಿಸಲ್ಪಟ್ಟಿದ್ದೇವೋ ಅ ಇಡೀ ಒಡಂಬಡಿಕೆಯನ್ನು ಪದಚ್ಯುತಿಗೊಳಿಸಿದಂತಾಗುವದು. ಅದು ಉತ್ತಮವಾದದ್ದರ ಕಡೆಯಿಂದ ಕಡಿಮೆಯಾದದ್ದರ ಕಡೆಗೆ ಹಿಮ್ಮುಖವಾಗಿ ಪ್ರಯಾಣಿಸಿದಂತೆ ಆಗುತ್ತದೆ.

# ಅನ್ವಯಿಸುವಿಕೆ

## ಅಂತಹ ಒಬ್ಬ ಮಹಾಯಾಜಕ (8:1)

ಕೆಲವು ಯೆಹೂದ್ಯರು ಹೀಗೆ ಹೇಳಿರಬಹುದು, "ನಮ್ಮ ಮಹಾಯಾಜಕನು ಕೆಲಸ ಮಾಡುತ್ತಿರುವದನ್ನು ನಾವು ನೋಡಬಲ್ಲೆವು, ಮತ್ತು ನಿಮ್ಮ ಯಾಜಕನನ್ನು ಯಾವನೂ ಎಂದೂ ಕಂಡಿಲ್ಲ. ನಿಮಗೆ ನಿಜವಾಗಿಯೂ ಒಬ್ಬ ಯಾಜಕನು ಇದ್ದಾನೆಂಬುದನ್ನು ಹೇಗೆ ತಿಳಿಯುವಿರಿ?" ಕ್ರಿಸ್ತನ ಮಹಾಯಾಜಕತ್ವವು ಕ್ರೈಸ್ತನಿಗೆ ಒಂದು ನಂಬಿಕೆಯ ವಿಷಯವಾಗಿರುತ್ತದೆ. ಅದು ಒಬ್ಬ ಪ್ರೇರಿತ ಲೇಖಕನಿಂದ ಪ್ರಕಟಗೊಳಿಸಲ್ಪಟ್ಟಿರುವ ಕಾರಣದಿಂದ ನಾವು ಅದನ್ನು ನಂಬಬಲ್ಲೆವು. ಉತ್ತಮವಾದ ಪ್ರತ್ಯುತ್ತರವೆಂದರೆ ತಾನು ಕಾಣದಿರುವ ದೇವರನ್ನು ಹೇಗೆ ನಂಬಬಲ್ಲಿ ಎಂದು ಒಬ್ಬ ಸಂದೇಹವಾದಿಯು ಕೇಳಿದ ಪ್ರಶ್ನೆಗೆ ಒಬ್ಬ ಮಿತ್ರ ಮಂಡಳಿ ಸದಸ್ಯನು ನೀಡಿದ ಉತ್ತರವವು ಆಗಿರುತ್ತದೆ. ಆತನು ಪ್ರತ್ಯುತ್ತರವಾಗಿ, "ನೀನು ಎಮದಾದರೂ ನಿನ್ನ ಮೆದಳು ನೋಡಿದ್ದಿಯೋ? ಇಲ್ಲವೋ? ಹಾಗಾದರೆ ನಿನಗೊಂದು ಮೆದಳು ಇದೆ ಎಂದು ಹೇಗೆ ಬಲ್ಲಿ?" ಎಂದು ಕೇಳಿದ್ದನು. ನಮಗೆ ನಮ್ಮ ನಂಬಿಕೆಯ ಪುರಾವೆಯು ಇರುತ್ತದೆ ಮತ್ತು ತನಗೆ ಮೆದಳು ಇದೆಯೆಂದು ನಂಬಿದ ಸಂದೇಹವಾದಿಯಂತೆಯೇ ನಮ್ಮ ಮಹಾಯಾಜಕನಲ್ಲಿ ನಾವು ನಂಬುತ್ತೇವೆ. ನಮಗೊಂದು ಹೊಸ ಒಡಂಬಡಿಕೆಯು ಇರುತ್ತದೆಂದು 7ನೇ ಅಧ್ಯಾಯವು ವಿವರಿಸುತ್ತದೆ, ಹೀಗೆ ನಮ್ಮ ಯಾಜಕನು ಮನುಷ್ಯರಿಗೆ ಕಾಣಿಸಲ್ಪಡುವಂತೆ ಭೂಮಿಯ ಮೇಲೆ ಸೇವೆಯನ್ನು ಮಾಡುವದಿಲ್ಲ. ಆತನು ಬೇರೆಯ ಕುಲಕ್ಕೆ ಸೇರಿದವನು, ಅದು ಯೆಹೂದ ಕುಲವಾಗಿದೆ, ಮತ್ತು ಇಲ್ಲಿ ಆತನು ಮಹಾಯಾಜಕನಾಗಿ ಸೇವೆ ಮಾಡುವದಕ್ಕೆ ಆಗಲಿಲ್ಲ. ಆತನು ನಮ್ಮ ದೃಷ್ಟಿಯನ್ನು ಮೀರಿ ಸೇವೆ ಮಾಡುತ್ತಾನೆ, ಆದರೆ ಒಂದು ದಿನ ನಾವು ಆತನನ್ನು ನೋಡುವೆವು. ಆತನು ಪರಲೋಕದಲ್ಲಿರುವ ನಿಜವಾದ ದೇವದರ್ಶನ ಗುಡಾರದಲ್ಲಿ ಸೇವೆ ಸಲ್ಲಿಸುತ್ತಿದ್ದಾನೆ, ಹೊರತು ಭೂಮಿಯ ಮೇಲಿನ ಒಂದು ಶಾರೀರಿಕ ದೇವದರ್ಶನ ಗುಡಾರದಲ್ಲಿ ಅಲ್ಲ.

## ಯಾರು ಈ ಯೇಸು? (8:1)

ಇಬ್ರಿಯರಿಗೆ ಪತ್ರಿಕೆಯಲ್ಲಿ ನಾವು ಯೇಸುವನ್ನು ನಮ್ಮ ಉನ್ನತಕ್ಕೇರಿಸಲ್ಪಟ್ಟ ಕರ್ತನು, ಯಾಜಕನು, ಮತ್ತು ಅರಸನ್ನಾಗಿ ಕಾಣುತ್ತೇವೆ. ಕೆಲವರು ಕ್ರಿಸ್ತನನ್ನು ಹೊಂದಿರುವದಕ್ಕೆ ಮನಸ್ಸುಳ್ಳವರಾಗಿದ್ದಾರೆ, ಆದರೆ ಅವರು ಆತನನ್ನು ಒಂದು ಕಡಿಮೆಗೊಳಿಸಲ್ಪಟ್ಟ ರೂಪದಲ್ಲಿ ಬಯಸುತ್ತಾರೆ. ಅವರು ಯಾವದೇ ಬೇಡಿಕೆಗಳನ್ನಿಡದ ಒಬ್ಬ ಪ್ರೀತಿಯುಳ್ಳ ಮೆಸ್ಸೀಯನನ್ನು ಬಯಸುತ್ತಾರೆ. ಆತನು ಶಿಲುಬೆ ಹೊತ್ತುಕೊಳ್ಳಬೇಕೆಂದು ಅಥವಾ ತಮ್ಮ ಜೀವಿತಗಳನ್ನು ತನಗೆ ಸಂಪೂರ್ಣವಾಗಿ ಯಜ್ಞ ಮಾಡಿಕೊಳ್ಳಬೇಕೆಂದು ಕೇಳದವನಾಗಿರಬೇಕು. ಅವರಿಗೊಬ್ಬ ರಕ್ಷಕನು ಬೇಕು, ಆದರೆ ನಿರ್ದಿಷ್ಟವಾದ ನೈತಿಕ ಕಟ್ಟಳೆಗಳನ್ನು ಮುಂದಿಡುವವನು ಬೇಕಾಗಿಲ್ಲ. ಬಹಳಷ್ಟು ಜನರ ಪಾಲಿಗಾದರೋ ಯೇಸುವು ಒಬ್ಬ "ಸುಪರ್ ಸ್ಟಾರ್," ಆದರೆ ಪಾಪವನ್ನು ಖಂಡಿಸಿ ಹಣ ವಿನಿಮಯ ಮಾಡುವವರನ್ನು ಹೊಡೆದು ಓಡಿಸುವವನಲ್ಲ. ಇಂದು ಬಹಳಷ್ಟು ಉಪದೇಶದಲ್ಲಿ, "ಕ್ರಿಸ್ತನು ಸಾರಲ್ಪಡುತ್ತಿದ್ದಾನೆನೋ ಎಂಬಂತೆ ಅನ್ನಿಸಬಹುದು, ಆದರೆ ಆತನನ್ನು ಸಾರಲಾಗುತ್ತಿಲ್ಲ."[23] ನಾವು ಕ್ರಿಸ್ತನ ಅಧಿಕಾರವನ್ನು ಮತ್ತು ನಾವು ಜೀವನದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬ ಕುರಿತ ಆತನ ಉಪದೇಶವನ್ನು ಅಂಗೀಕರಿಸಿಕೊಳ್ಳುವ ಹೊರತು, ನಾವು ಆತನ ಕಡೆಗೆ ತಿರುಗಿಕೊಳ್ಳುವವರೇ ಆಗಿರುವದಿಲ್ಲ.

## ಪರಲೋಕದಲ್ಲಿ ಆಸನಾರೂಢನು (8:1)

ಯೇಸು ಈಗ ದೇವರ ಬಲಗಡೆಯಲ್ಲಿ (ಆಳುವವನಾಗಿ) ಕೂತುಕೊಂಡಿರುವನು. ಆತನು ಎಬ್ಬಿಸಲ್ಪಟ್ಟು ದಾವೀದನ ಸಿಂಹಾಸನದ ಮೇಲೆ ಕೂತಿಕೊಳ್ಳುವದಕ್ಕಾಗಿ ಎಬ್ಬಿಸಲ್ಪಟ್ಟನು ಎಂದು ಪೇತ್ರನು ಹೇಳುತ್ತಾನೆ (ಅಪೊಸ್ತಲರ ಕೃತ್ಯಗಳು 2:30-33). ಇದು ಅರಸನು ಮತ್ತು ಯಾಜಕನಾಗಿ ಆಳ್ವಿಕೆಯನ್ನು ಮಾಡುವ "ಮೊಳಿಕೆ" ಕುರಿತ ಜೆಕರ್ಯನ ಪ್ರವಾದನೆಯನ್ನು ನೆರವೇರಿಸುತ್ತದೆ (ಜೆಕರ್ಯ 6:12, 13). ಸಹಸ್ರವರ್ಷಪೂರ್ವ ವಿಚಾರಪಂಥವು ಕ್ರಿಸ್ತನು ಇಂದಿನ "ಸಭಾ ಯುಗದಲ್ಲಿ" ಆಳ್ವಿಕೆ ಮಾಡುವದಿಲ್ಲ ಎಂದು ಹೇಳುತ್ತದೆ. ಅದಕ್ಕೆ ತದ್ವಿರುದ್ಧವಾಗಿ, ಪೇತ್ರನು ಮತ್ತು ಇಬ್ರಿಯರಿಗೆ ಪತ್ರಿಕೆ ಎರಡೂ ಆತನು ಈಗ ಆಳ್ವಿಕೆ ಮಾಡುತ್ತಿದ್ದಾನೆಂದು ತೋರಿಸುತ್ತವೆ. "ಸಭಾ ಯುಗ" ವು ಹೊಸ ಒಡಂಬಡಿಕೆಯಲ್ಲಿ ಕ್ರಿಸ್ತನ ರಾಜ್ಯಕ್ಕಿಂತ ವ್ಯತ್ಯಾಸವಾದದ್ದಲ್ಲ. ಕೆಲವರು ಸಭೆಯು ರಾಜ್ಯದ ಈಗಿನ "ಪ್ರಕಟಪಡಿಸುವಿಕೆ" ಆಗಿದೆ ಎಂದು ಯೋಚಿಸುವದಿಲ್ಲ; ಆದರೆ ರಕ್ಷಣೆ ಹೊಂದುವವರೆಲ್ಲರೂ ಸಭೆಗೆ ಸೇರಿಸಲ್ಪಡುತ್ತಾರಾದ್ದರಿಂದ (ಅಪೊಸ್ತಲರ ಕೃತ್ಯಗಳು 2:47) ಮತ್ತು ಹೀಗೆ ಅವರು ರಾಜ್ಯದಲ್ಲಿ ಪಾಪದಿಂದ ವಿಮೋಚಿಸಲ್ಪಡುತ್ತಾರೆ (ಕೊಲೊಸ್ಸೆ1:13, 14), ಅಲ್ಲಿ ಯಾವದೇ ಕಾರ್ಯರೂಪದ ಭೇದವು ಇರುವದಿಲ್ಲ.

## ಸಜೀವ ಯಜ್ಞಗಳು (8:3)

ನಾವು ನಮ್ಮ ದೇಹಗಳನ್ನು "ಸಜೀವ ಯಜ್ಞಗಳನ್ನಾಗಿ" ಮಾಡಿಕೊಳ್ಳಬೇಕು (ರೋಮಾ 12:1, 2), ಆದರೆ ಅದರರ್ಥವು "ಜೀವನವೆಲ್ಲಾ ಆರಾಧನೆ" ಆಗಿರುತ್ತದೆಂದಾಗಿರುವದಿಲ್ಲ. ದೇವರ ಆರಾಧನೆಯನ್ನು ಒಂದು ನೇಮಿಸಲ್ಪಟ್ಟ ವಿಧಾನದಲ್ಲಿ ಮಾಡಲ್ಪಡತಕ್ಕದ್ದು. ಒಬ್ಬ ಮಗುವು ತನ್ನ ತಂದೆಯನ್ನು ಗೌರವಿಸುವದಕ್ಕೆ ತನ್ನದೆ ಆದ ದಾರಿಯನ್ನು ನಿರ್ಮಿಸಿಕೊಳ್ಳುವದರಿಂದ ತನ್ನ ತಂದೆಗೆ ಸಂತೋಷವನ್ನುಂಟು ಮಾಡುವದಿಲ್ಲ. ಬದಲಾಗಿ, ತಂದೆಯು ತನಗೆ ಹೇಗೆ ಜೀವಿಸಬೇಕೆಂದು ಕಲಿಸಿ ಕೊಟ್ಟಿದ್ದಾನೋ ಅದರ ಪ್ರಕಾರ ಜೀವಿಸುವ ಮೂಲಕ ಸಂತೋಷವನ್ನುಂಟು ಮಾಡುವವನಾಗಿದ್ದಾನೆ. ಪರಲೋಕ ತಂದೆಯನ್ನು ನಾವು ಆರಾಧಿಸುವದು ಸಹ ಅದೇ ವಿಧವಾಗಿದೆ. ದೇವರು ಸುಮ್ಮನೆ ಯಾವದೇ ರೀತಿಯ ಆರಾಧನೆಯನ್ನಾದರೂ ಅಂಗೀಕರಿಸಿಕೊಳ್ಳಲಾರನು. ಆತನು ಅಂಗೀಕಾರರ್ಹವಾದ ಹೇಬೆಲನ ಕಾಣಿಕೆ ಮತ್ತು ಅಂಗೀಕಾರರ್ಹವಲ್ಲದ ಕಾಯಿನನ ಕಾಣಿಕೆಯ ನಡುವೆ ಒಂದು ತೀಕ್ಷ್ಣವಾದ ವ್ಯತ್ಯಾಸವನ್ನು ತೋರಿಸಿದನು (ಆದಿಕಾಂಡ 4:1-5; ಇಬ್ರಿಯ 11:4). ಹೇಬೆಲನು "ನಂಬಿಕೆಯಿಂದಲೇ" ಅರ್ಪಿಸಿದನು ಎಂಬುದರ ಅರ್ಥವು ಆತನಿಗೆ ದೇವರು ಏನನ್ನು ಅಧಿಕೃತಗೊಳಿಸಿದ್ದಾನೆಂಬುದು ಗೊತ್ತಿತ್ತು ಮತ್ತು ಜಾಗರೂಕತೆಯಿಂದ ಆಚರಣೆಗೆ ತಂದನು ಎಂಬದೆ (ರೋಮಾ 10:17). ಹೇಬೆಲನು ಬೇರೆ ಏನನ್ನಾದರೂ ಮಾಡುವದಕ್ಕೆ ಆರಿಸಿಕೊಂಡಿರಬಹುದಿತ್ತು, ಉದಾಹರಣೆಗೆ ದೇವರನ್ನು ಗೌರವಿಸುವದಕ್ಕೆ ಒಂದು ಪ್ರತಿಮೆಯನ್ನು ರೂಪಿಸುವದು; ಆದರೆ ದೇವರು ಒಂದು ಯಜ್ಞವನ್ನು ಅರ್ಪಿಸಬೇಕೆಂದು ಅಧಿಕೃತಗೊಳಿಸಿರುವಾಗ ಆ ವಿಧವಾದದ್ದನ್ನು ಅಂಗೀಕರಿಸಿಕೊಂಡಿರುತ್ತಿರಲಿಲ್ಲ.

ನಾವು ಗ್ರಹಿಸಿಕೊಂಡಿರುವ "ವರಗಳನ್ನು" ನಾವು ನಮ್ಮಿಷ್ಟ ಬಂದ ಯಾವ ರೀತಿಯಲ್ಲಾದರೂ ಬಳಸಿಕೊಳ್ಳಬಹುದೋ? ಒಬ್ಬ ಪ್ರತಿಭಾವಂತ ತರಕಾರಿಯ ಕೃಷಿಕನು ತನ್ನ ಗಿಡಗಳನ್ನು ಬೆಳೆಯುವ ರೀತಿಯನ್ನು ಆರಾಧನೆಯಲ್ಲಿ ಬಳಸುವದಕ್ಕೆ ಇಚ್ಛಿಸಿದನೆಂದು ಊಹಿಸಿಕೊಳ್ಳಿರಿ – ಅದನ್ನು ಸಭೆಯೊಳಗೆ ಮಾಡಬಹುದೋ? ದೇವರು ಒಂದು ಆಚಾರವನ್ನು ಅಧಿಕೃತಗೊಳಿಸಿರುವಾಗ, ನಾವು ಬರೆಯಲ್ಪಟ್ಟಿರುವದನ್ನು ಮೀರಿ ಹೋಗಕೂಡದು (1 ಕೊರಿಂಥ

4:6). ಕ್ರಿಸ್ತನಲ್ಲಿ ನಮಗಿರುವ ಸ್ವಾತಂತ್ರ್ಯವು (ಗಲಾತ್ಯ 5:1) ನಮಗೆ ಅಷ್ಟೊಂದು ದೂರಕ್ಕೆ ಹೋಗುವ ಸ್ವಾತಂತ್ರ್ಯವನ್ನು ಕೊಡುವದಿಲ್ಲ. ಹೊಸ ಒಡಂಬಡಿಕೆಯು ನಮ್ಮನ್ನು ಧರ್ಮಶಾಸ್ತ್ರದಿಂದ ವಿಮುಕ್ತಗೊಳಿಸುತ್ತದೆ, ಆದರೆ ದೇವರ ನಿರ್ದಿಷ್ಟವಾದ ಚಿತ್ತಕ್ಕೆ ಅವಿಧೇಯರಾಗುವದ ಮೂಲಕ ಪಾಪ ಮಾಡುವಂತೆ ಅದು ನಮ್ಮನ್ನು ವಿಮುಕ್ತಗೊಳಿಸುವದಿಲ್ಲ.

ಅಲ್ಲದೆ ಕ್ರಿಸ್ತನು ನಿರಂತರವಾಗಿ ಯಜ್ಞವನ್ನು ಅರ್ಪಿಸುತ್ತಾನೆಂದಾಗಲಿ ಸಹ ಈ ವಾಕ್ಯಭಾಗವು ಸೂಚ್ಯಾರ್ಥವನ್ನು ನೀಡುವದಿಲ್ಲ. ಕ್ರಿಸ್ತನು ನಮಗಾಗಿ ವಿಜ್ಞಾಪನೆ ಮಾಡುವ ಯಾಜಕನಾಗಿ ಮುಂದುವರೆಯುತ್ತಾನೆ, ಆದರೆ ಯಜ್ಞಗಳನ್ನು ಅರ್ಪಿಸುವ ಯಾಜಕನಾಗಿ ಅಲ್ಲ. ಆತನ ಯಜ್ಞ ಸಮರ್ಪಿಸುವ ಕೆಲಸವು ಪುನರಾವರ್ತಿಸತಕ್ಕದ್ದಲ್ಲ (ಇಬ್ರಿಯ 9:28). ಕ್ರಿಸ್ತನು ಸಮರ್ಪಿಸುವದಕ್ಕೆ ಏನಾದರೂ ಹೊಂದಿದ್ದನು (ವ. 3), ಆದರೆ ಆತನು ಅನುದಿನವು ಯಜ್ಞವನ್ನು ಅರ್ಪಿಸುವದು ಅನಾವಶ್ಯಕವಾಗಿರುತ್ತದೆ.

## ಮಾದರಿಯ ಪ್ರಕಾರವಾಗಿ (8:5)

ಬೈಬಲ್ ಕೆಲವು ಸಾರಿ "ಮಾದರಿಗಳ" ಬಗ್ಗೆ ಮಾತಾಡುತ್ತದೆ. ವಿಧೇಯವಾಗತಕ್ಕ ಒಂದು ಸಿದ್ಧಾಂತದ *ಕ್ರಮವು* ಕ್ರೈಸ್ತರನ್ನು ಪಾಪದಿಂದ ಮುಕ್ತರಾಗಿ ನಡಿಸುತ್ತದೆ. ರೊಮಾಪುರದ ಕ್ರೈಸ್ತರು "[ಒಪ್ಪಿಸಲ್ಪಟ್ಟ] ಉಪದೇಶದ ಕ್ರಮಕ್ಕೆ ಅಧೀನರಾ*ದದರಿಂದ*" ಪಾಪದಿಂದ ಬಿಡಿಸಲ್ಪಟ್ಟರೆಂದು ಎಂದು ರೋಮಾ 6:17, 18 ವಚನಗಳು ಖಾತ್ರಿ ಕೊಡುತ್ತವೆ. "ಕ್ರಮ"ದಲ್ಲಿ ಯಾವದೋ ಒಂದು ರೀತಿಯ *ನಮೂನೆ* ಸೇರಿರತಕ್ಕದ್ದಾಗಿದೆ. ಸುವಾರ್ತೆಯು ಶುಭ ಮತ್ತು ಮಹಿಮಕರವಾದ ಸುದ್ಧಿಯಾಗಿದೆ, ಆದರೆ ಸುವಾರ್ತೆಯಲ್ಲಿ ವಿಧೇಯವಾಗಬೇಕಾದ ಯಾವ "ಕ್ರಮ" ಇರುತ್ತದೆ? ಪೌಲನು ಅದರ ಬಗ್ಗೆ, ಸಹೋದರರು ಕ್ರಿಸ್ತನಲ್ಲಿ ಮತ್ತು ಆತನ ಮರಣದಲ್ಲಿ ಸೇರಿದ ಸಮಯವನ್ನು ಸೂಚಿಸುತ್ತಾ, ಈ ಮುಂಚೆಯೇ ರೋಮಾ 6:3, 4ರಲ್ಲಿ ವಿವರಿಸಿದ್ದನು. ಇದು ದೀಕ್ಷಾಸ್ನಾನ ಮಾಡಿಸಿಕೊಳ್ಳುವ ವೇಳೆಯಲ್ಲಿ ಸಂಭವಿಸಿತ್ತು. ಮರಣಿಸುವದು, ಹೂಣಲ್ಪಡುವದು, ಮತ್ತು ಪುನಃ ಎಬ್ಬಿಸಲ್ಪಡುವ ಎಲ್ಲಾ *ಕ್ರಮವು* ಕ್ರಿಸ್ತನಲ್ಲಿ ಮುಳುಗಿಸಲ್ಪಡುವ ಕ್ರಿಯೆಯಲ್ಲಿ ಜರುಗಿಸಲ್ಪಟ್ಟಿತು. ಕ್ರಮಕ್ಕೆ ವಿಧೇಯರಾಗುವದು ಪ್ರಾಮುಖ್ಯವಾಗಿತ್ತು ಯಾಕೆಂದರೆ ಅ ವಿಧದಲ್ಲಿಯೇ ಒಬ್ಬನು ವಿಧೇಯತೆಯಿಂದ "ಕ್ರಿಸ್ತನಲ್ಲಿ" ರಕ್ಷಣೆಯ ಮಂಡಲವನ್ನು ಪ್ರವೇಶಿಸುವವನಾಗಿದ್ದಾಣೆ ಮತ್ತು ಆ ಮೂಲಕ ತನ್ನ ಮರಣದ ಪ್ರಯೋಜನಗಳಲ್ಲಿ ಪಾಲ್ಗೊಳ್ಳುವವನಾಗಿದ್ದಾನೆ (ರೋಮಾ 6:4). ಆಗ ಒಬ್ಬನು ಹೊಸ ಜೀವನವನ್ನು ನಡಿಸುವದಕ್ಕೆ ಎಬ್ಬಿಸಲ್ಪಡುತ್ತಾನೆ (ರೋಮಾ 6:5), ಅದು ಹೊಸ ಜನನದಿಂದ ಫಲಿತವಾಗುತ್ತದೆ. ಒಬ್ಬನು ಪವಿತ್ರಾತ್ಮನ ಬೋಧನೆಗೆ ಆರಂಭದಲ್ಲಿ ವಿಧೇಯತೆಯನ್ನು ತೋರುವದರೊಂದಿಗೆ ಇದೆಲ್ಲವೂ ಸಂಭವಿಸುತ್ತದೆ. ಇದು ಪವಿತ್ರಾತ್ಮನ ದೀಕ್ಷಾಸ್ನಾನಕ್ಕೆ ಅನ್ವಯವಾಗಲಾರದು ಯಾಕೆಂದರೆ ವ್ಯಕ್ತಿಯು ದೀಕ್ಷಾಸ್ನಾನದಿಂದ ಎಬ್ಬಿಸಲ್ಪಡುವನೆಂದು ಹೇಳಲಾಗಿರುತ್ತದೆ (ರೋಮಾ 6:4, 5), ಅದು ನೀರಿನ ಸಮಾಧಿಯಿಂದ ಮೇಲಕ್ಕೆ ಎದ್ದು ಬರುವದನ್ನು ಮಾತ್ರವೇ ಸೂಚಿಸಬಲ್ಲದು. ಒಬ್ಬನು "ಪವಿತ್ರಾತ್ಮನ ದೀಕ್ಷಾಸ್ನಾನದಿಂದ" ಎಬ್ಬಿಸಲ್ಪಡುವದಿಲ್ಲ, ಅದು ಅಪೊಸ್ತಲರು ಹೇಗೆ ಆತನಿಂದ ಬಲಗೊಳಿಸಲ್ಪಟ್ಟರು ಎಂಬುದನ್ನು ಬಣ್ಣಿಸುವ ಕೇವಲ ಸಾಂಕೇತಿಕ ರೀತಿಯಾಗಿದೆಯಷ್ಟೆ.

ಒಂದು "ಮಾದರಿ" ಪ್ರತಿಯೊಂದು ವಿವರವನ್ನು ಉಚ್ಚರಿಸುವ ಅಗತ್ಯವಿಲ್ಲ. ಉದಾಹರಣೆಗೆ, ಅಪೊಸ್ತಲರು ಜನರನ್ನು ಮುಖ ಕೆಳಗೆ ಮಾಡಿ ದೀಕ್ಷಾಸ್ನಾನ ಮಾಡಿಸಿದರೋ ಅಥವಾ ಹಿಂದಕ್ಕೆ ಬಾಗಿಸಿ ಮಾಡಿಸಿದರೋ? ದೀಕ್ಷಾಸ್ನಾನವು ನೀರಿನ ಮೇಲೆ ಉರುಳುವದನ್ನು ಒಳಗೊಂಡಿತ್ತೋ? ಅಂಥ ವಿವರಗಳು ನಿಖರವಾಗಿ ಹೇಳಲ್ಪಟ್ಟಿರುವದಿಲ್ಲ — ಆದರೆ ಮುಳುಗಿಸುವಿಕೆಯು ಇತ್ತು,

ಯಾಕೆಂದರೆ *baptisma* ಎಂಬುದರ ಅರ್ಥವು ಯಾವಾಗಲೂ ಅದೇ ಅರ್ಥವಾಗಿತ್ತು. ಮೋಶೆ, ನೋಹ, ಮತ್ತು ಬೇರೆಯವರಿಂದ ಅನುಸರಿಸಲಾದ ಕಟ್ಟುನಿಟ್ಟಿನ ವಿಧೇಯತೆಯ ತತ್ವವು ನಮಗೆ ಸಹ ಅನ್ವಯವಾಗುತ್ತದೆ.

ಹೊಸ ಒಡಂಬಡಿಕೆಯು ಮಾದರಿ ಅಧಿಕಾರವನ್ನು ಹೊಂದಿರುವಕ್ಕೆ ಏಕೆ ಕೆಲವರು ಆಕ್ಷೇಪಣೆಯನ್ನು ವ್ಯಕ್ತಪಡಿಸುತ್ತಾರೆ? ಕೆಲವರು "ಯಾವದೇ ಇಂಥದ್ದೇ ಎಂಬ ಮಾದರಿ ಇರುವದಿಲ್ಲ" ಎಂದು ಹೇಳುತ್ತಾರೆ. ಒಂದು ಮಾದರಿ ಇರುವದೇ ಆದಲ್ಲಿ, ಅದಕ್ಕೆ ಸ್ವಲ್ಪ ಮಟ್ಟಿಗೆ ಕಟ್ಟುನಿಟ್ಟತೆ ಇರಬಾರದೋ? ದೀಕ್ಷಾಸ್ನಾನವು ಒಂದು ಮುಳುಗಿಸುವಿಕೆಯೋ? ದೀಕ್ಷಾಸ್ನಾನವು ಪಾಪಗಳ ನಿವಾರಣೆಗಾಗಿಯೋ? ಅಪೊಸ್ತಲರ ಕೃತ್ಯಗಳು 2:38 ಮತ್ತು 22:16 ಓದಿರಿ. ಕರ್ತನ ಸಭೆಯ ಬಹುಪಾಲು ಸದಸ್ಯರು ಅದು ಹಾಗೆಯೇ ಇರುತ್ತದೆಂದು ಒಪ್ಪಿಕೊಳ್ಳುತ್ತಾರೆ ಮತ್ತು ಈ ವಿಷಯದಲ್ಲಿ ನಾವು ರಾಜಿ ಮಾಡಿಕೊಳ್ಳುವದಕ್ಕೆ ಅಥವಾ ಬಿಟ್ಟು ಕೊಡುವದಕ್ಕೆ ಸಾಧ್ಯವಿಲ್ಲವೆಂಬುದಕ್ಕೆ ಸಹಮತ ವ್ಯಕ್ತಪಡಿಸುತ್ತಾರೆ.

ಒಂದು ಮಾದರಿ ಇಲ್ಲದೆ, ಹೊಸ ಒಡಂಬಡಿಕೆಯ ಕ್ರೈಸ್ತತ್ವವನ್ನು ಪುನರ್ಸ್ಥಾಪಿಸಬೇಕೆಂಬ ಮನವಿಗೆ ಯಾವದೇ ಅಧಿಕಾರದ ಅಸ್ತಿವಾರವು ಇರುವದಿಲ್ಲ. ಯಾವದೇ ಸಿದ್ಧಾಂತಿಕ ನಿರ್ಮಲತೆಯು ಕಾಣಲಿಲ್ಲವಾದಲ್ಲಿ, ಕಟ್ಟುನಿಟ್ಟಿನ ಮಾನದಂಡಗಳೊಂದಿಗೆ ಯಾವದೇ ನೈತಿಕ ನಿರ್ಮಲತೆಯು ಸಹ ಇಲ್ಲವೆಂದಾಗುತ್ತದೆ.

## ಒಂದು ಉತ್ತಮವಾದ ಒಡಂಬಡಿಕೆ (8:6)

ಯೇಸು ತನ್ನ ರಕ್ತವು ಒಂದು ಹೊಸ ಒಡಂಬಡಿಕೆ, ಅಥವಾ ಒಪ್ಪಂದವನ್ನು ತರುತ್ತಿದೆ ಎಂದು ಹೇಳಿದಾಗ (ಮತ್ತಾಯ 26:28), ಆತನು ನಿಸ್ಸಂಶಯವಾಗಿ ವಿಮೋಚನಕಾಂಡ 24:8ರಲ್ಲಿನ ಮೋಶೆಯ ಮಾತುಗಳನ್ನು ಬಳಸಿಕೊಳ್ಳುತ್ತಿದ್ದಾನೆ: "ಆಗ ಮೋಶೆ ಆ ರಕ್ತವನ್ನು ತೆಗೆದುಕೊಂಡು ಜನರ ಮೇಲೆ ಚಿಮುಕಿಸಿ – ಇಗೋ, ಈ ಗ್ರಂಥದಲ್ಲಿ ಹೇಳಿರುವ ಎಲ್ಲಾ ಆಜ್ಞೆಗಳ ಪ್ರಕಾರ ಯೆಹೋವನು ನಿಮ್ಮ ಸಂಗಡ ಮಾಡಿಕೊಂಡ ಒಡಂಬಡಿಕೆಯನ್ನು ಸ್ಥಿರಪಡಿಸುವ ರಕ್ತವು ಇದೇ ಅಂದನು."

ಅದೇ ವೇಳೆಯಲ್ಲಿ, ಯೇಸು ಒಂದು ಸ್ಫುಟವಾದ ಉದ್ದೇಶಪೂರ್ವಕ ವಿರುದ್ಧ ಹೋಲಿಕೆಯನ್ನು ಮಾಡುತ್ತಾನೆ, ಯಾಕೆಂದರೆ ಆತನು "ಪಾಪಗಳ ಕ್ಷಮೆಗಾಗಿ" ಎಂಬ ಮಾತುಗಳನ್ನು ಸೇರ್ಪಡೆಗೊಳಿಸುತ್ತಾನೆ. ಮೋಶೆಯು ಪ್ರಾಣಿಗಳ ರಕ್ತವನ್ನು ಬಳಸಿದನು; ಕರ್ತನ ಭೋಜನದ ಸಮಯದಲ್ಲಿ ಯೇಸು ಮರುದಿನ ಸುರಿಸಲ್ಪಡಲಿದ್ದ ತನ್ನ ರಕ್ತವನ್ನು ಪ್ರತಿನಿಧಿಸುವದಕ್ಕೆ "ದ್ರಾಕ್ಷಾರಸವನ್ನು" ಬಳಸಿದನು (ಮತ್ತಾಯ 26:29). ಮೋಶೆಯು ಧರ್ಮಶಾಸ್ತ್ರದ ಒಡಂಬಡಿಕೆಯ ಬಗ್ಗೆ ಮಾತಾಡಿದನು; ಯೇಸುವು ಕೃಪೆ, ಪ್ರೀತಿ, ಮತ್ತು ಕರುಣೆಗಳ ಒಡಂಬಡಿಕೆಯ ಬಗ್ಗೆ ಮಾತಾಡಿದನು. ಮೋಶೆಯು ತನ್ನ ಜನರ ಮಧ್ಯದಲ್ಲಿ ದೇವರು ವಾಸ ಮಾಡುವದಕ್ಕೆ ಸಾಧ್ಯವಾಗುವಂತೆ ಭಾಗಶಃ ಪಾಪ ಕ್ಷಮಾಪಣೆಯಾಗುವದನ್ನು ಬಣ್ಣಿಸಿದನು; ದೇವರು ತನ್ನ ಜನರೊಳಗೆ ಒಂದು ವ್ಯತ್ಯಾಸವಾದ ವಿಧದಲ್ಲಿ ಜೀವಿಸುವಂತಾಗಲು ನಿಜವಾದ ಮತ್ತು ಪೂರ್ಣವಾದ ಪಾಪ ನಿವಾರಣೆಯ ಬಗ್ಗೆ ಮಾತಾಡಿದನು.[24]

ಹೊಸ ಒಡಂಬಡಿಕೆಯ ವಿಷಯದಲ್ಲಿ ಉತ್ತಮವಾಗಿರುವದು ಯಾವದು?[25] ಅದು ರಾಜಿಸಂಧಾನ ಮಾಡುವಂಥದ್ದಾಗಿದೆ. ಅದು ದೇವರ ಜನರೆಲ್ಲರನ್ನೂ ಒಂದೇ ದೇಹವಾಗಿ ಒಂದುಗೂಡುವಂತೆ ಮಾಡುವದು (ಎಫೆಸ 2:14-18). ಅದು ಆಂತರಿವಾದದ್ದು, ನಮ್ಮ ಹೃದಯಗಳೊಳಗಿಂದ ಸ್ಪೂರ್ತಿಗೊಳ್ಳುವಂತೆ ನಮ್ಮೊಬ್ಬೊಬ್ಬರಿಗೆ ಅವಕಾಶ ಕೊಡುವದಾಗಿದೆ,

ಒಬ್ಬನು ರಾಜ್ಯದಲ್ಲಿದ್ದು ಅದರ ಪ್ರಯೋಜನಗಳನ್ನು ಅನುಭವಿಸಬೇಕಾದರೆ ಆ ಹೃದಯದಲ್ಲಿ ವಾಕ್ಯವು ನೆಲೆಗೊಳ್ಳಬೇಕಾಗಿರುತ್ತದೆ. ಅದು ಜಾಗತಿಕವಾದದ್ದು, ಅದು ಸಕಲ ಮಾನವರನ್ನು ಕ್ರಿಸ್ತನಲ್ಲಿರುವ ದೇವರ ಕರುಣೆಯ ಚಾವಣಿಯ ಕೆಳಗೆ ತರುವದಕ್ಕಾಗಿ ರಚಿಸಲ್ಪಟ್ಟಿದೆ (ಮತ್ತಾಯ 28:18-20). ಅದು ದಾರಾಳಿಯಾಗಿದ್ದು ಎಲ್ಲರಿಗೂ ಕ್ಷಮಾಪಣೆಯನ್ನು ಒದಗಿಸುತ್ತದೆ (ಇಬ್ರಿಯ 2:9). ಅಂತಿಮವಾಗಿ, ಅದು ಶಾಶ್ವತವಾದದ್ದು; ಅದು ಸದಾಕಾಲವೂ ನೆಲೆಗೊಳ್ಳುವದೆಂದು ನಮಗೆ ಭರವಸ ಕೊಡಲ್ಪಟ್ಟಿರುತ್ತದೆ. ಅದು ಎಂದಿಗೂ ಹಳೆಯದಾಗುವದಿಲ್ಲ ಅಥವಾ ರೂಢಿ ತಪ್ಪಿದ್ದಾಗುವದಿಲ್ಲ.

**ಹೊಸ ಒಡಂಬಡಿಕೆ (8:7)**

ಹೊಸ ಒಡಂಬಡಿಕೆಯ ವಿಷಯದಲ್ಲಿ ಹಲವಾರು ಪ್ರಾಮುಖ್ಯವಾದ ಸತ್ಯಗಳನ್ನು ಗಮನಿಸತಕ್ಕದ್ದು:[26]

1. *ಅದು ಭರವಸೆಯ ಒಡಂಬಡಿಕೆ ಆಗಿದೆ.* ದೇವರು ನಮ್ಮ ದೇವರಾಗಿದ್ದಾನೆ ಮತ್ತು ನಾವು ಆತನ ಜನರಾಗಿದ್ದೇವೆ ಎಂಬ ಭರವಸೆಯನ್ನು ಕೊಡುತ್ತದೆ (ವ. 10). ನಾವು ಆತನ ಸಂಗಡ ಈ ಒಡಂಬಡಿಕೆಯ ಸಂಬಂಧದಲ್ಲಿರುವಾಗ, ಆತನು ನಮ್ಮ ಪಾಪಗಳನ್ನು ಮರೆತು ಬಿಡುತ್ತಾನೆಂದು ನಮಗೆ ಭರವಸವನ್ನು ಕೊಡುತ್ತದೆ (ವ. 12). ಇದು ಖಚಿತವಾದದ್ದು ಯಾಕೆಂದರೆ ದೇವರು ಇಬ್ರಿಯ 8:10-12ರಲ್ಲಿ ಆರು ಸಾರಿ “ಮಾಡುವೆನು”! ಎಂದು ಹೇಳಿದನು. ಆತನು ಹೇಳಿದ್ದನ್ನು ಮಾಡುವನೆಂದು ನಾವು ದೃಢವಿಶ್ವಾಸದ ನಿಶ್ಚಯದೊಂದಿಗೆ ಇರಬಲ್ಲೆವು.

2. *ಇದು ವಿಧೇಯತೆಯ ಒಂದು ಒಡಂಬಡಿಕೆ.* ದೇವರು ತಾನು ಮಾಡಬೇಕಾದ ಕೆಲಸವನ್ನು ಮಾಡುವನು, ಆದರೆ ನಾವು ನಮ್ಮ ಮುಂದಿಡಲ್ಪಟ್ಟಿರುವ ಶರತ್ತುಗಳನ್ನು ನೆರವೇರಿಸುವ ಮೂಲಕ ನಮ್ಮ ಕೆಲಸವನ್ನು ಮಾಡತಕ್ಕದ್ದು. “ಒಡಂಬಡಿಕೆ” ಎಂಬುದಕ್ಕಿರುವ διαθήκη (*diathēkē*) ಎಂಬ ಪದವು ಕೊಡುಗೆಯನ್ನು ಸ್ವೀಕರಿಸಿಕೊಂಡು ಶರತ್ತುಗಳನ್ನು ನೆರವೇರಿಸತಕ್ಕದ್ದಾಗಿ ಒಪ್ಪಿಸಿ ಕೊಡುವ ಒಬ್ಬ ಶ್ರೇಷ್ಠನಾದವನನ್ನು ಸೂಚಿಸುತ್ತದೆ. ದೇವರು ಇಸ್ರಾಯೇಲ್ಯರನ್ನು ತನ್ನ ಪ್ರಜೆಗಳನ್ನಾಗಿ ಮಾಡಿಕೊಳ್ಳುತ್ತೇನೆಂದು ವಾಗ್ದಾನ ಮಾಡುತ್ತಾನೆ (ವಿಮೋಚನಕಾಂಡ 19:5, 6), ಅದನ್ನು ಆತನು ಕ್ರೈಸ್ತರಿಗೆ ಸಹ ಮಾಡಿದ್ದಾನೆ (ತೀತನಿಗೆ 2:14; 1 ಪೇತ್ರ 2:5, 9). ಆತನ ಕಟ್ಟಳೆಗಳು ಈಗ ನಮ್ಮ ಹೃದಯಗಳಲ್ಲಿ ಬರೆಯಲ್ಪಟ್ಟಿರುತ್ತವೆ, ಆದರೆ ಇದರ ಅರ್ಥವೇನು? ನಾವು ದೇವರಿಗೆ ನಮ್ಮ ಹೃದಯಗಳಿಂದ ವಿಧೇಯರಾಗಬೇಕು. ದೇವರ ಧರ್ಮಶಾಸ್ತ್ರವು ನಮ್ಮೊಳಗೆ ಇರುವದಾದರೆ, ನಾವು ಇದನ್ನು ಮಾಡಬಲ್ಲೆವು (ಧರ್ಮೋಪದೇಶಕಾಂಡ 30:11-14; ಯೆಹೆಜ್ಕೇಲ 11:19, 20; ಕೀರ್ತನೆ 40:6-8). ಯೆಹೂದ್ಯರು ಧರ್ಮಶಾಸ್ತ್ರವನ್ನು ದೂರದಲ್ಲಿಟ್ಟರು, ಅಲ್ಲದೆ ಸ್ವತಃ ತಮ್ಮ ಸಂಪ್ರದಾಯಗಳನ್ನು ಅಭಿವೃದ್ಧಿಪಡಿಸಿಕೊಂಡರು. ಮೂಲತಃ, ಅವರು ಈ ಸಂಪ್ರದಾಯಗಳನ್ನು ಜನರು ಧರ್ಮಶಾಸ್ತ್ರವನ್ನು ಉಲ್ಲಂಘಿಸಿದಂತೆ ತಡೆಯುವ ಸುರಕ್ಷತಾ ಕವಚದಂತಿರಬೇಕೆಂಬ ಉದ್ದೇಶದಿಂದ ರಚಿಸಿದ್ದರು, ಆದರೆ ಸ್ವತಃ ಧರ್ಮಶಾಸ್ತ್ರಕ್ಕಿಂತಲೂ ಅವರ ಸಂಪ್ರದಾಯಗಳೇ ಅವರಿಗೆ ಹೆಚ್ಚು ಪ್ರಾಮುಖ್ಯವಾದವು (ನೋಡಿರಿ ಮತ್ತಾಯ 15:5-9). ದೇವರನ್ನು ತಿಳಿಯುವದರಲ್ಲಿ ಆತನ ಚಿತ್ತವನ್ನು ಮಾಡುವದು ಸೇರಿರುತ್ತದೆ. ಹೋಶೇಯವು ಅನೈತಿಕರಾದ ಇಸ್ರಾಯೇಲ್ಯರ ಮೇಲೆ ದೇವರನ್ನು ತಿಳಿಯದವರೆಂದು ಆರೋಪ ಮಾಡಿದನು; ಜ್ಞಾನದ ಕೊರತೆಯ ಕಾರಣದಿಂದ ದೇಶವು ನಾಶಗೊಳಿಸಲ್ಪಡಲಿತ್ತು (ಹೋಶೇಯ 4:1, 2, 6). ಯೆರೆಮೀಯನ ಸಹ ದೇವರನ್ನು ತಿಳಿದಿರುವದೆಂದರೆ ನ್ಯಾಯ ಮತ್ತು ನೀತಿಯನ್ನು

ಆಚರಿಸುವದು ಎಂದರ್ಥ; ದೇವರನ್ನು ತಿಳಿಯದಿರುವದು ನಿರಪರಾಧಿಗಳ ರಕ್ತವನ್ನು ಸುರಿಸುವಿಕೆ ಮತ್ತು ದುರ್ಬಲರನ್ನು ಜಜ್ಜುವದರಲ್ಲಿ ತೋರಿ ಬರುವದೆಂದು ಘೋಷಿಸುತ್ತಾನೆ (ಯೆರೆಮೀಯ 22:15-17). ಇಂದು ಒಬ್ಬನು ಸುವಾರ್ತೆಗೆ ವಿಧೇಯನಾಗಿರುವ ಹೊರತು ದೇವರನ್ನು ನಿಜವಾಗಿಯೂ ತಿಳಿದವನೇ ಆಗಿರುವದಿಲ್ಲ (2 ಥೆಸಲೋನಿಕ 1:6-10).

3. *ಇದು ಕೃಪೆ ಒಂದು ಒಡಂಬಡಿಕೆಯಾಗಿದೆ.* ಎಲ್ಲಕ್ಕಿಂತ ಮೇಲಾಗಿ, ದೇವರು ನಮಗೆ "ಕರುಣೆಯುಳ್ಳವನು" (ವ. 12). ಆತನು ಕ್ಷಮಾಪಣೆಯನ್ನು ಅನುಗ್ರಹಿಸುವದರಲ್ಲಿ ಆತನ ಕರುಣೆಯು ಸಾಭಿತುಗೊಂಡಿರುತ್ತದೆ. ಇದು ಹೊಸ ಒಡಂಬಡಿಕೆಯ ಕೇಂದ್ರಿತವಾದ ಅಂಶವಾಗಿರುತ್ತದೆ (ನೋಡಿರಿ 10:16-18; ಮತ್ತಾಯ 26:28).

4. *ಇದು ಚಿರತ್ವದ ಒಂದು ಒಡಂಬಡಿಕೆ.* ಹಳೆಯ ಒಡಂಬಡಿಕೆಯು ಹಳತಾಗಿತ್ತು ಮತ್ತು ಪತ್ರಿಕೆಯು ಬರೆಯಲ್ಪಟ್ಟ ನಂತರದಲ್ಲಿ ಅದು ಸ್ವಲ್ಪ ಕಾಲದಲ್ಲಿಯೇ ಗತಿಸಿ ಇಲ್ಲದಂತಾಗಲಿತ್ತು (ಇಬ್ರಿಯ 8:13). "ಹಳೇದಾಗುತ್ತಾ" ಎಂಬ ಪದಗುಚ್ಛವು (ಒಂದು ವರ್ತಮಾನ ಕಾಲರೂಪದ ದೃದಂತವಾಗಿದ್ದು) ಇಬ್ರಿಯರಿಗೆ ಪತ್ರಿಕೆಯು ಬರೆಯಲ್ಪಡುತ್ತಿರುವ ವೇಳೆಯಲ್ಲಿ ಹಳೆಯ ವ್ಯವಸ್ಥೆಯು ಇನ್ನು ಸಕ್ರಿಯವಾಗಿತ್ತು ಎಂಬುದನ್ನು ಸೂಚಿಸುತ್ತದೆ, ಆದರೆ ಈಗಾಗಲೆ "ಹಳೇದಾಗಿತ್ತು" (ಒಂದು ಅನಿಶ್ಚಿತ ಭೂತಕಾಲದಲ್ಲಿ ವ್ಯಕ್ತಪಡಿಸಲ್ಪಟ್ಟಿದೆ, ಅದೊಂದು ಪೂರ್ತಿಗೊಂಡ ಕ್ರಿಯೆ). ಅದು ಹೇಗೆ ಎರಡೂ ಆಗಿರುವದಕ್ಕೆ ಸಾಧ್ಯವಿತ್ತು? ಕ್ರಿಸ್ತನು ಹೊಸ ಒಡಂಬಡಿಕೆಯಡಿಯಲ್ಲಿ ಈಗಾಗಲೇ ಮಹಾಯಾಜಕನಾಗಿ ಸಕ್ರಿಯನಾಗಿದ್ದನು; ಆದರೆ ಕಳೆಗುಂದುತ್ತಿರುವ ಸೇವೆಗಳನ್ನೊಳ ಗೊಂಡ ದೇವಾಲಯವು ಇನ್ನೂ ಇಲ್ಲದಂತಾಗಿರಲಿಲ್ಲ. ಈ ವಚನವು ಕ್ರಿ.ಶ. 70ರಲ್ಲಿ ಬರಲಿದ್ದ ಯೆರೂಸಲೇಮಿ ನಾಶನವನ್ನು ಸೂಚನೆಯಾಗಿರುತ್ತದೆ.

## ಇಸ್ರಾಯೇಲ್ ಮತ್ತು ಯೆಹೂದ (8:8)

ಕೆಲವು ಸಹಸ್ರವರ್ಷಪೂರ್ವ ಸಿದ್ಧಾಂತ ಊಹಾಕಾರರು ಇಸ್ರಾಯೇಲ್ ಮತ್ತು ಯೆಹೂದ ರಾಜ್ಯಗಳು ಇನ್ನೂ ಶಾರೀರಿಕವಾಗಿ ಪೂರ್ಣ ಮರುಸ್ಥಾಪನೆ ಮಾಡಲ್ಪಟ್ಟಿರು ವದಿಲ್ಲವಾದ್ದರಿಂದ ಹೊಸ ಒಡಂಬಡಿಕೆಯು ಇನ್ನೂ ಕೊಡಲ್ಪಟ್ಟಿಲ್ಲ ಎಂದು ಕಲ್ಪಿಸಿಕೊಳ್ಳುತ್ತಾರೆ. ಹೊಸ ಒಡಂಬಡಿಕೆಗೆ ಅದು ಅಗತ್ಯವಾಗಿದ್ದಲ್ಲಿ, ನಮ್ಮ ದಿನಗಳಲ್ಲಿ ಪಾಪಗಳ ಪೂರ್ಣ ಕ್ಷಮಾಪಣೆಯಲ್ಲಿನ ನಮ್ಮ ಭರವಸವು ನಾಶಗೊಳಿಸಲ್ಪಡುವದು. ಯೆರೆಮೀಯ 31:31-34ರ ಪ್ರವಾದನೆಯಲ್ಲಿನ ಒಂದು ಅಂಶವು ಪಂಚಾಶತ್ತಮ ದಿನದಂದು (ಅಪೊಸ್ತಲರ ಕೃತ್ಯಗಳು 2) ಪ್ರತಿಷ್ಠಾಪಿಸಲ್ಪಟ್ಟ ಕ್ರಿಸ್ತನ ಹೊಸ ಒಡಂಬಡಿಕೆಯಲ್ಲಿ ನೆರವೇರಿಲ್ಲವಾದರೆ, ಅದರಲ್ಲಿ ಯಾವದೂ ನೆರವೇರಲಿಲ್ಲವೆಂದಾಗುತ್ತದೆ. ಅದು ನೆರವೇರಿ*ಯುತ್ತದೆ*, ಮತ್ತು ಕ್ರೈಸ್ತರು ಸಭೆಯಲ್ಲಿ ಪಾಪಗಳ ಪೂರ್ಣ ಕ್ಷಮಾಪಣೆಯ ಭರವಸವನ್ನು ಹೊಂದಿರುವದು *ನಿಜವೇ* ಆಗಿದೆ. ಕ್ಷಮಾಪಣೆ ಮತ್ತು ಹೊಸ ಒಡಂಬಡಿಕೆಗಳು ಜೊತೆ ಜೊತೆಯಾಗಿ ಸಾಗುತ್ತವೆ. ಹೊಸ ಒಡಂಬಡಿಕೆಯು ಕ್ರಿಸ್ತನು ಮರಣಿಸಿ ಎರಡು ಸಾವಿರ ಅಥವಾ ಹೆಚ್ಚು ವರ್ಷಗಳ ಬಳಿಕ ಜಾರಿಗೆ ಬರುವೆಂದು ಊಹಿಸಿಕೊಳ್ಳುವದು ನಂಬಿಕೆಯಲ್ಲಿ ದುರ್ಬಲವಾಗಿದ್ದವರನ್ನು ಅವರು ಮೊದಲು ಇಬ್ರಿಯರಿಗೆ ಪತ್ರಿಕೆಯನ್ನು ಓದಿದಾಗ ಯೆಹೂದಿಮತವನ್ನು ತೊರೆದು ಬರುವಂತೆ ಮನವೊಲಿಸಲ್ಪಟ್ಟಿರುವದಕ್ಕೆ ಸಾಧ್ಯತೆಯು ಬಹಳ ಕಡಿಮೆಯಿರುತ್ತಿತ್ತು. ಹೊಸ ಒಡಂಬಡಿಕೆಯ ಬರೋಣದ ಕುರಿತ ಪ್ರವಾದನೆಯು ನೆರವೇರಿದೆ ಎಂಬ ಸತ್ಯವು ಇಬ್ರಿಯ 8-10 ಅಧ್ಯಾಯಗಳನ್ನು ಚೆನ್ನಾಗಿ ಕೇಳಿಸಿಕೊಳ್ಳುವ ಯಾವನಿಗಾದರೂ ಸ್ಪಷ್ಟವಾಗುವದು. ಯೇಸುವಿಗಾಗಿ ಜೀವಿಸುವದನ್ನು ಉತ್ತಮಗೊಳಿಸುವಂಥದ್ದು ಹೊಸ ಒಡಂಬಡಿಕೆಯೇ ಆಗಿರುತ್ತದೆ.

ಯೆಹೂದ ಮತ್ತು ಇಸ್ರಾಯೇಲ್ ಸ್ಪಷ್ಟವಾಗಿ ಇಂದು ಇಡೇ ದೇವಜನರಿಗೆ ರೂಪಕಗಳಾಗಿರುತ್ತಾರೆ. ನಾವು ಕ್ರಿಸ್ತನ ಮತ್ತು ಸಭೆಯ ಮೂಲಕವಾಗಿ ದೇವರ ಸಂಗಡ ಒಂದು ಹೊಸ ಒಡಂಬಡಿಕೆಯ ಸಂಬಂಧದಲ್ಲಿರುತ್ತೇವೆ (8:8).

## ನಂಬಿಗಸ್ತವಾದ ಬೋಧನೆ (8:8, 9)

ಇಬ್ರಿಯರಿಗೆ ಪತ್ರಿಕೆಯು ಮಾಡುವಂತೆಯೇ, ನಾವು ಜನರನ್ನು ಕ್ರಿಸ್ತನ ಬಳಿಗೆ ನಡಿಸಬೇಕೆಂದರೆ ಅವರು ಇರುವಲ್ಲಿಂದಲೇ ಆರಂಭಿಸತಕ್ಕದ್ದು. ಒಬ್ಬ ಯೆಹೂದ್ಯನು ಹಳೆಯ ಒಡಂಬಡಿಕೆಯ ಶಾಸ್ತ್ರಗಳನ್ನು ನಂಬುವದಾದರೆ, ಫಿಲಿಪ್ಪನು ಐಥಿಯೋಪ್ಯದ ಕಂಚುಕಿಯ ವಿಷಯದಲ್ಲಿ ಮಾಡಿದಂತೆಯೇ, ನಾವು ಅಲ್ಲಿಂದಲೇ ಆರಂಭಿಸತಕ್ಕದ್ದು: "ಫಿಲಿಪ್ಪನು ಉಪದೇಶಿಸುವದಕ್ಕೆ ತೊಡಗಿ *ಅದೇ ವಚನವನ್ನು ಆಧಾರ ಮಾಡಿಕೊಂಡು* ಅವನಿಗೆ ಯೇಸುವಿನ ವಿಷಯವಾದ ಸುವಾರ್ತೆಯನ್ನು ತಿಳಿಸಿದನು" (ಅಪೊಸ್ತಲರ ಕೃತ್ಯಗಳು 8:35; ಒತ್ತಿ ಹೇಳಿದ್ದು ನನ್ನದು). ಯೆರೆಮೀಯನು ಪ್ರವಾದನೆ ಮಾಡಿದ ಪ್ರಕಾರವಾಗಿಯೇ, ಯೆಹೂದ್ಯರು ಲೋಕದಲ್ಲೆಲ್ಲಾ ಚದುರಿಸಲ್ಪಟ್ಟಿದ್ದಾರೆ (ಯೆರೆಮೀಯ 9:16). ಅವರು ತಮ್ಮ ಶಾಸ್ತ್ರಗಳ ಜೊತೆಯಾಗಿ ಕ್ರಿಸ್ತನಿಗೆ ಒಂದು ಸಜೀವ ಸಾಕ್ಷಿಯಾಗಿ ಇರುತ್ತಾರೆ. ಕ್ರೈಸ್ತ ಗ್ರಂಥದಿಂದ ಪ್ರತ್ಯೇಕವಾಗಿ ಸಂರಕ್ಷಿಸಲ್ಪಟ್ಟಿರುವ ಯೆಹೂದಿ ಬೈಬಲ್ ಆ ಉದ್ದೇಶವನ್ನು ನೆರವೇರಿಸುವದಾಗಿದೆ ಎಂಬುದನ್ನು ನಾವು ಅವರ ಶಾಸ್ತ್ರಗಳಿಂದ ಸಾಭಿತುಪಡಿಸಬಲ್ಲೆವು. ಅಂಥ ಪುರಾವೆಯು ಅನೇಕರನ್ನು ಕ್ರಿಸ್ತನ ಕಡೆಗೆ ತಿರುಗಿಕೊಳ್ಳುವಂತೆ ಮನವೋಲಿಸಬಹುದಾಗಿದೆ. ಕ್ರೈಸ್ತರಿಗೆ ಇರುವಂತೆ ಬೇರೆಯವರು ತಮ್ಮ ನಂಬಿಕೆಗೆ ಅಂತಹ ದೃಢೀಕರಣವನ್ನು ಹೊಂದಿರುವದಿಲ್ಲ. ಹೊಸ ಒಡಂಬಡಿಕೆಯು ಹಳೆಯ ಒಡಂಬಡಿಕೆಯ ಪ್ರವಾದನೆಗಳನ್ನು ನೆರವೇರಿಸಿದೆ ಎಂಬುದನ್ನು ಸಾಭಿತುಪಡಿಸುವದಕ್ಕೆ ನಮಗೆ ಪುನರುತ್ಥಾನಗೊಂಡಿರುವ ಕರ್ತನು ಇದ್ದಾನೆ ಮತ್ತು ಸ್ವತಂತ್ರವಾದ ಯೆಹೂದಿ ಶಾಸ್ತ್ರಗಳಿರುತ್ತವೆ. ತಮ್ಮ ಪರಿಶುದ್ಧ ಗ್ರಂಥದ ಜೊತೆಯಲ್ಲಿ ಯೆಹೂದ್ಯರು ಯಾವಾಗಲೂ ಕ್ರಿಸ್ತನಿಗೆ ಒಂದು ಸಾಕ್ಷಿಯಾಗಿ ಇರುವರು. ಅವರು ಈ ಲೋಕದಲ್ಲಿ ಎಲ್ಲಿಯೇ ಆಗಲಿ ನಂಬಿಕೆಗೆ ಸಹಾಯಕರಾಗಿ ಜೀವಿಸುವರು. ಹಳೆಯ ಒಡಂಬಡಿಕೆಯು ನಮಗೆ ಆದರಣೆಯನ್ನೂ ಉಪದೇಶವನ್ನು ಕೊಡುತ್ತಲೇ ಇರುತ್ತದೆ (ರೋಮಾ 15:4; 1 ಕೊರಿಂಥ 10:11; ಗಲಾತ್ಯ 3:24).

## ಹೃದಯದಲ್ಲಿ ಬರೆಯಲ್ಪಟ್ಟಿದೆ (8:10)

8:10ನೇ ವಚನವು ಪವಿತ್ರಾತ್ಮನ ನೇರವಾದ ಕ್ರಿಯೆಯ ಮೂಲಕವಾಗಿ ಪಾಪವನ್ನು ಸಂಪೂರ್ಣವಾಗಿ ಜಯಿಸುವಂತೆ ಶಕ್ತಗೊಳಿಸುವ ಶಕ್ತಿಯು ಒಬ್ಬನ ಹೃದಯದಲ್ಲಿ ಒಂದು ಹೊಸ ಶಕ್ತಿಯು ಇಡಲ್ಪಡುವದನ್ನು ಸೂಚಿಸುತ್ತದೆಂದು ಕೆಲವರು ಹೇಳಿಕೊಳ್ಳುತ್ತಾರೆ. ದೇವರ ಆತ್ಮನ ಮೂಲಕ ನಮ್ಮಲ್ಲಿ ಪಾಪವನ್ನು ಜಯಿಸುವದಕ್ಕೆ ಒಂದು ವಿಶೇಷ ಶಕ್ತಿಯು ಇಡಲ್ಪಡುವದೇ ಆಗಿದ್ದಲ್ಲಿ, ಒಬ್ಬ ವ್ಯಕ್ತಿಪರ ಕ್ರೈಸ್ತನು ಯಶಸ್ವಿಗೊಳ್ಳದೆ ಹೋದರೆ ಅದು ಪವಿತ್ರಾತ್ಮನ ಮೇಲೆ ಮತ್ತು ಆತನ ಶಕ್ತಿಯ ಮೇಲೆ ಪ್ರತಿಫಲನಗೊಳ್ಳುವದು. ನಾವು ಪರಿವರ್ತನೆಗೊಳ್ಳುವ ವೇಳೆಯಲ್ಲಿ ಒಂದು "ದೈವಿಕ ಸ್ವಭಾವ" ವನ್ನು ಪಡಕೊಳ್ಳುತ್ತೇವೋ? ಈ ರೀತಿಯಾಗಿ ಹೇಳಿಕೊಳ್ಳಲು ಕೆಲವರು 2 ಪೇತ್ರ 1:2-4ನ್ನು ಬಳಸುತ್ತಾರೆ, ಆದರೆ ಪೇತ್ರನು ಅದನ್ನು ಹೇಳಲಿಲ್ಲ. ನಾವು ದೈವ ಸ್ವಭಾವದಲ್ಲಿ "ಪಾಲುಗಾರರಾಗಬೇಕೆಂಬ" ಎಂದು ಘೋಷಿಸುತ್ತಾನೆ. ಅಂದರೆ, ಆ ಸ್ವಭಾವದಲ್ಲಿ ಪಾಲುಗಾರರಾಗುವಂತೆ ಪೂರ್ಣವಾಗಿ ಬೆಳೆಯುವ ಸದವಕಾಶವು ಕ್ರೈಸ್ತರಿಗೆ ಕೊಡಲ್ಪಟ್ಟಿದೆ

ಎಂಬದು. ಪವಿತ್ರಾತ್ಮನು ಮಾನವ ಸ್ಪಂದನೆಯನ್ನು ಮೀರಿ ತೀರ್ಮಾನವನ್ನು ಕೈಗೊಳ್ಳುವದಿಲ್ಲ. ದೇವರು ಮಾನವ ಹೃದಯದಲ್ಲಿ ದಬ್ಬಾಳಿಕೆಯ ಕ್ರಮವನ್ನು ಬಳಸುವದಿಲ್ಲ.

ನಾವು ಹೇಗೆ ಆತನ ಚಿತ್ತವನ್ನು "ನಮ್ಮ ಹೃದಯಗಳಲ್ಲಿ ಬರೆಯಲ್ಪಡುವಂತೆ" ಮಾಡಬಲ್ಲೆವು? ಈ ದೃಶ್ಯವನ್ನು ಕಲ್ಪಿಸಿಕೊಳ್ಳಿರಿ. ನೀವು ಗಂಟೆಗೆ 35 ಮೈಲುಗಳಷ್ಟು ವೇಗದಲ್ಲಿ ಶಾಲೆಯಿರುವ ವಲಯದಲ್ಲಿ ಯಾವದೋ ಯೋಚನೆಯನ್ನು ಮಾಡುತ್ತಾ ವಾಹನವನ್ನು ಚಲಾಯಿಸುತ್ತಿರುವಿರಿ, ಆಗ ಏಕಾಏಕಿ, ನಿಲ್ಲಿಸಿದ್ದ ಎರಡು ಕಾರುಗಳ ನಡುವಿನಿಂದ ಏಳು ವಯಸ್ಸಿನ ಹುಡುಗನು ಬೀದಿಯಲ್ಲಿ ಓಡಿ ಬರುತ್ತಾನೆ. ನೀವು ತೀವ್ರವಾಗಿ ಬ್ರೇಕ್ ಹಾಕುವಿರಿ – ನೀವು ನಿಲ್ಲಿಸಿದಾಗ, ನಿಮ್ಮ ವಾಹನದ ಮುಂದಿನ ಬಂಪರ್ ಹುಡುಗನಿಗೆ ತಾಕುತ್ತಲಿತ್ತು. ನೀವು ಗಡಗಡನೆ ನಡುಗುತ್ತಾ ಬೆವರು ಸುರಿಸಲಾರಂಭಿ ಸುವಿರಿ. ನೀವು ಎಷ್ಟು ಕೂದಲೆಳೆಯ ಅಂತರದಲ್ಲಿ ಒಂದು ಮಗುವನ್ನು ಕೊಲ್ಲುವದಕ್ಕಿದ್ದಿರಿ! ಈ ದಿನ ಮೊದಲುಗೊಂಡು ಇನ್ನೆಂದೂ ನಿಮಗೆ ರಸ್ತೆಯ ಬದಿಯಲ್ಲಿ "ಶಾಲೆಯ ವಲಯ, ಗಂಟೆಗೆ 15 ಮೈಲುಗಳು ಮೀತಿ" ಎಂದು ಬರೆದಿರುವ ಫಲಕದ ಅಗತ್ಯವು ನಿಮಗೆ ಇರುವದಿಲ್ಲ. ವಿಧಿಯು ನಿಮ್ಮ ಹೃದಯದ ಮೇಲೆ ಬರೆಯಲ್ಪಡುವದು.[27]

"ಅವರ ಹೃದಯದ ಮೇಲೆ ಅವುಗಳನ್ನು ಬರೆಯುವೆನು" ಎಂಬುದರ ಅರ್ಥವು ನಾವು ದೇವರ ಚಿತ್ತವನ್ನು ನಮ್ಮ ಜೀವಿತದ ಕೇಂದ್ರಬಿಂದುವಾಗಿ ಮಾಡಿಕೊಳ್ಳುತ್ತೇವೆ, ಪ್ರತಿಯೊಂದು ತೀರ್ಮಾನಗಳಲ್ಲಿಯೂ ಅದನ್ನು ಪರಿಗಣಿಸುವೆವು ಮತ್ತು ಆತನ ಪ್ರಕಟಣೆಯನ್ನು ಶ್ರದ್ಧೆಯಿಂದ ಅನುಸರಿಸುವೆವು. ನಾವು ಕಲ್ಲಿನ ಮೇಲೆ ಬರೆಯಲ್ಪಟ್ಟಿರುವ ಒಂದನ್ನು ಗೌರವಿಸುವದಿಲ್ಲ, ಬದಲಾಗಿ ನಮ್ಮ ಹೃದಯಗಳು ದೇವರಿಂದ ಮತ್ತು ಆತನ ಪ್ರೀತಿಯಿಂದ ತುಂಬಿಸಲ್ಪಟ್ಟಿವೆ. ದೇವರನ್ನು ಪ್ರೀತಿಸಬೇಕು ಮತ್ತು ವಿಧೇಯರಾಗಬೇಕು ಎಂಬ ಬಯಕೆಯೇ ದೈವಿಕ ಸ್ವಭಾವವನ್ನು ಹೆಚ್ಚು ಪೂರ್ಣವಾಗಿ ನಮ್ಮ ಜೀವಗಳೊಳಗೆ ತರುತ್ತದೆ. ನಾವು ದೇವರನ್ನು ಪ್ರೀತಿಸುವಾಗ, ಹಾಡುವದು, ಆರಾಧಿಸುವದು, ಮತ್ತು ಬೈಬಲ್ ತರಗತಿಗಳು ನಮಗೆ ಸಂತೋಷಕರ ಮತ್ತು ರೋಮಾಂಚನಕರ ಆಗುತ್ತವೆ. ತಂದೆಗೆ ಮಾಡುವ ಒಂದು ಸರಳವಾದ ಪ್ರಾರ್ಥನೆಯು, ನಂಬಿಕೆಯಲ್ಲಿ ದೇವರನ್ನು ನಿಜವಾಗಿಯೂ ಅರಿತುಕೊಂಡವನಿಗೆ ಸಂತೋಷದ ಕಣ್ಣೀರನ್ನು ತರಿಸಬಲ್ಲದು. ನಾವು ನಿಜವಾಗಿಯೂ ದೇವರನ್ನು ತಿಳಿದುಕೊಂಡವರಾಗಿ ಆತನನ್ನು ಪ್ರೀತಿಸುವದಾದರೆ, ನಾವು ಇನ್ನು ಮೇಲೆ ಆತನು ಕೋಪವುಳ್ಳ ದೇವತ್ವವಾಗಿ ಅಲ್ಲ, ಆದರೆ ಪ್ರೀತಿಯುಳ್ಳ ತಂದೆಯಂತೆ ಕಾಣುವೆವು. ದೇವರ ಮುಂದೆ ಒಪ್ಪಿಕೊಂಡ ಪಾಪವೊಂದು ತಕ್ಷಣವೇ ದಾಖಲೆಯಿಂದ ಅಳಿಸಿ ಹಾಕಲ್ಪಟ್ಟಿದೆಯೆಂಬುದನ್ನು ತಿಳಿಯುವಾಗ ನಾವು ಹೇಳಲಾಗದ ಭಾವನಾತ್ಮಕತೆಯಿಂದ ಉಕ್ಕುವೆವು. ದೇವರು ನಮ್ಮ ಸಂಗಡ ಇದ್ದಾನೆ ಎಂದು ಹೇಳುವ ರೋಮಾ 8:31ನ್ನು ನಾವು ಪೂರ್ಣವಾಗಿ ನಂಬುವೆವು. ಆತನ ವಾಕ್ಯವನ್ನು ನಮ್ಮ ಹೃದಯಗಳಲ್ಲಿ ಬರೆಯೋಣ.

## ಅವರ ಮನಸ್ಸುಗಳಲ್ಲಿ ಧರ್ಮಶಾಸ್ತ್ರ (8:10)

ತಮಗೆ "ಕ್ರಿಸ್ತನಲ್ಲಿರುವ ಸ್ವಾತಂತ್ರವು" ಅವರಿಂದ ಎಲ್ಲಾ ಧರ್ಮಶಾಸ್ತ್ರ ಮತ್ತು ನಿರ್ಬಂಧಗಳನ್ನು ತೆಗೆದು ಹಾಕುತ್ತದೆಂದು ಯೋಚಿಸುವವರು ದುಃಖಕರವಾಗಿ ತಪ್ಪು ಕಲ್ಪನೆ ಮಾಡಿಕೊಂಡವರಾಗಿದ್ದಾರೆ, ಯಾಕೆಂದರೆ ಒಬ್ಬನು ಕರ್ತನ "ಆಜ್ಞೆಗಳನ್ನು" ಕೈಕೊಂಡು ನಡೆಯುವ ಮೂಲಕ ಆತನ ಮೇಲಿನ ಪ್ರೀತಿಯನ್ನು ತೋರ್ಪಡಿಸುವವನಾಗಿರುತ್ತಾನೆ (ಯೋಹಾನ 14:15). ಪ್ರೀತಿಯು ನಿಜವಾಗಿಯೂ ಧರ್ಮಶಾಸ್ತ್ರದ ನೆರವೇರಿಕೆಯಾಗಿದೆ

(ರೋಮಾ 13:8-10), ಆದರೆ ಒಬ್ಬನು ಕರ್ತನನ್ನು ಪ್ರೀತಿಸುತ್ತಾನೆಂಬ ಒಂದೇ ಕಾರಣಕ್ಕೆ ಸಕಲ ಧರ್ಮಶಾಸ್ತ್ರವು ತೆಗೆದು ಹಾಕಲ್ಪಡುತ್ತದೆಂದು ಇದರರ್ಥವಾಗಿರುವದಿಲ್ಲ. ಮೋಶೆಯ ಧರ್ಮಶಾಸ್ತ್ರದ ಮೂಲಕ ಅಥವಾ ಧರ್ಮಶಾಸ್ತ್ರದ ಬೇರೆ ಇನ್ನಾವದೇ ವ್ಯವಸ್ಥೆಯ ಮೂಲಕವಾಗಲಿ ಯಾವನೂ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ, ಆದರೆ ಒಂದು "ಒಡಂಬಡಿಕೆ" ಯು ಕೆಲವೊಂದು ಶರತ್ತುಗಳ ಆಧಾರದ ಮೇಲೆ ನೆರವೇರಿಸಲ್ಪಡಬೇಕಾದ ವಾಗ್ದಾನಗಳನ್ನು ಸೂಚಿಸುತ್ತದೆ.

ತಾನು ಮೋಶೆಯ ಧರ್ಮಶಾಸ್ತ್ರದಿಂದ ವಿಮುಕ್ತನಾಗಿದ್ದಾನೆಂಬುದು ಪೌಲನಿಗೆ ಗೊತ್ತಿತ್ತು, ಆದರೆ ತಾನು ಈಗಲೂ "ಕ್ರಿಸ್ತನ ನಿಯಮಕ್ಕೆ [ಧರ್ಮಶಾಸ್ತ್ರಕ್ಕೆ] ಒಳಗಾದವನು" ಎಂದು ಒಪ್ಪಿಕೊಳ್ಳುತ್ತಾನೆ (1 ಕೊರಿಂಥ 9:21). ಇದು ನಮ್ಮಿಂದ ಅಧೀನಪಡಿಸಿಕೊಳ್ಳುವದನ್ನು ಕೇಳುವ ದೇವರ ಕರಾರು, ಅಥವಾ ಒಪ್ಪಂದ ಆಗಿರುತ್ತದೆ. ಒಬ್ಬನು ವಿಧೇಯತೆಯಿಲ್ಲದೆ ಕರ್ತನಿಗೆ ತನ್ನ ಪ್ರೀತಿಯನ್ನು ತೋರ್ಪಡಿಸುವದಕ್ಕೆ ಸಾಧ್ಯವೋ? ಒಬ್ಬನು ಸುವಾರ್ತೆಗೆ ವಿಧೇಯನಾಗದೆಯೇ ರಕ್ಷಣೆ ಹೊಂದುವದಕ್ಕೆ ಸಾಧ್ಯವೋ (2 ಥೆಸಲೋನಿಕ 1:6-10; 1 ಪೇತ್ರ 4:17)? ಸಮುವೇಲನು ಸೌಲನಿಗೆ ಹೀಗೆ ಹೇಳಿದ್ದರಲ್ಲಿ ಆಶ್ಚರ್ಯವೇನಿಲ್ಲ, "ಯಜ್ಞವನ್ನರ್ಪಿಸುವದಕ್ಕಿಂತ ಮಾತು ಕೇಳುವದು ಉತ್ತಮವಾಗಿದೆ; ಟಗರುಗಳ ಕೊಬ್ಬಿಗಿಂತ ವಿಧೇಯತ್ವವು ವಿಶೇಷವಾಗಿದೆ" (1 ಸಮುವೇಲ 15:22).

ಒಬ್ಬನು ಯಾವದೇ ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವ ಮೂಲಕವಾಗಲಿ ರಕ್ಷಣೆಯನ್ನು ಸಂಪಾದಿಸಿಕೊಳ್ಳಲಾರನು ಯಾಕೆಂದರೆ ಯಾವನೂ ಪರಿಪೂರ್ಣವಾಗಿ ಜೀವಿಸಲಾರನು (ರೋಮಾ 3:23). ಒಬ್ಬನೂ ರಕ್ಷಣೆಯನ್ನು "ಸಂಪಾದಿಸಿಕೊಳ್ಳಲು" ಸಾಧ್ಯವಿಲ್ಲವಾದರೂ, ಪ್ರತಿಯೊಬ್ಬನು ಕ್ರಿಸ್ತನ ಪ್ರೀತಿಯ ಕರೆಗೆ ತನ್ನ ಪ್ರವೃತ್ತನಾಗಿ ಪ್ರತಿಕ್ರಿಯೆಯನ್ನು ತೋರಿಸಬೇಕು (ಮತ್ತಾಯ 11:28-30; ಪ್ರಕಟಣೆ 3:20). ನಾವು ಎಲ್ಲಾ ಆಜ್ಞೆಗಳಿಗೆ ವಿಧೇಯರಾದ ಬಳಿಕವೂ, ನಾವು ಆಗಲೂ "ಆಳುಗಳು, ಪ್ರಯೋಜನವಿಲ್ಲದವರು" ಆಗಿದ್ದೇವೆ (ಲೂಕ 17:10). ಯಾವನಾದರೂ ರಕ್ಷಣೆ ಹೊಂದುವದು ದೇವರ ಕೃಪೆಯ ಮೂಲಕವೇ ಆಗಿದೆ.

## ದೇವರೊಂದಿಗೆ ಅನ್ಯೋನ್ಯತೆ (8:10, 11)

"ನಾನು ಅವರಿಗೆ ದೇವರಾಗಿರುವೆನು" ಮತ್ತು "ಅವರು ನನಗೆ ಪ್ರಜೆಯಾಗಿರುವರು" ಎಂಬವುಗಳು ಹೊಸ ಒಡಂಬಡಿಕೆಯ ಮಹತ್ವಪೂರ್ಣವಾದ ವಾಗ್ದಾನಗಳಾಗಿವೆ. ನಾವು ದೇವರಲ್ಲಿ ನಡೆಯುವವರಾಗಿ ಆತನಿಗಾಗಿ ಜೀವಿಸುವಾಗ ಆತನೊಂದಿಗೆ ನಿರಂತರವಾದ ಒಂದು ಅನ್ಯೋನ್ಯತೆಯನ್ನು ಹೊಂದಿರುವೆವು. ಇದು ಶಾಸ್ತ್ರಗಳಲ್ಲಿ ಬೇರೆಯಾದಂಥ ಯೋಚನೆಯಾಗಿರುವದಿಲ್ಲ; ಅದು ಹಲವಾರು ವಿಧವಾದ ರೀತಿಗಳಲ್ಲಿ ಪರೋಕ್ಷವಾಗಿ ಸೂಚಿಸಲ್ಪಟ್ಟಿರುತ್ತದೆ. ಪ್ರಕಟನೆ 3:20ರಲ್ಲಿ ಯಾವನು ತನ್ನ ಹೃದಯದ "ಬಾಗಲನ್ನು ತೆರೆದು" ಪ್ರವೇಶಿಸುವದಕ್ಕೆ ಅನುಮತಿ ಕೊಡುವವನ ಸಂಗಡ ಊಟ ಮಾಡುವೆನು ಎಂದು ಯೇಸು ವಾಗ್ದಾನ ಮಾಡಿದನು. ಆತನು ಯೋಹಾನ 17:21ರಲ್ಲಿ "ನೀನು ನನ್ನನ್ನು ಕಳುಹಿಸಿ ಕೊಟ್ಟಿದ್ದೀ ಎಂದು ಲೋಕವು ನಂಬುವದಕ್ಕಾಗಿ ಅವರೆಲ್ಲರೂ ಒಂದಾಗಿರಬೇಕೆಂತಲೂ ತಂದೆಯೇ, ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರೂ ನಮ್ಮಲ್ಲಿ ಇರಬೇಕೆಂತಲೂ ಕೇಳಿಕೊಳ್ಳುತ್ತೇನೆ" ಎಂದು ಪ್ರಾರ್ಥಿಸುವೆನು. ಕ್ರೈಸ್ತರು ತಂದೆ ಮತ್ತು ಮಗ ಇಬ್ಬ"ರಲ್ಲಿ" ಯೂ ಇರಬಲ್ಲರು, ಅದು ನಿಶ್ಚಯವಾಗಿಯೂ ಒಂದು ಆಪ್ತ ಅನ್ಯೋನ್ಯತೆಯ ಭಾವನೆಯನ್ನು

ಸೂಚಿಸುತ್ತದೆ. ಶಿಷ್ಯರು "ದ್ರಾಕ್ಷೇ ಬಳ್ಳಿಯಲ್ಲಿ ಕೊಂಬೆಗಳು" ಎಂದು ಮತ್ತು ತಾನು ದ್ರಾಕ್ಷೇ ಬಳ್ಳಿ ಎಂದು ಯೇಸು ಹೇಳಿದನು (ಯೋಹಾನ 15:5). ದ್ರಾಕ್ಷೇ ಬಳ್ಳಿಯಾಗಿರುವ ಕ್ರಿಸ್ತನಲ್ಲಿ "ನೆಲೆಗೊಳ್ಳುವದು" ಶಿಷ್ಯರ ಕರ್ತವ್ಯವಾಗಿರುತ್ತದೆ; ಯಾವನಾದರೂ ನೆಲೆಗೊಳ್ಳುವದಿಲ್ಲವಾದರೆ ಆತನು ಕಡಿದು ಹಾಕಲ್ಪಟ್ಟು ಒಂದು ಕೊಂಬೆಯಾಗಿ ಸುಡಲ್ಪಡುವನು (15:6). "ಬೆಳಕಿನಲ್ಲಿ ನಡೆಯುವದು" (1 ಯೋಹಾನ 1:7) ಎಂದರೆ ಕ್ರಿಸ್ತನಲ್ಲಿ, ಅಥವಾ ಕ್ರಿಸ್ತನೆಡೆಗೆ ನಡೆಯುವದು ಎಂದರ್ಥವಾಗಿದೆ.

ನಮ್ಮ ದೇವರು ಈಗ ನಮ್ಮೊಂದಿಗೆ ಆಪ್ತವಾದ ಸಂಬಂಧದಲ್ಲಿರುತ್ತಾನೆ, ಈಗಿನ ಜೀವನದಲ್ಲಿ ನಾವು ಆತನ ಮಕ್ಕಳಾಗಿರುತ್ತೇವೆ. ಲೋಕದಿಂದ ಹೊರಗೆ ಬಂದು ಪ್ರತ್ಯೇಕವಾಗಿರಬೇಕೆಂದು ಪೌಲನು ಕೊರಿಂಥದ ಕ್ರೈಸ್ತರಿಗೆ ಬುದ್ಧಿ ಹೇಳಿದುನು – ನಾವು ಆತನವರು ಮತ್ತು ಆತನು ನಮ್ಮವನು ಎಂಬ ಫಲಿತದೊಂದಿಗೆ (2 ಕೊರಿಂಥ 6:16-18). ಪ್ರಕಟನೆ 21:3, 4 ಅನೇಕ ಸಾರಿ ಪರಲೋಕಕ್ಕೆ ಅನ್ವಯಿಸಲ್ಪಡುತ್ತದೆ, ದೇವರು ಈಗ ನಮ್ಮೊಂದಿಗೆ ವಾಸಿಸುತ್ತಾನೆ. ಆತನು ನಮ್ಮ ಕಷ್ಟಗಳನ್ನು ಮತ್ತು ಭಯಗಳನ್ನು ಅಳಿಸುತ್ತಾನೆಮ, ಮರಣದ ಭಯಗಳನ್ನು ತೆಗೆದು ಹಾಕುವನು (ನೋಡಿರಿ ಇಬ್ರಿಯ 2:14, 15). ಕ್ರಿಸ್ತನಲ್ಲಿ, ನಾವು ಬಂಧನಗಳಿಂದ ಮುಕ್ತರಾಗಿದ್ದೇವೆ. ನಮ್ಮೊಂದಿಗೆ ದೇವರನ್ನು ಹೊಂದಿರುವದು ಪ್ರಸ್ತುತಕಾಲದ ವಾಸ್ತವಿಕತೆಯಾಗಿದೆ. ಹೊಸ ಒಡಂಬಡಿಕೆಯು ಅದೆಲ್ಲವನ್ನು ಮತ್ತು ಇನ್ನೂ ಹೆಚ್ಚಾದದ್ದನ್ನು ವಾಗ್ದಾನ ಮಾಡುತ್ತದೆ.

ಅಂತ್ಯ ಕಾಲವು ಬರುವಾಗ, ದೇವರು ನಮ್ಮ ಸಂಗಡ ಪೂರ್ಣವಾಗಿಯೂ ಶಾಶ್ವತವಾಗಿಯೂ ವಾಸಿಸುವನು. ಸಭೆಯು ಪರಲೋಕಕ್ಕೆ ಪೂರ್ವಛಾಯೆಯಾಗಿರುವ ವರ್ತಮಾನಕಾಲದ ವಾಸ್ತವಿಕತೆಯಾಗಿರುತ್ತದೆ (ಪ್ರಕಟನೆ 21:3). ವಾಗ್ದಾನದ ಇನ್ನು ದೊಡ್ಡದಾದ ನೆರವೇರಿಕೆಯು ಈ ಲೋಕದಲ್ಲಿ ನಮ್ಮ ಜೀವಿತಗಳಿಗೆ ಹೊಂದಿಕೊಳ್ಳಲು ಸಾಧ್ಯವಿಲ್ಲದ ಒಂದು ರೀತಿಯಲ್ಲಿ ಸತ್ಯವಾಗಿರುತ್ತದೆ.

ಹೊಸ ಒಡಂಬಡಿಕೆಯ ಅಡಿಯಲ್ಲಿ ನಾವು ಈಗಲು "ನೋಡುವವರಾಗಿ ನಡೆಯದೆ ನಂಬುವವರಾಗಿಯೇ ನಡೆಯುತ್ತೇವೆ" (2 ಕೊರಿಂಥ 5:7). ನಾವು ವಾಕ್ಯದಿಂದ ಬರುವ ನಂಬಿಕೆಯಿಂದ ಮತ್ತು ನಂಬಿಕೆಯ ಮೂಲಕ ದೇವರನ್ನು ಬಲ್ಲವರಾಗಿದ್ದೇವೆ (ರೋಮಾ 10:17), ಹೊರತು ಒಂದು "ವೈಯಕ್ತಿಕ ಅನುಭವ"ದ ಮೂಲಕವಲ್ಲ. ದೇವರು ನಮ್ಮನ್ನು ವೈಯಕ್ತಿಕವಾಗಿ ಬಲ್ಲವನಾಗಿದ್ದಾನೆ, ಆದರೆ ನಾವು ಆತನನ್ನು ಆ ವಿಧದಲ್ಲಿ ಬಲ್ಲವರಲ್ಲ. ನಾವು ಅಗತ್ಯವಾಗುವ ಎಲ್ಲಾ ವಿಧದಲ್ಲಿಯೂ ನಮ್ಮ ಬೈಬಲ್ ಅಧ್ಯಯನ ಮತ್ತು ಜ್ಞಾನ ಹಾಗೂ ನಂಬಿಕೆಯಲ್ಲಿನ ನಮ್ಮ ಬೆಳವಣಿಗೆ ಮೂಲಕವಾಗಿ ಆತನನ್ನು ಅರಿತುಕೊಳ್ಳಬಲ್ಲೆವು. ಜೀವನದ ಅನುಭವಗಳು, ಒಳ್ಳೇದಿದ್ದರೂ ಸರಿಯೇ ಮತ್ತು ಕೆಟ್ಟವುಗಳಾಗಿದ್ದರೂ ಸರಿಯೇ, ಅವುಗಳು ನಮಗೆ ದೇವರ ವಾಗ್ದಾನಗಳನ್ನು ಮತ್ತು ಆಶೀರ್ವಾದಗಳನ್ನು ಶ್ಲಾಘಿಸುವಂತೆ ಸಹಾಯ ಮಾಡಬಲ್ಲವು. ಹೌದು, ನಾವು ದೇವರಲ್ಲಿ ಒಂದು ವೈಯಕ್ತಿಕವಾದ ಸಂಬಂಧವನ್ನು ಹೊಂದಿರತಕ್ಕದ್ದು, ಆದರೆ ಆತನೊಂದಿಗೆ ನಮ್ಮ ಸಂಬಂಧವನ್ನು ಪರಸ್ಪರವಾಗಿ "ವೈಯಕ್ತಿಕ" ಮಾಡುವ ಯಾವದೇ ಅನುಭವವು ಮಹಿಮೆಗಾಗಿ ಕಾಯತಕ್ಕದ್ದು.

## ನಂಬಿಕೆ ಮತ್ತು ಪ್ರಾಕ್ತನಶಾಸ್ತ್ರ (8:13)

ಇಬ್ರಿಯರಿಗೆ ಪತ್ರಿಕೆಯು ಬರೆಯಲ್ಪಡುವ ವೇಳೆಯಲ್ಲಿ ದೇವಾಲಯವು ಶೀಘ್ರದಲ್ಲಿಯೇ ಇಲ್ಲದಂತಾಗಲಿತ್ತು: "ಸೂರ್ಯನು ಉದಯಿಸಿದ್ದನಾದರೂ, ಚಂದ್ರನು ಇನ್ನೂ

ಕಣ್ಮರೆಯಾಗಿರಲಿಲ್ಲ."[28] ಯೇಸು ಹೀಗೆ ಮುಂತಿಳಿಸಿದ್ದನು, "ಇಲ್ಲಿ ಕಲ್ಲಿನ ಮೇಲೆ ಕಲ್ಲು ಉಳಿಯುವದಿಲ್ಲ, ಎಲ್ಲಾ ಕೆಡವಲ್ಪಡುವದು" (ಮತ್ತಾಯ 24:2). ದೇವಾಲಯದ ನಾಶನಕ್ಕೆ ಕಾರಣದ ಬಗ್ಗೆ ವಾದವಿವಾದ ಮಾಡಲಾಗಿರುತ್ತದೆ. ಟೈಟಸ್‌ನಿಗೆ ಅದನ್ನು ನಾಶಗೊಳಿಸ ಬಾರದೆಂದು ಆಜ್ಞಾಪಿಸಲಾಗಿತ್ತೆಂದು Josephus ಹೇಳಿದನು. ದೇವಾಯಲಯವನ್ನು ಸುಟ್ಟು ಹಾಕಿದ ಬೆಂಕಿಯು ಭಾಗಶಃ ವಿವರಣೆಯಾಗಿರಬಲ್ಲದು; ದೇವಾಲಯದ ಬಹುಪಾಲು ಹೊರಭಾಗವು ಚಿನ್ನದ ತಗಡಿನಿಂದ ಆವರಿಸಲ್ಪಟ್ಟಿತ್ತದೆಂಬುದನ್ನು ನೆನಪಿಸಿಕೊಳ್ಳಿರಿ. ತೀವ್ರವಾದ ಬೆಂಕಿಯು ಚಿನ್ನವನ್ನು ಕರಗಿಸುತ್ತಿದ್ದಂತೆ ಕೆಲವು ಬಂಡೆಗಳಲ್ಲಿನ ಬಿರುಕುಗಳಲ್ಲಿ ಹರಿದು ಹೋಗಿರಬಹುದಾಗಿದೆ. ಸೈನಿಕರು ಸ್ವಲ್ಪ ಚಿನ್ನವನ್ನು ಪುನಃ ವಶಪಡಿಸಿಕೊಳ್ಳುವದಕ್ಕಿದ್ದ ಏಕೈಕ ದಾರಿಯೆಂದರೆ ಕಲ್ಲುಗಳನ್ನು ಒಡೆದು ಹಾಕುವದಾಗಿತ್ತು. ಬಳಿಕ ಅವರು ಕಲ್ಲುಗಳನ್ನು ಕೆಳಗಿದ್ದ ಬೀದಿಯಲ್ಲಿ ಎಸೆದರು. ದೇವಾಲಯದ "ಕಟ್ಟಡಗಳು" (ಮತ್ತಾಯ 24:1) ಸಂಪೂರ್ಣವಾಗಿ ನಾಶಗೊಳಿಸಲ್ಪಟ್ಟವು, ಮತ್ತು ಆ ಕಟ್ಟಡಗಳ ಕಲ್ಲುಗಳಲ್ಲಿ ಅನೇಕ ಕಲ್ಲುಗಳು ಕ್ರಿ.ಶ. 70ರಲ್ಲಿ ಎಲ್ಲಿ ಬಿದ್ದಿದ್ದವೋ ಇಂದಿಗೂ ಅಲ್ಲಿಯೇ ಬಿದ್ದಿರುತ್ತವೆ. ಇನ್ನು ಕೆಲವು ಕಲ್ಲುಗಳಿ ನಿಸ್ಸಂಶಯವಾಗಿ ಹಳೇ ಯೆರೂಸಲೇಮನಲ್ಲಿ ಮನೆಗಳನ್ನು ಕಟ್ಟುವದಕ್ಕೆ ಬಳಸಿ ಕೊಳ್ಳಲಾಗಿರುತ್ತದೆ. ಕೆಲವು ಸಂದೇಹವಾದಿಗಳು ಯೆರೂಸಲೇಮಿನಲ್ಲಿ ದೇವಾಲಯೊಂದು ಇದ್ದಿರಲೇ ಇಲ್ಲ ಎಂದು ವಾದಿಸಿರುತ್ತಾರೆ, ಆದರೆ ಅವರು ಪ್ರಾಕ್ತನಶಾಸ್ತ್ರದ ಪುರಾವೆಗಳಿಂದ ತಪ್ಪು ಎಂದು ಸಾಭಿತುಪಡಿಸಲ್ಪಟ್ಟಿದ್ದಾರೆ.

ಪ್ರಾಕ್ತನಶಾಸ್ತ್ರವು ಬೈಬಲ್ ವಿದ್ಯಾರ್ಥಿಗೆ ಮತ್ತು ವೇದಪಂಡಿತರಿಗೆ ಒಂದು ದೊಡ್ಡ ಸಾಧನವಾಗಿರುತ್ತದೆ, ಆದರೆ ಅದು ದೇವರಲ್ಲಿ ಮತ್ತು ಆತನ ವಾಕ್ಯದಲ್ಲಿ ನಂಬಿಕೆಯನ್ನು ಹುಟ್ಟಿಸುವದರಲ್ಲಿ ಎಂದಿಗೂ ಸ್ವತಃ ಬೈಬಲ್ ಸ್ಥಾನವನ್ನು ಅದು ವಹಿಸಿಕೊಳ್ಳುವದಕ್ಕೆ ಸಾಧ್ಯವೇ ಇಲ್ಲ. ಅದು ಖಂಡಿತವಾಗಿಯೂ ನಂಬಿಕೆಗೆ ಪುರಾವೆಯನ್ನು ಅಂದಗೊಳಿಸ ಬಹುದು ಮತ್ತು ನಮ್ಮ ಬೈಬಲ್ ತಿಳುವಳಿಕೆಯನ್ನು ಪ್ರಕಾಶಿತಗೊಳಿಸಲು ಅನೇಕ ಆಸಕ್ತಿಕರ ವಾಸ್ತವಾಂಶಗಳನ್ನು ಒದಗಿಸಬಲ್ಲದು, ಆದರೆ ಅದು ಎಂದಿಗೂ ದೇವರು ಇದ್ದಾನೆ, ಕ್ರಿಸ್ತನು ಕನ್ಯೆಯಲ್ಲಿ ಹುಟ್ಟಿದವನು, ಅಥವಾ ಆತನು ಸತ್ತವರೊಳಗಿಂದ ಎದ್ದುಬಂದನು ಎಂಬವುಗಳನ್ನು ಸತ್ಯವೆಂದು ಸಾಭಿತುಪಡಿಸುವದಕ್ಕಾಗಲಿ ಅಥವಾ ಸುಳ್ಳೆಂದು ನಿರೂಪಿಸುವದಕ್ಕಾಗಲಿ ಎಂದಿಗೂ ಸಾಧ್ಯವಿಲ್ಲ. ಉತ್ಖನನಲ್ಲಿ ಹೆಚ್ಚು ಹಸ್ತಕೃತಿಗಳು ಅಥವಾ ಸಾಧನಗಳು ಕಂಡುಹಿಡಿಯಲ್ಪಟ್ಟಂತೆ ಬೈಬಲಿನ ಐತಿಹಾಸಿಕ ವಿಶ್ವಾಸರ್ಹತೆಯು ಪುನಃ ಪುನಃ ಸಾಭಿತುಪಡಿಸಲ್ಪಡುವದು. ಅದು ಗತಕಾಲದಲ್ಲಿ ಎಷ್ಟೊಂದು ಸಾರಿ ಸಂಭವಿಸಿರುತ್ತದೆಂದರೆ ಏಕೆ ಯಾವದೇ ಬುದ್ಧಿವಂತ ವಾಚಕನು ಬೈಬಲನ್ನು ಸಂಶಯಿಸುವನೆಂದು ನಾನು ಚಕಿತಗೊಳ್ಳುತ್ತೇನೆ. ಉದಾಹರಣೆಗೆ, ಬೈಬಲ್ ದೀರ್ಘಕಾಲದ ಹಿಂದೆ ಇದ್ದ ಪಿಲಾತನ ಬಗ್ಗೆ ಹೇಳಿತು, ಆದರೆ ಪ್ರಾಕ್ತನಶಾಸ್ತ್ರವು 1961ರಲ್ಲಿ ಕೈಸರೈನ ಪಳೆಯುಳಿಕೆಗಳಲ್ಲಿನ ಒಂದು ಕಲ್ಲಿನ ಮೇಲೆ ಆತನ ಹೆಸರು ಕೆತ್ತಲ್ಪಟ್ಟಿರುವದು ಸಿಕ್ಕುವ ತನಕ ಆತನು ಐತಿಹಾಸಿಕವಾಗಿ ಇದ್ದನೆಂಬುದನ್ನು ದೃಢೀಕರಿಸಿರಲಿಲ್ಲ. ಅಂಥ ಕಂಡು ಹಿಡಿಯುವಿಕೆಯು ನಂಬಿಕೆಯನ್ನು ಸೃಷ್ಟಿಸುವದಿಲ್ಲ, ಆದರೆ ಅದು ಒಬ್ಬ ವಿಶ್ವಾಸಿಯಲ್ಲಿ ಒಂದು ದೊಡ್ಡ ಆದರಣೆ ಮತ್ತು ಉತ್ಸಾಹವನ್ನು ಎಬ್ಬಿಸಬಹುದಾಗಿದೆ.

---

## ಅಡಿಟಿಪ್ಪಣಿಗಳು

[1]"'ತಿರುಳು' ಎಂಬ ಪದವು [KJV] κεφάλαιος (*kephalaios*) ಎಂಬುದರ ಅನುವಾದವಾಗಿರುತ್ತದೆ, ಅದರರ್ಥವು 'ಮುಖ್ಯ ಅಂಶ' ಎಂದಾಗಿರುತ್ತದೆ. ಅದು ಮುಂಚೆ ಹೇಳಲ್ಪಟ್ಟಿದ್ದರ ತಿರುಳನ್ನು ಸೂಚಿಸುವದಿಲ್ಲ, ಆದರೆ

ಮುಂದೆ ಬರಲಿರುವದರ ಮುಖ್ಯ ಅಂಶವನ್ನು ಸೂಚಿಸುತ್ತದೆ" (Kenneth Samuel Wuest, *Hebrews in the Greek New Testament for the English Reader* [Grand Rapids, Mich.: Wm. B. Eerdmans Publishing Co., 1951], 140). [2]Gareth L. Reese, *A Critical and Exegetical Commentary on the Epistle to the Hebrews* (Moberly, Mo.: Scripture Exposition Books, 1992), 125, n. 5. [3]ಇದು ಸ್ವಲ್ಪದರ ಮಟ್ಟಿಗೆ ನಿಜವಾಗಿರಬಹುದು, ಅದರೆ ದೇವರು ಆಗಲೂ ಕಾಯಫನನ್ನು ತನ್ನ ಪ್ರತಿನಿಧಿಯಾಗಿ ಪರಿಗಣಿಸಿರುತ್ತಿದ್ದನು, ಯಾಕೆಂದರೆ ಪವಿತ್ರಾತ್ಮನು ಕನಿಷ್ಠ ಒಂದು ಸಂದರ್ಭದಲ್ಲಿ ಆತನ ಮೂಲಕವಾಗಿ ಪ್ರವಾದನಾತ್ಮಕವಾಗಿ ಮಾತಾಡಿದ್ದನು (ಯೋಹಾನ 11:47-53). [4]Robert Milligan, *A Commentary on the Epistle to the Hebrews,* New Testament Commentaries (Cincinnati: Chase and Hall, 1876; reprint, Nashville: Gospel Advocate Co., 1975), 276 - 80. [5]Donald Guthrie, *The Letter to the Hebrews: An Introduction and Commentary*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1983), 172. [6]F. F. Bruce, *The Epistle to the Hebrews,* The New International Commentary on the New Testament (Grand Rapids, Mich.: Wm. B. Eerdmans Publishing Co., 1964), 164-65. [7]Neil R. Lightfoot, *Everyone's Guide to Hebrews* (Grand Rapids, Mich.: Baker Books, 2002), 105. [8]ಪೌಲನು ರೋಮಾ 6:17, 18ರಲ್ಲಿ τύπος (*tupos*) ಎಂಬ ಪದವನ್ನು ಪಾಪದಿಂದ ತಪ್ಪಿಸಿಕೊಳ್ಳುವದಕ್ಕೆ ವಿಧೇಯವಾಗಬೇಕಾದ ಸಂಗತಿಯಾಗಿ ಬಳಸಿದನು. ಅಲ್ಲಿ "ಮಾದರಿ" ಎಂಬುದು ದೀಕ್ಷಾಸ್ನಾನದಲ್ಲಿ ವಿಧೇಯವಾಗುವದನ್ನು ಸೂಚಿಸತಕ್ಕದ್ದು (6:3, 4), ಅದು ನಮ್ಮ ವಿಧೇಯತೆಯಲ್ಲಿ ಪುನರಭಿನಯಿಸಲ್ಪಡುವ ಕ್ರಿಸ್ತನ ಮರಣ, ಹೂಣಲ್ಪಡುವಿಕೆ, ಮತ್ತು ಪುನರುತ್ಥಾನಗಳ ಒಂದು "ಕ್ರಮ" ಆಗಿರುತ್ತದೆ. [9]James Burton Coffman ಹೊಸ ಒಡಂಬಡಿಕೆಯ ಅಡಿಯಲ್ಲಿ ದೇವರ ಸೇವೆಯನ್ನು ಹೇಗೆ ಮಾಡಬೇಕೆಂಬ ಕುರಿತು ಆತನ ಉಪದೇಶದ ಒಂದು "ಮಾದರಿ" ಎಂಬ ಯೋಚನೆಯ ಮೇಲೆ ಮೂರು-ಪುಟಗಳ ಚರ್ಚೆಯೊಂದನ್ನು ಕೊಡುತ್ತಾನೆ. ಕ್ರಿಸ್ತನಿಗೆ ಪರಿವರ್ತನೆಗೊಳ್ಳುವದರಲ್ಲಿ ವಿಧೇಯತೆಯ ಕ್ರಿಯೆಗಳಿಗಾಗಿ ದೇವರು ಒಂದು ಮಾದರಿಯನ್ನು ಹೊಂದಿದ್ದು, ಅದರಲ್ಲಿ ಪ್ರತಿಯೊಬ್ಬ ಪರಿವರ್ತನೆಗಾರನು ಒಂದೇ ನಿಯಮಗಳಿಗೆ ಅಥವಾ "ರಕ್ಷಣೆಯ ಯೋಜನೆಗೆ" ವಿಧೇಯನಾಗಬೇಕಿರುತ್ತದೆ ಎಂದು ಆತನು ಅಪೊಸ್ತಲರ ಕೃತ್ಯಗಳ ಪುಸ್ತಕದಿಂದ ವಾದಿಸಿದನು. ಆತನು ಇನ್ನು ತರ್ಕಿಸುತ್ತಾ ದೇವರನ್ನು ಆರಾಧಿಸುವದಕ್ಕೆ ಶಾಸ್ತ್ರಗಳು ನಿರ್ದಿಷ್ಟವಾದ ದಾರಿಯನ್ನು ತಿಳಿಸುತ್ತವೆಂದು ಹೇಳಿದನು. ಎಲ್ಲಕ್ಕಿಂತ ಮೇಲಾಗಿ, ಕ್ರೈಸ್ತ ಜೀವಿತವನ್ನು ಹೇಗೆ ಜೀವಿಸಬೇಕೆಂಬುದಕ್ಕೆ ಒಂದು ಮಾದರಿಯು ಇರುತ್ತದೆಂದು ಆತನು ತೋರಿಸಿ ಕೊಡುತ್ತಾನೆ. (James Burton Coffman, *Commentary on Hebrews* [Austin, Tex.: Firm Foundation Publishing House, 1971], 170-73.) [10]Jimmy Allen, *Survey of Hebrews*, 2d ed (Searcy, Ark.: by the author, 1984), 89.

[11]Neil R. Lightfoot, *Jesus Christ Today: A Commentary on the Book of Hebrews* (Grand Rapids, Mich.: Baker Book House, 1976), 156. [12]Ibid. [13]Philo *Life of Moses*, II 15. [14]Bruce, 167. [15]"ಹೊಸ" ಎಂಬುದಕ್ಕಿರುವ ಪದದ (καινός, *kainos*) ಅರ್ಥವು "ಒಂದು ಹೊಚ್ಚ ಹೊಸ ವಿಧವಾದದ್ದು" ಎಂದಾಗಿರುತ್ತದೆ. [16]Milligan, 290-91ರಿಂದ ಆಯ್ದುಕೊಳ್ಳಲ್ಪಟ್ಟಿದ್ದು. [17]Guthrie, 175. [18]Bruce, 173. [19]Craig R. Koester, *Hebrews: A New Translation with Introduction and Commentary*, The Anchor Bible, vol. 36 (New York: Doubleday, 2001), 386-87. [20]Reese, 135, n. 42.

[21]Lightfoot, *Jesus Christ Today*, 160. [22]Warren W. Wiersbe, *Be Confident: An Expository Study of the Epistle to the Hebrews* (Wheaton, Ill.: Victor Books, 1982), 93. [23]Raymond Brown, *The Message of Hebrews: Christ Above All,* The Bible Speaks Today (Downers Grove, Ill.: Inter-Varsity Press, 1982), 142. [24]ಈ ಯೋಚನೆಯು Ray C. Stedman, *Hebrews*, The IVP New Testament Commentary Series (Downers Grove, Ill.: InterVarsity Press, 1992), 87 ರಿಂದ ಆಯ್ದುಕೊಳ್ಳಲ್ಪಟ್ಟಿದ್ದು. [25]ಈ ಕೆಳಗಿನದು Brown, 150-51ರಿಂದ ಆಯ್ದುಕೊಳ್ಳಲ್ಪಟ್ಟಿದ್ದು. [26]ಈ ಕೆಳಗಿನದು Lightfoot, *Everyone's Guide to Hebrews*, 108-11 51ರಿಂದ ಆಯ್ದುಕೊಳ್ಳಲ್ಪಟ್ಟಿದ್ದು. [27]Hugo McCord, *Fifty Years of Lectures* (Atwood, Tenn.: Privately printed, n.d.), 183 51ರಿಂದ ಆಯ್ದುಕೊಳ್ಳಲ್ಪಟ್ಟಿದ್ದು. [28]Arthur W. Pink, *An Exposition of Hebrews* (Grand Rapids, Mich.: Baker Book House, 1954), 436.